Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–50 | ಡಿಸೆಂಬರ್ 9–15, 2024 | ಪುಟ 16 | ರೂ.10/–

Volume-18 | Issue-50 | December 9-15, 2024 | Pages:16 | Price: 10/-



ಬಾಂಗ್ಲಾ-ಭಾರತ ನಡುವೆ ಒಡಕುಂಟು ಮಾಡುವ ಕೋಮುವಾದ



ಬೆಮೆಲ್ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ: ಸಂಧಾನ ಬದ್ಧತೆಯ ಭರವಸೆ

ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ನೌಕರರಾಗಿ ಪರಿಗಣಿಸಲು ಹೈಕೋರ್ಟ್ ಆದೇಶ

ಬಿಜೆಪಿ ಅಪ್ಪಿಕೊಳ್ಳುವ ಪಕ್ಷಗಳ ಭವಿಷ್ಯ ಏನು?

ಜೀವ ತೆಗೆದ ಜಿಲ್ಲಾಸ್ಪತ್ರೆ ಬಾಣಂತಿಯರ ಸಾವಿನ ಕೂಪ

ಯುರೋಪಿನ ಸಾಗರ ಸಾಹಸಗಳು, ವಿಜ್ಞಾನದ ನೆಗೆತ ಮತ್ತು ಭಾರತದ ಜಾತಿ ಬದ್ಧತೆ

ಭಾಗ 8

ಜಿ.ಎನ್. ನಾಗರಾಜ್



ಜಾತಿಬದ್ಧ ಮನುಸ್ಮೃತಿ ಕಟ್ಟಳೆಯ ಸಾಮಾಜಿಕ ರಚನೆಯ ಕಾರಣ ಹದಿನಾರನೇ ಶತಮಾನಕ್ಕೆ ಮೊದಲು, ಯುರೋಪಿನ ವಿಜ್ಞಾನ, ತಂತ್ರಜ್ಞಾನ, ಉತ್ಪಾದನೆಗಳ ಗುಣಮಟ್ಟಗಳಿಗೆ ಸವಾಲು ಹಾಕುತ್ತಿದ್ದ ಭಾರತ ಶತಮಾನಗಳ ಕಾಲ ಹಿಂದೆ ಬಿದ್ದಿತು.

ವಾಸ್ಕೊಡ ಗಾಮಾ ಭಾರತದ ಕ್ಯಾಲಿಕಟ್ನ ಕರಾವಳಿಯಲ್ಲಿ ಕಾಲಿಟ್ಟ ಆ ದಿನ, 1498 ಮೇ 20 ಭಾರತದ ಇತಿಹಾಸವನ್ನು ಮಾತ್ರವಲ್ಲ ವಿಶ್ವದ ಇತಿಹಾಸವನ್ನೂ ಬದಲಾಯಿಸಿತು. ಕೊಲಂಬಸ್ 1492 ರಲ್ಲಿ ಅಮೇರಿಕ ಖಂಡದ ಬಳಿಯ ಬಹಾಮ ದ್ವೀಪವನ್ನು ತಲುಪಿದ್ದು ಜಗತ್ತಿನ ಇತಿಹಾಸವನ್ನು ಬದಲಾಯಿಸಿದ ಮತ್ತೊಂದು ಸಾಹಸ. ಈ ಸಾಗರ ಮಾರ್ಗ ಶೋಧಗಳು ಜಗತ್ತಿನ ಬಗೆಗಿನ ಕಲ್ಪನೆಯನ್ನು, ಅರಿವನ್ನು ಮಾತ್ರವಲ್ಲ, ಜಗತ್ತಿನ ಇತಿಹಾಸವನ್ನೇ ಹಿಂದೆಂದೂ ಇಲ್ಲದಂತೆ ಕ್ರಾಂತಿಕಾರಕವಾಗಿ ಬದಲಾಯಿಸಿದವು. ಪ್ರತ್ಯೇಕ ಪ್ರತ್ಯೇಕ ಘಟಕಗಳಾಗಿ ತಮ್ಮ ತಮ್ಮೊಳಗೇ ಮುಳುಗಿದ್ದ ದೇಶ, ಪ್ರದೇಶಗಳನ್ನು ವಿಶ್ವವಾಗಿ ರೂಪಿಸಿತು. ವಿಶ್ವದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಮಹತ್ತರ ಬದಲಾವಣೆ ತಂದ ಸಾಹಸಗಳು ಇವು.

ಭಾರತದ ಬಂಡವಾಳದ ಬೆಳವಣಿಗೆಯ ಅಧ್ಯಯನದ ಸಂದರ್ಭದಲ್ಲಿ ಸಾಗರ ಸಾಹಸಗಳ ಪ್ರಸಂಗವೇಕೆ ಎಂದು ಕೇಳಬಹುದು. ಅದನ್ನು ಬ್ರಿಟಿಷ್ ಬಂಡವಾಳದ ಬೆಳವಣಿಗೆಗೆ ದೊರೆತ ಹಲವು ಅವಕಾಶಗಳು ಹಾಗೂ ರೂಪಿಸಿಕೊಂಡ ಹೊಸ ವಿಧಾನಗಳ ಜೊತೆ ತುಲನೆ ಮಾಡುವುದು ಭಾರತದ ಬಂಡವಾಳದ ಮಿತಿ ಮತ್ತು ಸಮಸ್ಯೆಗಳ ಸರಿಯಾದ ಅರಿವು ಮೂಡವುದಕ್ಕೆ ಸಹಾಯಕ ಎಂಬ ಕಾರಣಕ್ಕಾಗಿ. ಈ ಸಾಗರಯಾನಗಳು ಯುರೋಪಿನ ಬಂಡವಾಳದ ಬೆಳವಣಿಗೆಗೆ ವಿಶ್ವ ಮಾರುಕಟ್ಟೆಯನ್ನು ರೂಪಿಸಿಕೊಟ್ಟವು. ಇದು ಮೊದಲಿಗೆ ಯುರೋಪಿನ ನಾಲ್ಕಾರು ದೇಶಗಳ ಪ್ರಾಧಾನ್ಯತೆಗೆ ಸಹಾಯಕವಾದರೂ, ಅಂತಿಮವಾಗಿ ಬ್ರಿಟಿಷ್ ಬಂಡವಾಳಕ್ಕೇ ಅತಿ ದೊಡ್ಡ ಪ್ರಮಾಣದಲ್ಲಿ ಹೊಸದಾಗಿ ರೂಪುಗೊಂಡ ವಿಶ್ವ ಮಾರುಕಟ್ಟೆಯ ಪ್ರಯೋಜನ ದಕ್ಕಿದ್ದು. ಇದು ಬ್ರಿಟನ್ ನ ಬಂಡವಾಳಕ್ಕೆ ಒಂದು ದೊಡ್ಡ ನೆಗೆತವಾಯಿತು.



ಈ ವಾಸ್ಕೊಡ ಗಾಮಾ ಮತ್ತು ಕೊಲಂಬಸ್ ಇಬ್ಬರಿಗೂ ಕೂಡಾ ಭಾರತವನ್ನು ತಲುಪಬೇಕೆಂಬುದೇ ಗುರಿಯಾಗಿತ್ತು ಎಂಬುದು, ಅಂದಿನ ವಿಶ್ವದ ವ್ಯಾಪಾರ, ಉತ್ಪಾದನೆಗಳಲ್ಲಿ ಭಾರತದ ಪ್ರಮುಖ ಪಾತ್ರವನ್ನು ಸಾರುತ್ತದೆ. ಅಂದಿನ ಉತ್ಪಾದನೆ ಯುರೋಪಿನ ಉತ್ಪಾದನೆಗಳಿಗೆ ಹೆಗಲೆಣೆಯಾಗಿತ್ತು ಎಂಬುದನ್ನು ಸೂಚಿಸುತ್ತದೆ. ಪಶ್ಚಿಮ ಗೋಳದಲ್ಲಿ ಕಂಡ ನೆಲ ಪಶ್ಚಿಮ ಇಂಡಿಯಾ (ವೆಸ್ಟ್ ಇಂಡೀಸ್). ಅಲ್ಲಿಯ ಜನರು ಇಂಡಿಯನ್ನರಾಗಿ ಕೊಲಂಬಸ್ ಗೆ ಕಂಡರೆ, ಮುಂದೆ ಡಚ್ಚರು (ನೆದರ್ಲ್ಯಾಂಡ್ಸ್ ದೇಶದವರು) ಆಕ್ರಮಿಸಿಕೊಂಡ ದ್ವೀಪ ಸಮುಚ್ಚಯ ಪೂರ್ವ ಇಂಡಿಯಾ (ಈಸ್ಟ್ ಇಂಡೀಸ್) ಆಗಿ ಕಂಡಿತು. ಹೀಗೆ ಎಲ್ಲೆಲ್ಲಿಯೂ ಇಂಡಿಯಾವೇ ಕಾಣತೊಡಗಿತ್ತು. ಆದರೆ ಮುಂದೇನಾಯಿತು.

ಈಗ ನಮ್ಮ ಚರಿತ್ರೆಯಲ್ಲಿ ಒಂದೆರಡು ಪುಟಗಳಲ್ಲಿ ಈ ಮಹಾಯಾನಗಳ ವಿವರಣೆ ಟೇಕನ್ ಫಾರ್ ಗ್ರಾಂಟೆಡ್ ಘಟನೆ ಎಂಬಂತೆ ಕಾಣಬಹುದು. ಆದರೆ ಹಲವು ನೂರು ವರ್ಷಗಳ ಚಿಂತನೆ, ಪ್ರಯತ್ನಗಳು ಈ ಸಾಹಸಗಳ ಹಿಂದೆ ಇದ್ದುವು.

ಈ ಸಾಹಸ ಯಾನಗಳು ಕೇವಲ ಸಾಹಸ ಯಾನಗಳಾಗಿರಲಿಲ್ಲ. ವಾಣಿಜ್ಯ, ರಾಜಕೀಯ ವ್ಯವಹಾರಗಳಾಗಿದ್ದವು. ಹಲವು ಆಯಾಮಗಳನ್ನು ಹೊಂದಿದ್ದವು. ಒಂದನೆಯದಾಗಿ, ವಿಜ್ಞಾನಿಗಳು ಕುಶಲಕರ್ಮಿಗಳ ಜೊತೆ ಸೇರಿ ರೂಪಿಸಿದ ವಿಜ್ಞಾನದ ತಾತ್ವಿಕ ಬೆಳವಣಿಗೆಗಳು ಮತ್ತು ಅವುಗಳ ಪರಿಣಾಮಕಾರಿ ಪ್ರಾಯೋಗಿಕ ಅನ್ವಯ, ಎರಡನೆಯದಾಗಿ ಆಯಾ ದೇಶಗಳ ಬಂಡವಾಳದ ಹೂಡಿಕೆ ಮತ್ತು ಅತಿ ಲಾಭದ ನಿರೀಕ್ಷೆ, ಮೂರನೆಯದಾಗಿ ಸಾಗರೋತ್ತರ ವಾಣಿಜ್ಯ ಉದ್ಯಮ, ನಾಲ್ಕನೆಯದಾಗಿ ಸೈನಿಕ ಧಾಳಿ ಮತ್ತು ಆಕ್ರಮಣಗಳ ಪ್ರಯತ್ನಗಳೂ ಆಗಿದ್ದವು.

ಖಾಲಿ ಖಾಲಿ ಭೂಪಟಗಳು, ಹೊಸ ಸಾಗರ ನಕ್ಷೆಗಳು

ಜಂಬೂ ದ್ವೀಪೇ ಭರತ ವರ್ಷೇ, ಭರತ ಖಂಡೇ ದಕ್ಷಿಣ ಭಾಗೇ ಎಂದು ಈಗಲೂ ಮಂತ್ರಗಳಲ್ಲಿ ಉಚ್ಚರಿಸುವುದನ್ನು ಕೇಳಿರಬಹುದು. ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಇದ್ದ ವಿಶ್ವದ ಕಲ್ಪನೆ ಸಪ್ತ ಸಾಗರ, ಸಪ್ತ ದ್ವೀಪಗಳದು. ಸಿಹಿ ನೀರ ಸಾಗರ (ಸ್ವದು ಜಲ ಸಾಗರ), ಉಪ್ಪು ನೀರ ಸಾಗರ (ಲವಣಾಬ್ಧಿ), ಹಾಲಿನ ಸಾಗರ (ಕ್ಷೀರ ಸಾಗರ), ಮೊಸರಿನ ಸಾಗರ (ದಧಿ ಸಾಗರ), ಕಬ್ಬಿನ ಹಾಲಿನ ಸಾಗರ (ಇಕ್ಷು ಸಾಗರ), ಹೆಂಡದ ಸಾಗರ (ಸುರಾ ಸಾಗರ), ಗೆಲ್ಲಲಾಗದ ಸಾಗರ (ಅಜೇಯ ಸಾಗರ) ಇಂತಹ ಸಾಗರಗಳ ಕಲ್ಪನೆ ಅಂದಿನ ಮಾನವರ ಅದ್ಭುತ ಕನಸಿನ ಕಲ್ಪನೆಯ ಕೂಸು. ಹಾಗೆಯೆ ಈ ಸಾಗರಗಳಲ್ಲಿನ ಸಪ್ತ ದ್ವೀಪಗಳಲ್ಲಿ ಮಾನವರು, ದಾನವರು, ದೇವತೆಗಳು, ನಾಗರು, ಕಿನ್ನರ ಕಿಂಪುರಷರು, ಗಂಧರ್ವರುಗಳು ವಾಸಿಸುತ್ತಾರೆ ಎಂಬ ಕಲ್ಪನೆ. ಹಾಗೆಯೇ ಯುರೋಪಿನಲ್ಲಿ ಅವರದೇ ಆದ ಒಂದು ಕ್ರಿಸ್ತ ಭೂಪಟವೂ ಇತ್ತು. ಅವರಿಗೆ ಅಂದು ಗೊತ್ತಿದ್ದ ಪ್ರದೇಶಗಳಾದ ಯುರೋಪು, ಆಫ್ರಿಕಾ, ಏಷ್ಯಾಗಳ ಬಗ್ಗೆ ಅವರದೇ ಆದ ಕಲ್ಪನೆಗಳು. ಅವರ ಕಲ್ಪನೆಯ ಭಾರತ ದೈತ್ಯರ ನೆಲೆ, ನಾಯಿ ತಲೆಯ ಮನುಷ್ಯರು, ಹಿಮ್ಮುಖ ಪಾದಗಳಿರುವವರು. ತಲೆಯೇ ಇಲ್ಲದೆ ಎದೆಯ ಮೇಲೆ ಕಣ್ಣು, ಮೂಗು, ಬಾಯಿ ಉಳ್ಳವರು ವಾಸಿಸುವ ಸ್ಥಳ. ಇಡೀ ಭೂಪಟವನ್ನು ಇಂತಹ ಕಲ್ಪನೆಗಳಿಂದ ತುಂಬಿಸಿದ್ದರು. ಇಂತಹ ಪೌರಾಣಿಕ ಕಲ್ಪನೆಗಳು ವಿಶ್ವದಾದ್ಯಂತ ಪ್ರಚಲಿತವಾಗಿದ್ದವು.

ಆದರೆ ವಿವಿಧ ಪ್ರದೇಶಗಳಿಗೆ ವ್ಯಾಪಾರ ವ್ಯವಹಾರ ಬೆಳೆದಂತೆ ಪ್ರವಾಸಿಗಳು ಈ ಪ್ರದೇಶಗಳಿಗೆ ಭೇಟಿ ಕೊಟ್ಟರು. ಅವರಲ್ಲಿ ಹಲವರು ಭಾರತಕ್ಕೂ ಬಂದಿದ್ದಾರೆ. ಅಂದಿನ ಅವರವರ ತಿಳುವಳಿಕೆಗನುಗುಣವಾಗಿ ಪ್ರವಾಸ ಕಥನಗಳನ್ನೂ ಬರೆದಿದ್ದಾರೆ. ಅದು ನಮ್ಮ ದೇಶದ ಇತಿಹಾಸ ಕಟ್ಟಿಕೊಳ್ಳಲು ಮುಖ್ಯ ಆಕರಗಳಾಗಿವೆ. ಹಾಗೆಯೇ ಯುರೋಪಿನ ಪ್ರವಾದಿಗಳು ವಿವಿಧ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿಯ ಬಗ್ಗೆ ಬರೆದಿದ್ದಾರೆ. ಇಂತಹ ಪ್ರವಾಸ ಕಥನಗಳು ಯುರೋಪಿನಲ್ಲಿ ವಿವಿಧ ಪ್ರದೇಶಗಳ ಬಗ್ಗೆ ಬಹಳ ಕುತೂಹಲ ಹುಟ್ಟಿಸಿದವು. ಮಾರ್ಕೋಪೋಲೊ ಎಂಬ ಪ್ರವಾಸಿ ಅತಿ ಪ್ರಸಿದ್ಧ ಅತ್ಯಂತ ದೀರ್ಘ ಭೂ ಪ್ರಯಾಣ ಮಾಡಿ, ಚೀನಾದ ಹಲವು ಭಾಗಗಳನ್ನು ನೋಡಿದವನು ಸಾಗರ ಪ್ರಯಾಣದ ಮೂಲಕ ವಾಪಸ್ಸಾದ. ಅವನು ಬರೆದ ಪುಸ್ತಕ "ದಿ ಡಿಸ್ಕ್ರಿಪ್ಷನ್ ಆಫ್ ದಿ ವರ್ಲ್ಡ್" (ವಿಶ್ವದ ವಿವರಣೆ) ಬಹು ಪ್ರಸಿದ್ಧವಾಯಿತು.



ಈ ಪ್ರವಾಸ ಕಥನಗಳು ವಿವಿಧ ಪ್ರದೇಶಗಳ ಬಗೆಗೆ ಯುರೋಪಿನ ತಿಳುವಳಿಕೆ ಹೆಚ್ಚಿಸಿದವು. ಆದರೆ ಬೈಬಲ್ ಮೊದಲಾದ ಧಾರ್ಮಿಕ ಗ್ರಂಥಗಳ ಕಲ್ಪನೆಗಳ ಭೂಪಟಗಳು ಸತ್ಯವಲ್ಲ ಎಂಬುದೂ ತಿಳಿಯುತ್ತಾ ಹೋಯಿತು.

ಇವು ಒಂದು ಕಡೆ ಹಲವರಿಗೆ ಈ ಪ್ರದೇಶಗಳಿಗೆ ಹೋಗಬೇಕೆಂಬ ಕಾತರ ಹುಟ್ಟಿಸಿದರೆ, ಮತ್ತೆ ಹಲವರಿಗೆ ವ್ಯಾಪಾರೀ ಲಾಭ ಗಳಿಕೆಯ ಆತುರ. ಈ ಎರಡೂ ಸೇರಿ ವಿವಿಧ ದೇಶಗಳಿಗೆ ಪ್ರವಾಸ ಹೋಗಬೇಕಾದರೆ ಸಾಧ್ಯವಾದಷ್ಟೂ ಕರಾರುವಾಕ್ಕಾದ ನಕ್ಷೆಗಳು ಬೇಕಾದವು. ಇಂತಹ ಪ್ರವಾಸಗಳು ಹೆಚ್ಚಿದಂತೆಲ್ಲಾ ವಿಶ್ವದ ಹೊಸ ಹೊಸ ಭೂಪಟಗಳು ರಚಿಸಲ್ಪಟ್ಟವು. ಅದರ ಜೊತೆಯಲ್ಲಿಯೇ ಹಲವು ಪ್ರದೇಶಗಳ ಬಗೆಗೆ ಏನೂ ಗೊತ್ತಿಲ್ಲವೆಂಬುದೂ ತಿಳಿಯಿತು. ಹಾಗೇ ಗೊತ್ತಿಲ್ಲವೆಂದು ಗೊತ್ತಾದ ಭಾಗಗಳನ್ನು ಖಾಲಿ (ಬ್ಲಾಂಕ್) ಬಿಟ್ಟರು. ಎಲ್ಲ ಗೊತ್ತಿದೆ ಎಂಬ ಧಾರ್ಮಿಕ ಸರ್ವಜ್ಞತ್ವಕ್ಕಿಂತ ನಮಗಿದು ಗೊತ್ತಿಲ್ಲ ಎಂಬುದು ಎಷ್ಟೊಂದು ವಾಸ್ತವಿಕ ದೃಷ್ಟಿ ಅಲ್ಲವೇ. ವೈಜ್ಞಾನಿಕ ಅರಿವಿನ ಅಡಿಪಾಯವೂ ಇದೇ ಅಲ್ಲವೇ! ಹೀಗೆ ಖಾಲಿ ಖಾಲಿ ಇದ್ದ ಭೂಪಟಗಳು ವೈಜ್ಞಾನಿಕತೆಯ ಆರಂಭದ ಸಂಕೇತಗಳಾದವು.

ಯಾವುದೇ ಸಂದರ್ಭದಲ್ಲಿ ಹೀಗೆ ಖಾಲಿ ಇದ್ದರೆ ಅದು ಮಾನವರ ಸಾಮರ್ಥ್ಯ, ಸಾಹಸ ಪ್ರವೃತ್ತಿಗಳಿಗೊಂದು ಸವಾಲಲ್ಲವೇ? ಬನ್ನಿ, ಈ ಖಾಲಿ ಜಾಗ ತುಂಬಿ ಎಂಬ ಆಹ್ವಾನವಲ್ಲವೇ?

ಹೆಚ್ಚುತ್ತಾ ಹೋದ ಪ್ರವಾಸಗಳಿಂದ ಪ್ರವಾಸ ಕಥನಗಳು ಮಾತ್ರವಲ್ಲ, ಮತ್ತೊಂದು ವಿಧದ ಅಮೂಲ್ಯ ಆಕರಗಳೂ ದೊರೆತವು. ಸಾಗರ ಪ್ರವಾಸ ಕೈಗೊಂಡ ಹಡಗುಗಳ ಕಫ್ತಾನರು ತಪ್ಪದೆ ಬರೆದಿಡುತ್ತಿದ್ದ ದಿನಚರಿಗಳು. ಕೆಲವೊಮ್ಮೆ ಇತರ ನಾವಿಕರು ಕೂಡಾ ಬರೆದಿಡುತ್ತಿದ್ದ ಟಿಪ್ಪಣಿಗಳು. ಇವುಗಳು ಆರಂಭದ ಬಂದರಿನಿಂದ ಆರಂಭಿಸಿ ಯಾವ ದಿಕ್ಕುಗಳಲ್ಲಿ ಪ್ರವಾಸ ಮಾಡಿದರು, ಸಾಗರದ ಅಲೆಗಳು, ಚಂಡಮಾರುತಗಳು ಮುಂತಾದ ಅಂಶಗಳು, ಅವರಿಗೆ ತಿಳಿದುಕೊಳ್ಳಲು ಸಾಧ್ಯವಾದಂತೆ ಸಾಗರದ ಆಳ, ಈ ಪ್ರವಾಸದಲ್ಲಿ ಎದುರಾದ ಇತರ ಹಡಗುಗಳು, ಕಡಲ್ಗಳ್ಳರ ಧಾಳಿಗಳು, ಎಲ್ಲಿ ಭೂಮಿಯನ್ನು ತಲುಪಿದರು, ಅಲ್ಲಿನ ಬಂದರುಗಳ ಸ್ವರೂಪ, ಅಲ್ಲಿಯ ಹಳ್ಳಿ, ಪಟ್ಟಣಗಳು ಇತ್ಯಾದಿ ಬಹು ಮುಖ್ಯ ಸಂಗತಿಗಳು ಇವುಗಳಲ್ಲಿ ದಾಖಲಾದವು. ಈ ದಿನಚರಿ, ಟಿಪ್ಪಣಿಗಳು ಮುಂದೆ ಸಾಗರಯಾನ ಕೈಗೊಳ್ಳುವ ಹಡಗುಗಳ ನಾವಿಕರಿಗೆ, ಮಾಲೀಕರಿಗೆ ಅಮೂಲ್ಯ ಮಾಹಿತಿಗಳಲ್ಲವೇ ಇವು. ಈ ಮಾಹಿತಿಗಳಿಂದ ಸಾಗರ ಪಟಗಳು ರಚಿಸಲ್ಪಟ್ಟವು. ಕಾಲಕಳೆದಂತೆ ಅವು ಹೆಚ್ಚು ನಿಖರಗೊಳ್ಳುತ್ತಾ ಹೋದವು.

ಈ ರೀತಿಯ ಹೊಸ ಭೂಪಟಗಳು, ಸಾಗರ ಪಟಗಳು ಭೂಗೋಳ ಶಾಸ್ತ್ರದಲ್ಲಿ ಟಾಲೆಮಿಯ ಸಿದ್ಧಾಂತಗಳು ಮತ್ತು ಭೂಪಟಗಳ ಗಣನೀಯ ಮಾರ್ಪಾಡಿಗೆ ಕಾರಣವಾದವು. ಭೂಮಿಯ ಹತ್ತಿರದಲ್ಲಿ ಸಾಗರದ ಆಳ ಕಡಿಮೆ, ಮುಂದೆ ಸಾಗುತ್ತಾ ಅದು ಆಳವಾಗುತ್ತಾ ಹೋಗುತ್ತದೆ, ನಂತರ ಇದ್ದಕ್ಕಿದ್ದಂತೆ ದಿಢೀರಾಗಿ ಕುಸಿಯುತ್ತದೆ. ಇದರಿಂದ ಇಂದು ಕಾಂಟಿನೆಂಟಲ್ ಶೆಲ್ಫ ಎಂಬ ಸಾಗರ ತಳದ ಭೂಮಿಯ ಬಗ್ಗೆ ತಿಳುವಳಿಕೆ ಹೆಚ್ಚಾಯಿತು.

ವೈಜ್ಞಾನಿಕ ಭೂಗೋಳ, ಭೂ ವಿಜ್ಞಾನದ ಅಧ್ಯಯನ ಆರಂಭವಾಯಿತು. ಮರ್ಕೆಟರ್ ಎಂಬ ನಕ್ಷೆಗಾರ 24 ಪುಟಗಳ ನಕ್ಷೆಯನ್ನು ಸಿದ್ಧಪಡಿಸಿದ. ಈತ ನಕ್ಷೆಗಾರ ಮಾತ್ರವಲ್ಲದೆ ಮೋಜಣಿದಾರನೂ (ಭೂ ಸರ್ವೆಗಾರ) ಆಗಿದ್ದ ಖಗೋಳ ಶಾಸ್ತ್ರದ ಉಪಕರಣಗಳನ್ನು ತಯಾರಿಸುತ್ತಿದ್ದ. ಪ್ರಸಿದ್ಧ ಭೂಗೋಳ ಶಾಸ್ತ್ರಜ್ಞನೂ ಆಗಿ ಗೌರವ ಗಳಿಸಿದ. ಈಗ ನಾವೆಲ್ಲ ಅಭ್ಯಾಸ ಮಾಡುವ ಭೂಪಟಗಳ ಮೇಲಿನ ಅಕ್ಷಾಂಶ, ರೇಖಾಂಶಗಳು ಇವನ ಶೋಧನೆ. ಇದು ಗೊತ್ತು ಗುರಿ ತಿಳಿಯದೆ ಒದ್ದಾಡುತ್ತಿದ್ದ ಸಾಗರ ಯಾನಗಳಿಗೆ, ಯಾವುದೇ ದೂರ ಪ್ರಯಾಣಕ್ಕೆ ಎಂತಹ ದೊಡ್ಡ ಸಹಾಯ ಒದಗಿಸಿತು ಎಂಬುದನ್ನು ಊಹಿಸಿಕೊಳ್ಳಬಹುದು. ಹೀಗೆ ಭೂಗೋಳ ಶಾಸ್ತ್ರದಲ್ಲಿ ಇದೊಂದು ಕ್ರಾಂತಿಕಾರಕ ಮುನ್ನಡೆ.

ಪ್ರವಾಸ ಕಥನಗಳ ಪ್ರಯೋಜನ ಇಷ್ಟಕ್ಕೇ ಸೀಮಿತವಾಗಲಿಲ್ಲ. ವಿವಿಧ ಪ್ರದೇಶಗಳ ಸಾಮಾಜಿಕ ಜೀವನ, ಆಚರಣೆಗಳು, ಧರ್ಮ, ಸಂಸ್ಕೃತಿ, ಭಾಷೆಗಳ ಬಗ್ಗೆ ಆಸಕ್ತಿ ಬೆಳೆಸಿದವು. ಯುರೋಪಿನ ಸಮಾಜ ಮತ್ತು ಇತರ ಸಮಾಜಗಳನ್ನು ತುಲನಾತ್ಮಕವಾಗಿ ಗಮನಿಸುವ ಅಭ್ಯಾಸ ಬೆಳೆಸಿತು. ಯುರೋಪಿನ ಗಣನೀಯ ಭಾಗದ ವಿದ್ವಾಂಸರು ತಮ್ಮಷ್ಟೇ ಅಥವಾ ತಮಗಿಂತ ಉತ್ತಮ ಸಮಾಜಗಳೂ ಇವೆ ಎಂದು ಪರಿಗಣಿಸಲು ಕಾರಣವಾಯಿತು.

ಈ ಪ್ರವಾಸಗಳಲ್ಲಿ ಸಂಗ್ರಹಿಸಿದ ಸಸ್ಯ, ಪ್ರಾಣಿಗಳು ಯುರೋಪಿನ ಸಸ್ಯ ಸಂಗ್ರಹಾಲಯ, ಪ್ರಾಣಿ ಸಂಗ್ರಹಾಲಯಗಳನ್ನು ಸೇರಿದವು. ಇವುಗಳಿಂದ

ಪುಟ 4 ಕ್ಕೆ

ಸಂಪಾದಕೀಯ

ರಾಜ್ಯ ಸಹಕಾರ ರಂಗಕ್ಕೆ 'ನಬಾರ್ಡ್' ಸಾಲದ ಪ್ರಮಾಣ ಕಡಿತ ಕೃಷಿ ರಂಗಕ್ಕೆ-ರೈತರ ಬದುಕಿಗೆ ದೊಡ್ಡ ಆಘಾತ

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ರೈತರಿಗೆ ಸಾಲ ನೀಡುವ ಸಹಕಾರಿ ಸಂಸ್ಥೆಗಳಿಗೆ ರಿಯಾಯಿತಿ ಬಡ್ಡಿ ದರದಲ್ಲಿ ನೀಡುವ ಒಂದು ಸಾರ್ವಜನಿಕ ಬ್ಯಾಂಕ್. ನಬಾರ್ಡ್‌ನ ಸಾಲ ನೀತಿ, ನೀಡುವ ಸಾಲದ ಪ್ರಮಾಣ, ವಿಧಿಸುವ ಬಡ್ಡಿದರ ಎಲ್ಲ ವಿಷಯಗಳಲ್ಲಿ ಕೇಂದ್ರ ಸರಕಾರದ ಪಾತ್ರವು ನಿರ್ಣಾಯಕವಾದುದಾಗಿದೆ. ಸಂಪೂರ್ಣ ಜನವಿರೋಧಿ, ರೈತವಿರೋಧಿ ದಾರಿ ಹಿಡಿದಿರುವ ಕೇಂದ್ರ ಸರಕಾರವು ಈಗ ಕರ್ನಾಟಕ ರಾಜ್ಯದ ರೈತರ ಬದುಕಿನ ಮೇಲೆ ಮತ್ತೊಂದು ಬರೆ ಎಳೆದಿದೆ.

ಪ್ರಸಕ್ತ 2024-25ನೇ ಸಾಲಿಗೆ ನಬಾರ್ಡ್ ಕರ್ನಾಟಕ ರಾಜ್ಯಕ್ಕೆ ನೀಡಬೇಕಿರುವ ಸಾಲದ ಮೊತ್ತವನ್ನು ಶೇ. 58ರಷ್ಟು ಕಡಿತ ಮಾಡಲಾಗಿದೆ. ಜೊತೆಗೆ ರಿಯಾಯತಿ ಬಡ್ಡಿದರದಲ್ಲಿ ನೀಡಬೇಕಾದ ಸಾಲದ ಪ್ರಮಾಣವನ್ನು ಕಡಿಮೆ ಮಾಡಿ, ಉಳಿದ ಮೊತ್ತಕ್ಕೆ ಹೆಚ್ಚಿನ ಬಡ್ಡಿದರ ವಿಧಿಸಿರುವುದು ರಾಜ್ಯ ಕೃಷಿ ಕ್ಷೇತ್ರದ ಉಳಿವು ಮತ್ತು ರೈತರ ದೃಷ್ಟಿಯಿಂದ ಒಂದು ಮಾರಕವಾದ ಕ್ರಮವಾಗಿದೆ. ಹೀಗೆ ಸಾಲದ ಮೊತ್ತವನ್ನು ಕಡಿತಗೊಳಿಸಿದ್ದರಿಂದಾಗಿ ರಾಜ್ಯದಲ್ಲಿ ಕೃಷಿ ಸಾಲ ವಿತರಣೆಗೆ ಗಂಭೀರ ಹಣದ ಕೊರತೆ ಎದುರಾಗಿರುವುದು ಒಂದು ಆಘಾತಕಾರಿ ಬೆಳವಣಿಗೆ.

ರಾಜ್ಯ ಸರಕಾರವು ರೈತರಿಗೆ 2023-24ನೇ ಸಾಲಿನಲ್ಲಿ ಅಲ್ಪಾವಧಿ ಕೃಷಿ ಸಾಲವಾಗಿ ಒಟ್ಟು 22,077 ಕೋಟಿ ರೂ. ವಿತರಿಸಿದೆ ಎಂಬ ವರದಿಗಳಿವೆ. ಇಷ್ಟಾಗಿಯೂ ರಾಜ್ಯದಲ್ಲಿ ಅಗತ್ಯವುಳ್ಳ ರೈತರೆಲ್ಲರಿಗೂ ಸರಕಾರಿ ಬ್ಯಾಂಕ್ ಸಾಲದ ಸೌಲಭ್ಯ ದೊರೆಯುತ್ತಿಲ್ಲ. ರಾಜ್ಯ ಸರಕಾರವು 2024-25ನೇ ಸಾಲಿನಲ್ಲಿ 35.10 ಲಕ್ಷ ರೈತರಿಗೆ 25 ಸಾವಿರ ಕೋಟಿ ಅಲ್ಪಾವಧಿ ಕೃಷಿ ಸಾಲ ನೀಡುವ ಗುರಿ ನಗದಿಪಡಿಸಿಕೊಂಡಿದೆ. ಈ ಸಾಲ ನೀಡಲು ರೂ.22,902 ಕೋಟಿ ರೂಪಾಯಿಗಳಷ್ಟಾದರೂ ಬೇಕಾಗುತ್ತದೆ ಎಂದು ಅಂದಾಜಿಸಲಾಗಿತ್ತು. ರೈತರಿಗೆ ಕೃಷಿ ಸಾಲವನ್ನು ಸಮರ್ಪಕವಾಗಿ ವಿತರಿಸುವ ಉದ್ದೇಶದಿಂದ ಈ ಒಟ್ಟು ಸಾಲದಲ್ಲಿ ಶೇ. 60ರಷ್ಟು ಅಂದರೆ ರೂ. 13,742 ಕೋಟಿ ಅಲ್ಪಾವಧಿ ಕೃಷಿ ಸಾಲವನ್ನು ಮಂಜೂರು ಮಾಡುವಂತೆ ಕೋರಿ ನಬಾರ್ಡ್‌ಗೆ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮೂಲಕ ಕ್ರಮದಂತೆ ಪ್ರಸ್ತಾವ ಸಲ್ಲಿಸಿತ್ತು.

2023-24ನೇ ಸಾಲಿನಲ್ಲಿ ರಾಜ್ಯಕ್ಕೆ 4.5ರ 'ರಿಯಾಯಿತಿ ಬಡ್ಡಿ' ದರದಲ್ಲಿ 5,600 ಕೋಟಿ ರೂ. ಮಂಜೂರು ಮಾಡಿದ್ದ ನಬಾರ್ಡ್, ಪ್ರಸಕ್ತ 2024-25ನೇ ಸಾಲಿಗೆ 2,340 ರೂ. ಕೋಟಿ ಮಾತ್ರ ಮಂಜೂರು ಮಾಡಿದೆ. ಅಂದರೆ 2,240 ಕೋಟಿ ರೂಪಾಯಿಯು ಬರಿಯ ರಿಯಾಯಿತಿ ದರದ ಸಾಲದ ಬಾಬ್ತಿನಲ್ಲಿಯೇ ಕಡಿತವಾಗಿದೆ. ರಿಯಾಯತಿ ದರದ ಬಡ್ಡಿಯ ವಿಭಾಗದಲ್ಲಿಯೂ ಬಡ್ಡಿದರವು ಮೊದಲಿಗೆ ಅದು ಶೇ.1 ರಷ್ಟು ಇದ್ದದ್ದು ಈಗ 4.5 ಶೇಕಡಾಕ್ಕೆ ಏರಿಸಲಾಗಿದೆ.

ಕನಿಷ್ಠವೆಂದರೂ ರಾಜ್ಯ ಸರಕಾರದ ಯೋಜನೆಯ ಅಗತ್ಯಕ್ಕೆ ತಕ್ಕಂತೆ, ನಬಾರ್ಡ್ ಕರ್ನಾಟಕ ರಾಜ್ಯಕ್ಕೆ ರೂ.13,742 ಕೋಟಿ ಸಾಲ ಮಂಜೂರು ಮಾಡಬೇಕಿತ್ತು. ಆದರೆ ನಬಾರ್ಡ್ ಈ ಮೊತ್ತದಲ್ಲಿ 4,580 ಕೋಟಿ ರೂಪಾಯಿಗಳನ್ನು ಶೇ. 8ರ ದುಬಾರಿಯಾದ 'ಹೆಚ್ಚುವರಿ ಬಡ್ಡಿದರ'ದಲ್ಲಿ ನೀಡಿದೆ. ಅಂದರೆ ಒಟ್ಟಾರೆ ಸಾಲ ನೀಡಬೇಕಾದುದರಲ್ಲಿ, 6,822 ಕೋಟಿ ರೂ. ಮೊತ್ತವನ್ನು ಕಡಿತ ಮಾಡಲಾಗಿದೆ. ಇದೇನು ಸಣ್ಣ ಮೊತ್ತವಲ್ಲ. ಕಳೆದ ಎರಡು ಮೂರು ವರ್ಷಗಳಲ್ಲಿ ರಾಜ್ಯ ರೈತರು ಬರ, ಅತಿವೃಷ್ಟಿ ಮುಂತಾದ ವಿಕೋಪಗಳಿಗೆ ಸಿಲುಕಿ ನರಳಿದ್ದಾರೆ ಎಂಬ ಅಂಶವನ್ನು ಗಮನಕ್ಕೆ ತೆಗೆದುಕೊಂಡರೆ, ನಬಾರ್ಡ್ ಒದಗಿಸುವ ಸಾಲ ಸೌಲಭ್ಯ ಇನ್ನಷ್ಟು ಹೆಚ್ಚಾಗಬೇಕಿತ್ತು. ಆದರೆ ಹಾಗಾಗಿಲ್ಲ. ಇದು ರಾಜ್ಯದ ರೈತರ ಬದುಕಿನ ಮೇಲೆ, ಕೃಷಿರಂಗದ ಮೇಲೆ ಅತ್ಯಂತ ಕೆಟ್ಟ ರೀತಿಯ ಪ್ರಭಾವ ಬೀರುತ್ತದೆ.

ಇದಲ್ಲದೇ ನಬಾರ್ಡಿನ ಕ್ರಮದಿಂದ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿವೆ ಎಂಬ ಆತಂಕ ಎದುರಾಗಿದೆ. ಕೇಂದ್ರ ಸರಕಾರ ತನ್ನ ನೀತಿಯನ್ನು ಬದಲಿಸಿಕೊಳ್ಳುವಂತೆ ಎಲ್ಲರೂ ಸೇರಿ ಒತ್ತಾಯ ಮಾಡಬೇಕಿದೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ನವರು ಪ್ರಧಾನಿ ನರೇಂದ್ರ ಮೋದಿಯವರನ್ನು ಕಂಡು ರಾಜ್ಯದ ಪ್ರಮುಖ ಪ್ರಶ್ನೆಗಳ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಈಗಲಾದರೂ ಕೇಂದ್ರ ಸರಕಾರ ರಾಜ್ಯಕ್ಕೆ ನ್ಯಾಯ ಒದಗಿಸಲು ನಿರ್ಧರಿಸಬೇಕು.

ಜೀವ ತೆಗೆಯುವ ಜಿಲ್ಲಾ ಆಸ್ಪತ್ರೆ: ಬಾಣಂತಿಯರಿಗೆ ಸಾವಿನ ಕೂಪ

ಬಳ್ಳಾರಿಯ ಜಿಲ್ಲಾ ಆಸ್ಪತ್ರೆ (BIMS)ಯಲ್ಲಿ ಮತ್ತು ವಿಮ್ಸ್ ಆಸ್ಪತ್ರೆಯಲ್ಲಿ ಹೆರಿಗೆಯಾದ ನಂತರದಲ್ಲಿ ಐದು ಜನ ಬಾಣಂತಿಯರು ಸಾವನ್ನಪ್ಪಿದ್ದಾರೆ. ನವೆಂಬರ್ 9 ರಿಂದ 11ರ ವರೆಗೂ ಸಿಸೇರಿಯನ್ ಗೆ ಒಳಗಾಗಿದ್ದ ಲಲಿತಮ್ಮ ಮತ್ತು ನಂದಿನಿ ಎಂಬುವರು ಹೈಪರ್‌ಪಿಟಿಎಸ್ "ಸಿ" ರಿನಿವಲ್ ಸೆಪ್ಟಿಕ್ ಫೇಲ್ಯೂರ್ (ಮೂತ್ರಪಿಂಡ ವೈಫಲ್ಯ ಮತ್ತು ಬಹು ಅಂಗಾಂಗ ವೈಫಲ್ಯದಿಂದಾಗಿ) ಮೃತಪಟ್ಟಿದ್ದಾರೆ ಎಂದು ಅಲ್ಲಿನ ವೈದ್ಯಾಧಿಕಾರಿಗಳು ಸಬೂಬನ್ನು ಹೇಳುತ್ತಿದ್ದರೆ, ಇದೇ ಸಮಸ್ಯೆಯನ್ನು ಎದುರಿಸುತ್ತಿರುವ ಇವರನ್ನು ಜಿಲ್ಲಾ ಆಸ್ಪತ್ರೆಯಿಂದ ವಿಮ್ಸ್ ಗೆ ದಾಖಲಿಸಿದ್ದ ರೋಜಾ ಮತ್ತು ಮುಸ್ಕಾನ್ ಎಂಬುವರು ಸಹ ಮೃತಪಟ್ಟಿದ್ದಾರೆ. ಮಹಾಲಕ್ಷ್ಮಿ ಎಂಬ ಮಹಿಳೆ ವಿಮ್ಸ್ ಗೆ ಹೆರಿಗೆಗೆ ದಾಖಲಾಗಿದ್ದು ಅವರು ಸಾವನ್ನಪ್ಪಿದ್ದಾರೆ. ಅನಿಮಿಯಾ, ರಕ್ತಹೀನತೆಯಿಂದ ಮರಣ ಹೊಂದಿದ್ದಾರೆ ಎಂದು ವೈದ್ಯರು ಹೇಳುತ್ತಿದ್ದಾರೆ. ಇನ್ನೂ ಮೂವರನ್ನು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಬಗ್ಗೆ ಬಳ್ಳಾರಿ ಜಿಲ್ಲೆಯಲ್ಲಿ ವ್ಯಕ್ತವಾದ ತೀವ್ರ ಆಕ್ರೋಶಗಳ ಹಿನ್ನೆಲೆಯಲ್ಲಿ, ಐವಿ ದ್ರಾವಣ ನೀಡಿದ್ದರಲ್ಲಿ ವ್ಯತ್ಯಾಸವಾಗಿ ಜ್ವರ ಬಂದು ಈ ರೀತಿ ಪ್ರಾಣ ಹೋಗುವ ಪರಿಸ್ಥಿತಿ ಬಂದಿದೆ ಎಂದು ರಾಜೀವ್ ಗಾಂಧಿ ವಿವಿಗೆ ಕಳುಹಿಸಿದ ವರದಿಯಿಂದ ತಿಳಿದುಬಂದಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ನಡೆದ ಘಟನೆ ಏನು?

ಹೆರಿಗೆಗೆಂದು ಬಿಮ್ಸ್ ಗೆ ದಾಖಲಾಗಿದ್ದ ಒಂಬತ್ತು ಮಂದಿ ಗರ್ಭಿಣಿಯರಾದ ನಂದಿನಿ, ಲಲಿತಮ್ಮ, ಸುಮಯಾ, ರೋಜಾ, ಮುಸ್ಕಾನ್, ಅಮೃತಾ, ಮಹಾಲಕ್ಷ್ಮಿ, ರಾಜೇಶ್ವರಿ, ಸುಮಲತಾ ಎಂಬುವರಿಗೆ ನವೆಂಬರ್ 9ರಂದು ಸಿಸೇರಿಯನ್ ಮೂಲಕ ಹೆರಿಗೆ ಮಾಡಲಾಗಿತ್ತು. ಇವರಲ್ಲಿ ನಂದಿನಿ, ಲಲಿತಮ್ಮ, ರೋಜಾ, ಮುಸ್ಕಾನ್ ಹಾಗೂ ಸುಮಯಾ ಮೃತಪಟ್ಟಿದ್ದಾರೆ. ಇನ್ನುಳಿದ ನಾಲ್ವರು ಬಾಣಂತಿಯರು ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಾರೆ.

ಹೆರಿಗೆ ಬಳಿಕ ಬಾಣಂತಿಯರಿಗೆ ಐವಿ ದ್ರಾವಣ ನೀಡಲಾಗಿತ್ತು. ಈ ದ್ರಾವಣ ಹಾಕಿ ಎರಡೇ ಗಂಟೆಯಲ್ಲಿ ಬಾಣಂತಿಯರು ಅಸ್ವಸ್ಥಗೊಂಡಿದ್ದಾರೆ. ಇವರಲ್ಲಿ ಏಳು ಮಂದಿ ಬಾಣಂತಿಯರು ಕಿಡ್ನಿ ಮತ್ತು ಬಹು ಅಂಗಾಂಗ ವೈಫಲ್ಯತೆಯಿಂದ ಬಳಲುತ್ತಿದ್ದರು. ಕೂಡಲೇ ಇವರನ್ನು ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವಿಮ್ಸ್ ನಲ್ಲಿ ಪರೀಕ್ಷಿಸಿದಾಗ ಏಳು ಮಂದಿ ಬಾಣಂತಿಯರ ಪೈಕಿ ಮೂವರಲ್ಲಿ ಇಲಿ ಜ್ವರ ಪತ್ತೆಯಾಗಿತ್ತು.

'ಪಶ್ಚಿಮ್ ಬಂಗಾ ಫಾರ್ಮಸ್ಯುಟಿಕಲ್'(PASCHIM BANGA PHARMACEUTICAL) ಎಂಬ ಸಂಸ್ಥೆಯು ಸರಬರಾಜು ಮಾಡಿದ ಐ ವಿ ದ್ರವದ ಉಪಯೋಗವೂ ಈ ದುರಂತಕ್ಕೆ ಕಾರಣವಾಗಿರುವ ಶಂಕೆ ಇದೆ. ಪಶ್ಚಿಮ್ ಬಂಗಾ ಫಾರ್ಮಸ್ಯುಟಿಕಲ್ ಎಂಬ ಸಂಸ್ಥೆ ತಯಾರಿಸಿದ ಎರಡು ಬ್ಯಾಚುಗಳ ದ್ರಾವಣವನ್ನು ಔಷಧ ನಿಯಂತ್ರಣ ಇಲಾಖೆಯು ಕಳಪೆ ಗುಣಮಟ್ಟ ಎಂದು ಹೇಳಿತ್ತು. ಹೀಗಾಗಿ 'ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ಕೆ.ಎಸ್.ಎಂ.ಎಸ್.ಸಿ. ಎಲ್)ವು ಈ ಸಂಸ್ಥೆಯ 192 ಬ್ಯಾಚ್ ಗಳ ಉತ್ಪನ್ನಗಳನ್ನು ತಡಹಿಡಿದಿತ್ತು. ಬಳಿಕ ಕೇಂದ್ರ ಔಷಧ ಪ್ರಯೋಗಾಲಯವು ಈ ಔಷಧ ಸಂಸ್ಥೆಯ 84 ಬ್ಯಾಚ್ ಗಳ ಐ.ವಿ. ದ್ರಾವಣಗಳನ್ನು ಬಳಸಲು ಅನುಮತಿ ನೀಡಿತ್ತು. ಆದರೆ ಬಳ್ಳಾರಿ ಘಟನೆಗೆ ಕಾರಣ ಎನ್ನಲಾಗುತ್ತಿರುವ ಬ್ಯಾಚ್ ಸಂಖ್ಯೆ 26.2.9 ರ ಉತ್ಪನ್ನಗಳನ್ನು ಹಿಂಪಡೆಯಲಾಗಿದೆ. ಈ ಐ.ವಿ. ದ್ರಾವಣವನ್ನು ಪರೀಕ್ಷೆಗೆ ಕಳಿಸಲಾಗಿತ್ತು. ಅದರ ವರದಿಯನ್ನು ನಿರೀಕ್ಷಿಸಲಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಜಮೀರ್ ಅಹಮದ್ ಖಾನ್ ಅವರು ಬಾಣಂತಿಯರ ಸಾವಿನ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮತ್ತು ಅವರ ಕುಟುಂಬಕ್ಕೆ ತಲಾ 2 ಲಕ್ಷ ಪರಿಹಾರ ನೀಡುವ ಬಗ್ಗೆ ಮುಖ್ಯಮಂತ್ರಿ ಬಳಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ನಂತರ ಮತ್ತೆ 3 ಲಕ್ಷ ಪರಿಹಾರ ನೀಡುವುದಾಗಿ ಸಚಿವರು ಹೇಳಿದ್ದಾರೆ. ಆದರೆ, ಈ ಬಗ್ಗೆ ಇಲ್ಲಿಯವರೆಗೂ ಮುಖ್ಯಮಂತ್ರಿ ಕಚೇರಿಯಿಂದ ಅಧಿಕೃತ ಹೇಳಿಕೆ ಬಂದಿಲ್ಲ.

327 ಬಾಣಂತಿಯರ ಸಾವು

ರಾಜ್ಯದಲ್ಲಿ ಕಳೆದ ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ 327 ಬಾಣಂತಿಯರ ಸಾವು ಸಂಭವಿಸಿದ್ದು, ಪ್ರತಿಯೊಂದು ಕೂಡ ತಪಾಸಣೆ ಮಾಡಲಿದ್ದೇವೆ ಎಂದು ಸಚಿವ ದಿನೇಶ್ ಗುಂಡುರಾವ್ ಹೇಳಿದ್ದಾರೆ. ಲೆಕ್ಕಪರಿಶೋಧನೆ ವರದಿ ಸಲ್ಲಿಸಲು ಹೇಳಿದ್ದೇವೆ. ಉನ್ನತ ತಜ್ಞರನ್ನು ಕರೆಸಿ ಮತ್ತೊಮ್ಮೆ ತಪಾಸಣೆ ಮಾಡಲು ಹೇಳಿದ್ದೇವೆ. ಏಕೆಂದರೆ ಕೋರ್ಟ್ ಗಳಲ್ಲಿ ಕಾನೂನು ಹೋರಾಟ ಮಾಡಬೇಕಾಗಿದೆ. ಸರಿಯಾದ ಸಾಕ್ಷಿ ಸಂಗ್ರಹಿಸಬೇಕಾಗಿದೆ ಎಂದು ಸಚಿವರು ಹೇಳಿದ್ದಾರೆ.

ಭಯಪಡುವ ವಾತಾವರಣ ನಿರ್ಮಾಣ

ಈ ಸಾವಿನ ಘಟನೆಗಳಾದ ನಂತರ ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಾಗಿ ದಾಖಲಾಗಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳು ಬಾಣಂತಿಯರ ಸಾವಿನ ಬಗ್ಗೆ ಮಾತನಾಡಿದ ಬಳಿಕ 'ತನ್ನ ಪಾತ್ರವೇನಾದರೂ ಕಂಡು ಬಂದರೆ ರಾಜೀನಾಮೆ ನೀಡಲು ಸಿದ್ಧ' ಎಂದು ದಿನೇಶ್ ಗುಂಡೂರಾವ್ ಹೇಳಿಕೆ ನೀಡಿದ್ದಾರೆ. ಇದು ಅತ್ಯಂತ ಬೇಜವಾಬ್ದಾರಿ ಹೇಳಿಕೆ. ಅನಾಹುತ ಆಗದಂತೆ ತಡೆಯುವುದು ಮೊದಲ ಕರ್ತವ್ಯ. ತನಿಖೆ ನಡೆಸುವುದು ಜೊತೆಯಲ್ಲಿಯೇ ನಡೆಯಬೇಕಿತ್ತು. ಇಲಾಖೆಯ ಹೊಣೆ ಆರೋಗ್ಯ ಸಚಿವರ ಮೇಲೇ ಇರುತ್ತದೆ.

ಜೆಎಂಎಸ್ ಪ್ರತಿಭಟನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಜೆಎಂಎಸ್) 2024 ಡಿಸೆಂಬರ್ 5 ರಂದು ಬಳ್ಳಾರಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿತು. ಬಾಣಂತಿಯರ ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸಬೇಕು, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಮೃತರ ಕುಟುಂಬಕ್ಕೆ 10 ಲಕ್ಷ ರೂ.ಗಳ ಪರಿಹಾರ ನೀಡಬೇಕು, ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಭೂತ ಸೌಲಭ್ಯಗಳು ಒದಗಿಸಬೇಕು ಎಂದು ಜೆಎಂಎಸ್ ಆಗ್ರಹಿಸಿದೆ. ಸಂಬಂಧಪಟ್ಟ ವೈದ್ಯರನ್ನು ಕೂಡಲೇ ಅಮಾನತ್ತು ಮಾಡಬೇಕೆಂದು ಒತ್ತಾಯ ಮಾಡಲಾಗಿದೆ. ಪ್ರತಿಭಟನೆಯನ್ನು ಉದ್ದೇಶಿಸಿ ರಾಜ್ಯ ಸಹ ಕಾರ್ಯದರ್ಶಿ ಜೆ. ಚಂದ್ರ ಕುಮಾರಿ ಮಾತನಾಡಿದರು. ಹೋರಾಟದಲ್ಲಿ ಜೆಎಂಎಸ್ ನ ಜಿಲ್ಲಾ ಸಮಿತಿ ಸದಸ್ಯರು, ಮಹಿಳೆಯರು ಭಾಗವಹಿಸಿದ್ದರು.

ಈ ಘಟನೆಯ ಬಗ್ಗೆ ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿಯು ತೀವ್ರವಾಗಿ ಖಂಡಿಸಿದ್ದು, ಆಳವಾದ ತನಿಖೆ ನಡೆಸಿ ಕಠಿಣ ಕ್ರಮ ವಹಿಸುವಂತೆ ಸರ್ಕಾರವನ್ನು ಆಗ್ರಹಿಸಿದೆ.

ಪುಟ 11 ಕ್ಕೆ

ವಿಜ್ಞಾನದ ನೆಗೆತ ಮತ್ತು ಭಾರತದ ಜಾತಿ ಬದ್ಧತೆ.... ಪುಟ 2 ರಿಂದ

ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರದ ವೈಜ್ಞಾನಿಕ ಅಧ್ಯಯನ, ಅವುಗಳ ವೈಜ್ಞಾನಿಕ ವಿಂಗಡಣೆ ಇವುಗಳಿಗೆ ನಾಂದಿಯಾಯಿತು. ಮುಂದಿನ ಮಹತ್ವದ ಶೋಧಗಳಾದ ವಿಕಾಸವಾದ, ತಳಿ ವಿಜ್ಞಾನ ಮೊದಲಾದವುಗಳ ಅಡಿಪಾಯವಾಯಿತು.

ಅದೇ ರೀತಿ ಇವರುಗಳ ಸಂಗ್ರಹಿಸಿದ್ದ ಕಲ್ಲುಗಳು, ವಿವಿಧ ವಜ್ರ, ವೈಢೂರ್ಯಗಳು ಕೂಡಾ ಭೂವಿಜ್ಞಾನದ ಬೆಳವಣಿಗೆಗೆ ಕಾಣಿಕೆ ನೀಡಿದವು.

ನಾವಿಕ ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆ

ಸಾಗರಯಾನಗಳು ಹೆಚ್ಚು ಸುಗಮಗೊಳ್ಳದೆ ಹೆಚ್ಚು ಸಾಗರಯಾನಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ವಿವಿಧ ಪ್ರದೇಶಗಳ ಸಾಗರಯಾನಗಳ ಜೊತೆ ಸಂಪರ್ಕ ಹಡಗುಗಳ ರಚನೆ, ಹಡಗುಗಳ ಹಾಯಿ ಪಟ, ರಡ್ಡರ್ ಮೊದಲಾದ ಅದರ ವಿವಿಧ ಭಾಗಗಳು ಉತ್ತಮಗೊಳ್ಳಲು ಕಾರಣವಾದವು. ಸಾಗರಯಾನದಲ್ಲಿ ಅತ್ಯಂತ ಉಪಯುಕ್ತವಾದುವು ಕಂಪಾಸ್, ಗಡಿಯಾರ ಮುಂತಾದವು ಬಳಕೆಗೆ ಬಂದವು. ಉತ್ತಮಗೊಂಡವು. ಚೀನಾದಲ್ಲಿ ಬಹು ಮೊದಲಿನಿಂದಲೇ ಧಾರ್ಮಿಕ ಕಾರ್ಯಗಳಲ್ಲಿ ಉಪಯೋಗಿಸಲ್ಪಡುತ್ತಿದ್ದ ಕಂಪಾಸ್ ಮೊದಲಾದವುಗಳಂತೆ ಅರಬ್ ದೇಶಗಳು ಮತ್ತು ಇತರ ದೇಶಗಳಿಂದ ಪಡೆದ ಉಪಕರಣಗಳೂ ಸಹಾಯಕವಾದವು.

ವಿಶಾಲವಾದ ಸಾಗರದಲ್ಲಿ ತಡಕಾಡುತ್ತಿದ್ದ ನಾವಿಕರಿಗೆ ಟೆಲಿಸ್ಕೋಪ್ನ ಅವಿಷ್ಕಾರ ಸಾಗರಯಾನಕ್ಕೆ ನೀಡಿದ ಕೊಡುಗೆ ಅಸಾಮಾನ್ಯ. ಖಗೋಳ ವಿಜ್ಞಾನದ ಮೂಲಕ ವಿವಿಧ ನಕ್ಷತ್ರ, ಗ್ರಹಗಳ ನಕ್ಷೆ ಅವರಿಗೆ ಬಹಳ ಪ್ರಯೋಜನವಾಯಿತು. ಆದರೆ ಟೆಲಿಸ್ಕೋಪ್ ಯಾವ ವಿಜ್ಞಾನಿಯೂ ಅನ್ವೇಷಣೆಯೂ ಅಲ್ಲ. ಕೇವಲ ಕನ್ನಡಕ ತಯಾರಿಸುವ ಕುಶಲಕರ್ಮಿಗಳ ಮಕ್ಕಳು ಆಟವಾಡುತ್ತಾ ಒಂದು ಮಸೂರದ ಮುಂದೆ ಮತ್ತೊಂದನ್ನು ಇಟ್ಟ ಪರಿಣಾಮ ದೂರದ ವಸ್ತುಗಳು ಹತ್ತಿರ ಕಂಡಂತಾಗಿ ಟೆಲಿಸ್ಕೋಪ್ ನ ಅವಿಷ್ಕಾರವಾಯಿತು. ಯುರೋಪಿನ ವಿವಿಧ ಪ್ರದೇಶಗಳಲ್ಲಿ, ಗೆಲಿಲಿಯೋನಂತಹ ವಿಜ್ಞಾನಿಗಳಿಗೆ ಬಹು ದೊಡ್ಡ ಅನ್ವೇಷಣೆಗಳಿಗೆ ಕಾರಣವಾಯಿತು ಎಂಬುದು ಎಲ್ಲರಿಗೂ ತಿಳಿದ ಸಂಗತಿ.

ಕುಶಲಕರ್ಮಿಗಳು, ವಿದ್ವಾಂಸರ ಸಾಹಚರ್ಯ ಮತ್ತು ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆ

ಈ ಮೇಲಿನ ಎಲ್ಲ ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯಲ್ಲಿ ನೀವೆಲ್ಲ ಒಂದು ಮುಖ್ಯ ಅಂಶವನ್ನು ಗಮನಿಸಿರಬಹುದು. ಪ್ರವಾಸ ಕಥನಗಳ ಬರಹಗಾರರು, ಕಫ್ತಾನನ ದಿನಚರಿಗಳ ಬರಹಗಾರರು, ವಿವಿಧ ಪ್ರದೇಶಗಳ ಸಸ್ಯ, ಪ್ರಾಣಿಗಳನ್ನು, ಕಲ್ಲುಗಳನ್ನು ಸಂಗ್ರಹಿಸಿ ತಂದವರು, ಭೂಪಟ, ಸಾಗರ ಪಟಗಳನ್ನು ತಯಾರಿಸಿದವರು, ಕಂಪಾಸ್, ಮೊದಲಾದ ವಿವಿಧ ಪ್ರದೇಶಗಳ ಉಪಕರಣಗಳನ್ನು ಬಳಸಲಾರಂಭಿಸಿದವರು, ಅವುಗಳನ್ನು ಉತ್ತಮಪಡಿಸಿದವರು, ಟೆಲಿಸ್ಕೋಪ್ ತಯಾರಿಸಿದವರು ಯಾರೂ ವಿದ್ವಾಂಸರುಗಳಲ್ಲ. ಸಾಮಾನ್ಯ ಕೆಲಸಗಾರರು, ಕುಶಲಕರ್ಮಿಗಳು. ಇವರುಗಳು ವೀಕ್ಷಿಸಿ ಬರೆದಿಟ್ಟ ಮಾಹಿತಿ, ಮಾಡಿದ ಸಣ್ಣ ಪುಟ್ಟ ಉತ್ತಮೀಕರಣಗಳನ್ನು ವಿಜ್ಞಾನದ ಬೆಳವಣಿಗೆಗೆ ದೊಡ್ಡ ಕಾಣಿಕೆ ನೀಡಿದವು. ವಿಜ್ಞಾನಿಗಳು ಅವರ ಬರಹ ಮಾಹಿತಿಗಳನ್ನು ಕಡೆಗಣಿಸಲಿಲ್ಲ. ಅವರೊಡನೆ ಮಾಹಿತಿ ವಿನಿಮಯ ಮಾಡಿಕೊಂಡರು. ಸಂಬಂಧ, ಸಂಪರ್ಕ ಸಾಧಿಸಿದರು.

ಈ ರೀತಿಯ ವಿಜ್ಞಾನಿ, ವಿದ್ವಾಂಸ ಮತ್ತು ಕುಶಲಕರ್ಮಿಗಳ ಸಾಹಚರ್ಯ ಯುರೋಪಿನ ವಿಜ್ಞಾನ, ತಂತ್ರಜ್ಞಾನ ನಾಗಾಲೋಟದಿಂದ ವೇಗವಾಗಿ ಬೆಳೆಯಲು ಕಾರಣವಾಯಿತು. ಅಂತಹ ಕೆಲವು ಕುಶಲಕರ್ಮಿಗಳು ವಿಜ್ಞಾನದ ಪುಸ್ತಕಗಳನ್ನೂ ಬರೆದರು. ಕಂಪಾಸ್ ತಯಾರಿಕೆ ಹಾಗೂ ಬಳಕೆ ಬಗ್ಗೆ ಪುಸ್ತಕ ಬರೆದ ಕಂಪಾಸ್ ತಯಾರಕ ಮತ್ತು ನಾವಿಕ 16ನೇ ಶತಮಾನದ ರಾಬರ್ಟ್ ನಾರ್ಮನ್ ಅಂತವರಲ್ಲೊಬ್ಬ. ಅವನು ಇಂತಹ ವಿದ್ವಾಂಸರುಗಳಿಗೆ "ವಿಶ್ವ ವಿದ್ಯಾಲಯ ಮತ್ತಿತರ ಸಂಸ್ಥೆಗಳಲ್ಲಿ ಓದಿ ಪದವಿ ಪಡೆದ ನಿಮಗಿಂತ ನಾವೇನು ಕಮ್ಮಿ. ಅನುಭವ, ಸಕಾರಣ ತರ್ಕಬದ್ಧ ವಿವರಣೆ, ನಂತರ ನಮ್ಮ ವಿಚಾರಗಳ ಉಪಯುಕ್ತತೆ ಇವುಗಳಷ್ಟೇ ಪರಿಗಣನೆಗೆ ತೆಗೆದುಕೊಳ್ಳಬೇಕಾದ್ದು" ಎಂದು ಸವಾಲನ್ನೇ ಹಾಕಿದ್ದಾನೆ. ಮತ್ತೊಬ್ಬ ಹಗ್ಗಗಳ ತಯಾರಕ ಗೇಬ್ರಿಯಲ್ ಹಾರ್ವೆಯಂತೂ ಇಂತಹ ಮಹತ್ವದ ಅನ್ವೇಷಣೆ ಮಾಡಿದ ಹತ್ತಾರು ಜನ ಕುಶಲಕರ್ಮಿಗಳ ಹೆಸರುಗಳನ್ನು ಪಟ್ಟಿ ಮಾಡಿದ್ದಾನೆ. ಇವರುಗಳಿಗೆ ಶೇಕ್ಸ್ಪಿಯರನಿಗೆ ತನ್ನ ನಾಟಕಗಳ ಮೇಲೆ ಹೇಗೆ ಕೃತಿಕಾರನ ಹಕ್ಕಿದೆಯೋ ಈ ಕುಶಲಕರ್ಮಿಗಳಿಗೂ ತಮ್ಮ ಶೋಧಗಳ ಮೇಲೆ ಅಷ್ಟೇ ಹಕ್ಕಿದೆ ಎಂದು ಪ್ರತಿಪಾದಿಸಿದ್ದಾನೆ. ಇದನ್ನು ಬರ್ನಾಲ್ ರಂತಹ ವಿಜ್ಞಾನ ಇತಿಹಾಸಕಾರರು ಕುಶಲ ಕರ್ಮಿಗಳು ಹಳೆಯ ವಿದ್ವಾಂಸರಿಗೆ ಸವಾಲಾಗಿ ಮಂಡಿಸಿದ ಪ್ರಣಾಳಿಕೆ ಎಂದು ಕರೆದಿದ್ದಾರೆ.

ಜಾತಿ ಪದ್ಧತಿಯಿಂದಾಗಿ ಭಾರತ ಹಿಂದೆ ಬಿದ್ದಿತು

ಭಾರತದಿಂದ ಸಾವಿರಾರು ವರ್ಷಗಳಿಂದ ಮಲಯಾ, ಜಾವಾ, ಸುಮಾತ್ರ, ಬಾಲಿ ಮೊದಲಾದ ದ್ವೀಪಗಳಿಗೆ ಚೋಳ, ಚಾಲುಕ್ಯರ ಕಾಲದಿಂದ ವ್ಯಾಪಾರ ನಡೆಯುತ್ತಿತ್ತು. ಆಫ್ರಿಕಾದ ಪೂರ್ವ ತೀರದ ದೇಶಗಳಿಗೂ, ಅರಬ್ ದೇಶಗಳಿಗೂ ವ್ಯಾಪಾರ ನಡೆಯುತ್ತಿತ್ತು. ಹಡಗುಗಳು ಸಂಚರಿಸುತ್ತಿದ್ದವು. ಆದರೆ ಅಕ್ಷರ ಬಲ್ಲ ವ್ಯಾಪಾರಿಗಳಿಗೆ ಪ್ರವಾಸ ಕಥನಗಳನ್ನೇನಾದರೂ ಬರೆದಿದ್ದಾರೆಯೇ? ನಾವಿಕರು, ಕಫ್ತಾನರು ತಮ್ಮ ಕಥನ, ದಿನಚರಿಗಳನ್ನು ಬರೆಯುವುದು ಸಾಧ್ಯವಿತ್ತೇ?

ಅಕ್ಷರ ಬಲ್ಲ, ಅಧ್ಯಯನವೇ ಕರ್ತವ್ಯವಾದ ಬ್ರಾಹ್ಮಣರು ಈ ಹಡಗುಗಳಲ್ಲಿ ಸಂಚರಿಸಿ ಬರೆದಿಡುವುದಕ್ಕಾದರೂ ಅವಕಾಶವಿದೆಯೇ? ಅದೂ ಇಲ್ಲ. ಏಕೆಂದರೆ ಬ್ರಾಹ್ಮಣರಿಗೆ ಕಡಲ ಮೇಲಿನ ಸಂಚಾರವೇ ಸಾರಾ ಸಗಟಾಗಿ ಬ್ಯಾನ್!! ಇಪ್ಪತ್ತೊಂದನೆಯ ಶತಮಾನದಲ್ಲೂ ಈ ನಿಷೇಧ ಹಲವು ಬ್ರಾಹ್ಮಣ ಮಠಾಧೀಶರ ಮೇಲೆ ಇನ್ನೂ ಲಾಗೂ ಇದೆ. ಅಷ್ಟೇ ಅಲ್ಲದೆ ಆತ್ಮ, ಬ್ರಹ್ಮ ಚಿಂತನೆ ಮಾತ್ರ ವಿದ್ಯೆ, ಇಂತಹ ಲೋಕ ವ್ಯವಹಾರಗಳೆಲ್ಲ ಅವಿದ್ಯೆ ಎಂಬ ಉಪನಿಷತ್ ಬೋಧೆ ಕೂಡಾ ಇದೆಯಲ್ಲ. ಜಗನ್ಮಿಥ್ಯ ಎಂದ ಮೇಲೆ ಇವುಗಳನ್ನು ಅಧ್ಯಯನ ಮಾಡುವುದು ಮಾಯೆಯ ಸೆಳೆತಕ್ಕೆ ಒಳಗಾಗುವುದು ಎಂದು ಪರಿಗಣಿಸಲಾಗಿತ್ತಲ್ಲ. ಎಂದ ಮೇಲೆ ಭಾರತದ ಈ ಸಂಚಾರಿಗಳಿಗೆ ತಿಳಿದ ವಿಶ್ವದ ಭೂಪಟ ಇರಲಿ, ಭಾರತದ ಭೂಪಟವಾದರೂ ರಚಿಸಲಾಗಿತ್ತೇ?

ಇನ್ನು ಕುಶಲಕರ್ಮಿಗಳ ಕೀಳು ಜಾತಿಯಿಂದಾಗಿ ಬರಹ ಬಲ್ಲ ಬ್ರಾಹ್ಮಣರಿಂದ ಹಲವು ಮಾರುದೂರ ನಿಂತು ಮಾತಾಡಬೇಕು. ಬ್ರಾಹ್ಮಣರು ಇಂತಹ ಯಾವ ಕೆಲಸದಲ್ಲೂ ತೊಡಗುವಂತಿಲ್ಲ. ಇಂತಹ ಜಾತಿಬದ್ಧ ಮನುಸ್ಮೃತಿ ಕಟ್ಟಳೆಯ ಸಾಮಾಜಿಕ ರಚನೆಯ ಕಾರಣ ಹದಿನಾರನೇ ಶತಮಾನಕ್ಕೆ ಮೊದಲು, ಯುರೋಪಿನ ವಿಜ್ಞಾನ, ತಂತ್ರಜ್ಞಾನ, ಉತ್ಪಾದನೆಗಳ ಗುಣಮಟ್ಟಗಳಿಗೆ ಸವಾಲು ಹಾಕುತ್ತಿದ್ದ ಭಾರತ ಶತಮಾನಗಳ ಕಾಲ ಹಿಂದೆ ಬಿದ್ದಿತು.

(ಮುಂದುವರಿಯುವುದು)

‘ಎಲ್ಲಾ ಜಾತಿ, ಧರ್ಮದವರೂ ಸಹಬಾಳ್ವೆಯಿಂದ ಜೀವನ ನಡೆಸುವುದೇ ಸಂವಿಧಾನದ ಮೌಲ್ಯ’

‘ಸಂವಿಧಾನ ಓದು–ಅಭಿಯಾನ’ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ



ದೇಶದಲ್ಲೂ, ರಾಜ್ಯದಲ್ಲೂ ಭಾರತದ ಸಂವಿಧಾನ ಈಗ ಬಹುಚರ್ಚಿತ ವಿಷಯವಾಗಿದೆ. ಸಂವಿಧಾನದ ಉತ್ತಮ ಮೌಲ್ಯಗಳನ್ನು ವಿರೋಧಿಸುವವರು, ಸಂವಿಧಾನವನ್ನೇ ಕಿತ್ತು ಹಾಕಲು ಬಯಸಿರುವವರು, ಒಟ್ಟಾರೆ ಸಂವಿಧಾನ ವಿರೋಧಿಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಂವಿಧಾನದ ವಿರುದ್ಧ ದಾಳಿ ಮಾಡುತ್ತಿದ್ದಾರೆ. ಸಂವಿಧಾನವು ಪ್ರಜೆಗಳಿಗೆ ಕೊಡಮಾಡುವ ಮೂಲಭೂತ ಹಕ್ಕುಗಳ ವ್ಯಾಪ್ತಿಯನ್ನು ವಿಸ್ತರಿಸಬೇಕಾದ ಬಗೆಗೆ ಆರೋಗ್ಯಕರ ವಿಮರ್ಶೆಗೆ ಅವಕಾಶವಿದೆ. ಭಾರತದ ಒಕ್ಕೂಟ ಸ್ವರೂಪವನ್ನು ಇನ್ನಷ್ಟು ಬಲಪಡಸಬೇಕಾದ ವಿಷಯದಲ್ಲಿಯೂ ಚರ್ಚೆಗೆ ಅವಕಾಶವಿದೆ. ಆದರೆ ಇಂತಹದ್ದನ್ನು ಮಾಡದೇ ಸಂವಿಧಾನದ ಕುರಿತು ತಪ್ಪು ಮಾಹಿತಿಗಳನ್ನು ಹರಡಿ, ಅಪಪ್ರಚಾರ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಈಗ ಬಹಳಷ್ಟು ಜನ ಸಂವಿಧಾನದ ಬಗೆಗೆ ಮಾತನಾಡುತ್ತಾ, ಸಂವಿಧಾನ ಚರ್ಚೆಯ ಕೇಂದ್ರವಾಗಿದೆ.

ಈ ನಡುವೆ ಜನರಲ್ಲಿ ಅದರಲ್ಲೂ ವಿದ್ಯಾರ್ಥಿ–ಯುವಜನರು ಶಿಕ್ಷಕ ಸಮುದಾಯದಲ್ಲಿ ಭಾರತದ ಸಂವಿಧಾನದ ಹಿನ್ನೆಲೆ–ಮುನ್ನೆಲೆಗಳ ಬಗೆಗೆ ಸಮರ್ಪಕವಾಗಿ ತಿಳಿದುಕೊಳ್ಳಬೇಕು ಎನ್ನುವ ಆಕ್ಷಾಂಕ್ಷೆ, ಆಸಕ್ತಿ ಹೆಚ್ಚುತ್ತಿದೆ. ‘ಸಂವಿಧಾನ ಓದು–ಅಭಿಯಾನ’ವು ಸಂಘಟಿಸುತ್ತಿರುವ ಅಧ್ಯಯನ ಶಿಬಿರ, ಪ್ರಬಂಧ ಸ್ಪರ್ಧೆ ಇತ್ಯಾದಿಗಳಲ್ಲಿ ಪಾಲ್ಗೊಳ್ಳಲು ವಿದ್ಯಾರ್ಥಿ–ಯುವಜನರು, ಅಧ್ಯಾಪಕರು ಮುಂತಾದ ವಿಭಾಗಗಳಲ್ಲಿ ಕಂಡುಬರುತ್ತಿರುವ ಅಭೂತಪೂರ್ವ ಉತ್ಸಾಹದಲ್ಲಿ ಇದು ವ್ಯಕ್ತವಾಗುತ್ತಿದೆ.

ಇತ್ತೀಚೆಗೆ ಸಂವಿಧಾನದ ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯೊಂದನ್ನು ಸಂಘಟಿಸಲಾಗಿತ್ತು. ನವೆಂಬರ್ 26, 2024 ರಂದು ‘ಸಂವಿಧಾನ ದಿನ’ದ ಅಂಗವಾಗಿ ನಡೆದ ಈ ಸ್ಪರ್ಧೆಯನ್ನು ‘ಸಂವಿಧಾನ ಓದು ಅಭಿಯಾನ–ಕರ್ನಾಟಕ’ವು, ‘ಸರ್ಕಾರಿ ಕಲಾ ಕಾಲೇಜು, ಬೆಂಗಳೂರು’ ಸಹಯೋಗದೊಂದಿಗೆ ಸಂಘಟಿಸಿತ್ತು. ರಾಜ್ಯದ 200 ಕಾಲೇಜುಗಳಿಂದ ಒಟ್ಟು 390 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಡಿಸೆಂಬರ್ 3, 2024 ರಂದು ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ, ಮೊದಲ ಮೂರು ಸ್ಥಾನ ಹಾಗೂ 40 ಸಮಾಧಾನಕರ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಅಭಿಯಾನದ ಪ್ರಮುಖ ಸಂಯೋಜಕರುಗಳಾದ ಎಚ್.ಎನ್. ಹರಿ, ಬಿ. ರಾಜಶೇಖರ ಮೂರ್ತಿ ಮುಂತಾದವರು, ಪ್ರಬಂಧಗಳ ಮೌಲ್ಯಮಾಪಕರಾದ ವಿವಿಧ ಕಾಲೇಜುಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಪೋಷಕರು ಸಮಾರಂಭದಲ್ಲಿ ಹಾಜರಿದ್ದರು. ಈ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮಾತನಾಡಿ "ಭಾರತ ಬಹುತ್ವದ ದೇಶ. ಎಲ್ಲಾ ಜಾತಿ, ಧರ್ಮದವರೂ ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದಾರೆ. ಇದೇ ಸಂವಿಧಾನದ ಮೌಲ್ಯ. ಭಾರತದ ಜಾತಿ ವ್ಯವಸ್ಥೆಯಿಂದ ಅಸಮಾನತೆ ಸೃಷ್ಟಿಯಾಗಿದೆ. ಜಾತಿ ಆಧಾರದ ಮೇಲೆ ಒಬ್ಬರ ಯೋಗ್ಯತೆ ಅಳೆಯುವುದು ಅನಾಗರೀಕತನ. ಸಂವಿಧಾನ ನೀಡಿದ ಹಕ್ಕು ಸ್ವಾತಂತ್ರ್ಯಗಳ ಕುರಿತು ಎಲ್ಲರೂ ತಿಳಿದುಕೊಳ್ಳಬೇಕು." ಎಂದು ಹೇಳಿದರು.

ಹೊಸ ಹುರುಪು ಬಲಗೊಂಡ ಅಭಿಯಾನ

ಸಂವಿಧಾನದ ಮೂಲತತ್ವಗಳಾದ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಜಾತ್ಯತೀತತೆ, ಗಣರಾಜ್ಯ, ಒಕ್ಕೂಟ ತತ್ವ, ಸಮಾನತೆ, ಲಿಂಗ ಸಮಾನತೆ ಮುಂತಾದ ಮೌಲ್ಯಗಳು ಸಮಾಜದ ಚರ್ಚೆಯ ಕೇಂದ್ರಬಿಂದುವಾಗಿರುವಾಗ ಭಾರತೀಯ ಸಂವಿಧಾನದ ಈ ಮೂಲ ತತ್ವಗಳ ಬಗೆಗೆ ಜನರಲ್ಲಿ ವಿಶೇಷವಾಗಿ ವಿದ್ಯಾರ್ಥಿ–ಯುವಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಮತ್ತೊಂದು ಸುತ್ತಿನ ಸಂವಿಧಾನ ಓದು–ಅಭಿಯಾನವು ರಾಜ್ಯದಾದ್ಯಂತ ಬಿರುಸು ಪಡೆಯುತ್ತಿದೆ. ಕೊರೊನ ಲಾಕ್‌ಡೌನ್ ಕಾಲಘಟ್ಟದಲ್ಲಿ ನಡೆದ ನಾನಾ ‘ಆನ್ ಲೈನ್’ ವಿಚಾರ ಸಂಕಿರಣ–ಕಾರ್ಯಾಗಾರಗಳ ನಂತರ ಕ್ರಮೇಣ ಅಭಿಯಾನದ ಕಾರ್ಯಚಟುವಟಿಕೆಗಳು ವ್ಯಾಪಕವಾಗಿ ವಿಸ್ತರಿಸುತ್ತಿವೆ. ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ನ್ಯಾ. ನಾಗಮೋಹನ ದಾಸ್ ಅವರಲ್ಲದೇ, ಎಸ್.ವೈ.ಗುರುಶಾಂತ್, ಬಿ. ರಾಜಶೇಖರ ಮೂರ್ತಿ, ಆರ್. ರಾಮಕೃಷ್ಣ ಮುಂತಾದವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.


ರಾಜ್ಯ ಮಟ್ಟದ ಭಾಷಣ ತರಬೇತಿ ಶಿಬಿರ

ಸಂವಿಧಾನ ಓದು ಅಭಿಯಾನವನ್ನು ಮತ್ತಷ್ಟು ತೀವ್ರಗೊಳಿಸುವ ವ್ಯಾಪಕಗೊಳಿಸುವ ಉದ್ದೇಶದಿಂದ ವಿಶೇಷವಾಗಿ ಈ ಅಭಿಯಾನದಲ್ಲಿ ತೊಡಗಲು ಬಯಸಿರುವ ವಿದ್ಯಾರ್ಥಿ–ಯುವಜನರನ್ನು ತರಬೇತುಗೊಳಿಸುವುದಕ್ಕಾಗಿ ಕಳೆದ ಜುಲೈ 13–14. 2024 ರಂದು ಎರಡು ದಿನಗಳ ಕಾಲ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ‘ಸಂವಿಧಾನ ಕುರಿತ ಭಾಷಣ ತರಬೇತಿ ಶಿಬಿರ’ವು ನಡೆಯಿತು. ಸೇಂಟ್ ಮಾರ್ಕ್ಸ್ ರಸ್ತೆ ‘ಆಶೀರ್ವಾದ್’ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಈ ಶಿಬಿರದಲ್ಲಿ ರಾಜ್ಯದ ನಾನಾ ಜಿಲ್ಲೆಗಳಿಂದ ಒಟ್ಟು 117 ಶಿಬಿರಾರ್ಥಿಗಳು, ಗಣ್ಯರು ಪಾಲೊಂಡಿದ್ದರು.

ಜಿಲ್ಲಾ ಮಟ್ಟದ ಅಧ್ಯಯನ ಶಿಬಿರಗಳು

ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರದಲ್ಲಿ ಭಾಗಿಯಾದವರನ್ನೂ ಒಳಗೊಂಡು ಇದೀಗ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಭಿಯಾನಕ್ಕೆ ವಿದ್ಯಾರ್ಥಿ–ಯುವಜನರನ್ನು ಸಜ್ಜುಗೊಳಿಸಲು ಜಿಲ್ಲಾ ತಾಲ್ಲೂಕು ಮಟ್ಟದ ತರಬೇತಿ ಶಿಬಿರಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಹಾಸನ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವು ಆಗಸ್ಟ್ 30 ಮತ್ತು ಸೆಪ್ಟೆಂಬರ್ 1 ರಂದು ಎರಡು ದಿನಗಳ ಕಾಲ ಹಾಸನ ನಗರದಲ್ಲಿ ನಡೆಯಿತು. ಸು. 150 ಕ್ಕೂ ಹೆಚ್ಚು ನೋಂದಾಯಿತ ವಿದ್ಯಾರ್ಥಿ–ಯುವಜನರು, ಅಧ್ಯಾಪಕರು ಮುಂತಾದವರು ಪಾಲೊಂಡಿದ್ದರು.

ಹಾಸನ ಜಿಲ್ಲೆಯ ಬಯಲು ↗







ಕೂಲಿಕಾರ, ರೈತರ ಸಮಸ್ಯೆಗಳ ಪರಿಹಾರಕ್ಕೆ ಸಮರಶೀಲ ಹೋರಾಟ ರೂಪಿಸಲು

ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಮ್ಮೇಳನ ನಿರ್ಣಯ

ದಿನಕ್ಕೆ 650 ರೂಪಾಯಿ ಕೂಲಿ, ವರ್ಷದಲ್ಲಿ 200 ದಿನ ಕೆಲಸ ಸೇರಿದಂತೆ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಜಾರಿ ಮಾಡಲು, ಕೂಲಿಕಾರರ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ಟನ್ ಕಬ್ಬಿಗೆ 5,500 ರೂಪಾಯಿ, ಲೀಟರ್ ಹಾಲಿಗೆ 50 ರೂಪಾಯಿ ಸೇರಿದಂತೆ ರೈತರ ಸಮಸ್ಯೆಗಳನ್ನು ಬಗೆಹರಿಸಲು ಆಳುವ ಸರ್ಕಾರದ ಮೇಲೆ ಒತ್ತಡ ಹೇರಲು, ಅದಕ್ಕಾಗಿ ಸಮರಶೀಲ ಹೋರಾಟಗಳನ್ನು ರೂಪಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಮಂಡ್ಯ ಜಿಲ್ಲಾ ಹತ್ತನೇ ಸಮ್ಮೇಳನವು ನಿರ್ಣಯ ತೆಗೆದುಕೊಂಡಿದೆ.

ಮಂಡ್ಯ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಚಳವಳಿಯ ಮೊದಲ ಬೀಜಗಳು ಮೊಳಕೆಯೊಡೆದ ಭಾರತೀನಗರ(ಕೆ.ಎಂ.ದೊಡ್ಡಿ)ದಲ್ಲಿ ನವೆಂಬರ್ 30 ಮತ್ತು ಡಿಸೆಂಬರ್ 01, 2024ರ ಎರಡು ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಜರುಗಿತು. ಕೂಲಿಕಾರ, ರೈತ, ಕಾರ್ಮಿಕ, ಮಹಿಳೆ, ದಲಿತರು ಸೇರಿದಂತೆ ಜಿಲ್ಲೆಯ ದುಡಿಯುವ ಜನತೆ ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ವಿವರವಾಗಿ ಚರ್ಚಿಸಿದ ಸಮ್ಮೇಳನ ಒಟ್ಟು ಹದಿಮೂರು ನಿರ್ಣಯಗಳನ್ನು ಅಂಗೀಕರಿಸಿತು.

ನವೆಂಬರ್ 30 ರಂದು ಎರಡು ಸಾವಿರಕ್ಕೂ ಹೆಚ್ಚಿನ ಜನ ಸೇರಿದ್ದ ಮೆರವಣಿಗೆ ಮತ್ತು ಬಹಿರಂಗ ಸಭೆಯೊಡನೆ ಸಮ್ಮೇಳನ ಆರಂಭವಾಯಿತು. ಮಂಡ್ಯ ರಸ್ತೆಯ ಮಾರುತಿ ಚಿತ್ರ ಮಂದಿರದ ಆವರಣದಿಂದ ಹೊರಟ ದುಡಿಯುವ ಜನರ ಆಕರ್ಷಕ ಮೆರವಣಿಗೆಯು, ಮದ್ದೂರು – ಮಳವಳ್ಳಿ ರಸ್ತೆಯ ಭಾರತೀ ಕಾಲೇಜು ಎದುರಿನ ಮೈದಾನದಲ್ಲಿ ಸಮಾವೇಶಗೊಂಡಿತು. ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಪಕ್ಷದ ಕೇಂದ್ರ ಸಮಿತಿ ಸದಸ್ಯೆ, ಕೇರಳದ ಮಾಜಿ ಆರೋಗ್ಯ ಮಂತ್ರಿ, ಜಗದ್ವಿಖ್ಯಾತರಾದ ಸಂಗಾತಿ ಕೆ.ಕೆ. ಶೈಲಜಾ ಟೀಚರ್ ಮಾತನಾಡಿದರು.

ಅವರು ಮಾತನಾಡುತ್ತಾ, "ಜಗತ್ತಿನಲ್ಲಿ ಅಸಮಾನತೆ ಸೃಷ್ಟಿಯಾದದ್ದು ದೇವರಿಂದಲ್ಲ. ದೇವರು ತನ್ನದೇ ಜನಗಳಿಗೆ ಆ ರೀತಿಯಲ್ಲಿ ಪಕ್ಷಪಾತ ಮಾಡಲಾರ. ಜಗತ್ತಿನಲ್ಲಿ ಯಾವಾಗ ವರ್ಗಗಳು ಅಂದರೆ, ದುಡಿಯುವ ಮತ್ತು ಆಳುವ ವರ್ಗಗಳು ಸೃಷ್ಟಿಯಾದವೋ, ಆಗಿನಿಂದ ಅಸಮಾನತೆ ಸೃಷ್ಟಿಯಾಯಿತು ಎಂದು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಜೆಲ್ಸ್ ತೋರಿಸಿಕೊಟ್ಟರು. ಹಾಗಾಗಿ ಅಸಮಾನತೆ ತೊಲಗಬೇಕಾದರೆ ವರ್ಗ ವ್ಯವಸ್ಥೆ, ಬಂಡವಾಳಶಾಹಿ ವ್ಯವಸ್ಥೆ, ಸಾಮ್ರಾಜ್ಯಶಾಹಿ ವ್ಯವಸ್ಥೆ ತೊಲಗಬೇಕು" ಎಂದು ಹೇಳಿದರು.


ಕೇರಳದಲ್ಲಿ ಇಂದು ಅಸಮಾನತೆ ಕಡಿಮೆಯಾಗಿದ್ದರೆ ಅದಕ್ಕೆ ಸ್ವಾತಂತ್ರ್ಯ ನಂತರದಲ್ಲಿ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ್ ಪಕ್ಷವೇ ಕಾರಣ. ಇ.ಎಂ.ಎಸ್. ನಂಬೂದಿರಿಪಾಡ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಹಿ ಹಾಕಿದ ಮೊದಲ ಕಡತವೆಂದರೆ, ಅದು ಭೂಸುಧಾರಣೆ ಕಾನೂನಿನ ಕಡತ. ಆ ಕಾನೂನಿನ ಪ್ರಕಾರ ಭೂ ಮಾಲೀಕರು ತಮ್ಮ ಜಮೀನುಗಳಲ್ಲಿ ವಾಸವಿರುವ ಯಾವುದೇ ಕೂಲಿಕಾರರನ್ನು ಒಕ್ಕಲೆಬ್ಬಿಸುವಂತಿರಲಿಲ್ಲ, ಮಾತ್ರವಲ್ಲ ಕೂಲಿಕಾರರು ವಾಸಿಸುತ್ತಿದ್ದ ಜಾಗ ಕೂಲಿಕಾರರಿಗೇ ಸೇರಬೇಕು. ಇದರಿಂದಾಗಿ ಕೇರಳದ ಸಾಮಾಜಿಕ ಚಿತ್ರಣವೇ ಬದಲಾಯಿತು ಎಂದು ಹೆಮ್ಮೆಪಟ್ಟರು ಕಾಮ್ರೇಡ್ ಶೈಲಜಾ ಟೀಚರ್.

ಕಾಮ್ರೇಡ್ ಪಿಣರಾಯಿ ವಿಜಯನ್ ಅವರ ಮೊದಲ ಸರ್ಕಾರದಲ್ಲಿ ನನಗೆ ಆರೋಗ್ಯ ಮಂತ್ರಿಯಾಗಿ ಜನರ ಸೇವೆ ಮಾಡುವ ಅವಕಾಶ ಲಭ್ಯವಾಯಿತು. ಆಗ ದಿಢೀರನೆ ನಿಫಾ, ಕರೋನ ವೈರಸ್ ನಂತಹ ಸಾಂಕ್ರಾಮಿಕ ರೋಗಗಳ ವಿರುದ್ಧ ಹೋರಾಡುವ ಸನ್ನಿವೇಶ ಉಂಟಾಯಿತು. ಎಡ ಸರ್ಕಾರದ ದೃಡ ಸಂಕಲ್ಪ ಮತ್ತು ಜನತೆಯ ಸಹಕಾರದಿಂದ ಎರಡರ ವಿರುದ್ದವೂ ಜಯ ಸಾಧಿಸಿದೆವು. ಸರಿಯಾದ ಯೋಜನೆ ಮತ್ತು ಆ ಯೋಜನೆಯ ಕಟ್ಟುನಿಟ್ಟಿನ ಜಾರಿಯಿಂದ ಯಶಸ್ಸು ಸಾಧ್ಯವಾಯಿತು ಎಂದರು.

ಕರೋನ ಸಮಯದಲ್ಲಿ ಇಡೀ ದೇಶದಲ್ಲೇ ಅತ್ಯಂತ ಕಡಿಮೆ ಮರಣ ಪ್ರಮಾಣ ದಾಖಲಿಸಿದ ರಾಜ್ಯ ಕೇರಳ. ಹಿಂದಿನ ವರ್ಷಗಳಿಗಿಂತಲೂ ಕಡಿಮೆ ಮರಣ ಆ ವರ್ಷ ದಾಖಲಾಯಿತು. ಒಂದೇ ಒಂದು ಮನುಷ್ಯ ಜೀವಿಯನ್ನು ವಿನಾಕಾರಣ ಸಾಯಲು ಬಿಡಬಾರದು ಎಂಬುದು ನಮ್ಮ ಸರ್ಕಾರದ ತೀರ್ಮಾನವಾಗಿತ್ತು. ಅದರಂತೆ ಕಾರ್ಯನಿರ್ವಹಿಸಿದೆವು. ರೋಗವನ್ನು ವಾಸಿ ಮಾಡುವುದಕ್ಕಿಂತ ರೋಗ ಬರದಂತೆ ತಡೆಯುವುದು ನಮ್ಮ ಉದ್ದೇಶವಾಗಿತ್ತು, ಇದರಲ್ಲಿ ನಾವು ಯಶಸ್ವಿಯಾದೆವು ಎಂದು ಹೇಳಿದರು ಕೋವಿಡ್ ನಿರ್ವಹಣೆಗಾಗಿ ವಿಶ್ವಸಂಸ್ಥೆಯಿಂದ ಸನ್ಮಾನಕ್ಕೆ ಒಳಗಾದ ಕಾಮ್ರೇಡ್ ಟೀಚರ್.

ಕೇರಳದಲ್ಲಿ ನವಜಾತ ಶಿಶುಗಳ ಮರಣ ಪ್ರಮಾಣ ಸಾವಿರಕ್ಕೆ ಹನ್ನೆರಡು. ಇಡೀ ದೇಶದಲ್ಲೇ ಅತ್ಯಂತ ಕಡಿಮೆ. ಆದರೆ ಮೊದಲ ಪಿಣರಾಯಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಈ ಪ್ರಮಾಣವನ್ನು ಇನ್ನೂ ಕಡಿಮೆ ಮಾಡಲು ತೀರ್ಮಾನಿಸಿದೆವು. ಅದಕ್ಕಾಗಿ ಗರ್ಭಿಣಿಯರನ್ನು ಹೆರಿಗೆಗೆ ಆಸ್ಪತ್ರೆಗೆ ಸಾಗಿಸುವ ಮತ್ತು ಹೆರಿಗೆಯ ನಂತರ ಮನೆಗೆ ತಲುಪಿಸುವ ಜವಾಬ್ದಾರಿಯನ್ನು ಆರೋಗ್ಯ ಇಲಾಖೆ ನಿರ್ವಹಿಸಿತು. ಪರಿಣಾಮವಾಗಿ ಒಂದೇ ವರ್ಷದಲ್ಲಿ ನವಜಾತ ಶಿಶುಗಳ ಮರಣ ಪ್ರಮಾಣವನ್ನು ಸಾವಿರಕ್ಕೆ ಐದಕ್ಕೆ ಇಳಿಸಲಾಯಿತು. ಇದು ಎಡ ಸರ್ಕಾರದ ಸಾಧನೆ ಎಂದು ಬಣ್ಣಿಸಿದರು.

ಕೇರಳದ ಆರೋಗ್ಯ ವ್ಯವಸ್ಥೆ ಅತ್ಯಂತ ಸದೃಢವಾದುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಉದ್ಯಾನ, ಪ್ರಯೋಗಾಲಯ ಮತ್ತು ಅಗತ್ಯ ಸಿಬ್ಬಂದಿಗಳಿಂದ ಕೂಡಿವೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೇ ಎಲ್ಲಾ ರೀತಿಯ ರೋಗ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದಕ್ಕೆ ಕಾರಣ ಅಲ್ಲಿರುವ ಎಡ ಸರ್ಕಾರ, ಎಡ ಸರ್ಕಾರ ಮಾತ್ರವೇ ದುಡಿಯುವ ಜನರ ಸರ್ಕಾರ. ಹಾಗಾಗಿ ಮಂಡ್ಯ ಜಿಲ್ಲೆಯಲ್ಲೂ ಸಿಪಿಐಎಂ ಪಕ್ಷವನ್ನು ಬಲಪಡಿಸಿ ಎಂದು ಮನವಿ ಮಾಡಿದರು.



ಮುಖ್ಯ ಅತಿಥಿಗಳಾಗಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸೈಯದ್ ಮುಜೀಬ್ ಮಾತನಾಡಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೀಟರ್ ಬಡ್ಡಿ ವ್ಯವಹಾರ ಮಾಡುತ್ತಾ ಗ್ರಾಮೀಣ ಬಡವರನ್ನು ಸುಲಿಗೆ ಮಾಡುತ್ತಿದೆ. ಇದರಿಂದಾಗಿ ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಶೋಷಣೆಯ ವಿರುದ್ಧ ಪ್ರಬಲ ಜನಾಂದೋಲನ ರೂಪಿಸಲು ಕರೆ ನೀಡಿದರು. ಕಾಮ್ರೇಡ್ ಪುಟ್ಟಮಾದು, ದೇವಿ ಮಾತನಾಡಿದರೆ, ಜಿಲ್ಲಾ ಕಾರ್ಯದರ್ಶಿ ಕೃಷ್ಣೇಗೌಡ ಅಧ್ಯಕ್ಷತೆ ವಹಿಸಿದ್ದರು.

ಬಹಿರಂಗ ಸಭೆಯ ನಂತರ ಭಾರತೀನಗರದ ಮಾರುತಿ ಪಾರ್ಟಿ ಹಾಲ್ ನ ಕಾಮ್ರೇಡ್ ಸೀತಾರಾಂ ಯೆಚೂರಿ ವೇದಿಕೆಯಲ್ಲಿ ಪ್ರತಿನಿಧಿ ಅಧಿವೇಶನ ಆರಂಭವಾಯಿತು. ಇದಕ್ಕೂ ಮುನ್ನ ಪಕ್ಷದ ಹಿರಿಯ ಸದಸ್ಯರಾದ ಕಾಮ್ರೇಡ್ ಜಿ.ರಾಮಕೃಷ್ಣ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣದ ನಂತರ ಮಾತನಾಡಿದ ರಾಮಕೃಷ್ಣ 'ಕೆ.ಎಂ. ದೊಡ್ಡಿಯಲ್ಲಿ ಎಪ್ಪತ್ತರ ದಶಕದಲ್ಲಿ ಕೆಂಬಾವುಟ ಕಾರ್ಮಿಕ ಸಂಘಟನೆ ಮೂಲಕ ಹಾರಾಡಲು ಆರಂಭವಾಯಿತು, ಎಂಬತ್ತರ ದಶಕದಲ್ಲಿ ಪಕ್ಷದ ಚಟುವಟಿಕೆಗಳು ಆರಂಭವಾದವು. ಈ ಅವಧಿಯಲ್ಲಿ ಪಕ್ಷದ ಬೆಳವಣಿಗೆ ಬಹಳ ಆಶಾದಾಯಕವಾಗಿದೆ' ಎಂದು ತಿಳಿಸಿದರು.

ಪ್ರತಿನಿಧಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಮ್ರೇಡ್ ಮೀನಾಕ್ಷಿ ಸುಂದರಂ ಅವರು 'ಮಂಡ್ಯ ಕೃಷಿ ಪ್ರಧಾನ ಜಿಲ್ಲೆಯಾದರೂ ಜಿಡಿಪಿಗೆ ಕೃಷಿಯ ಕೊಡುಗೆ ಕೇವಲ ಶೇ. 11 ಮಾತ್ರ, ಕೈಗಾರಿಕಾ ವಲಯದ ಪಾಲು ಶೇ. 13. ಇಲ್ಲಿನ ಜಿಡಿಪಿಗೆ ಸೇವಾ ವಲಯವೇ ಹೆಚ್ಚಿನ ಕಾಣಿಕೆ ನೀಡುತ್ತಿದೆ. ದೊಡ್ಡ ಪ್ರಮಾಣದ ಜನರನ್ನು ಒಳಗೊಂಡಿರುವ ಕೃಷಿಯ ಪಾಲು ಅತ್ಯಂತ ಕಡಿಮೆ ಇರುವುದು ಕೃಷಿ ಲಾಭದಾಯಕವಲ್ಲ, ಕೃಷಿಕರು ಸುಖವಾಗಿಲ್ಲ ಎಂಬುದರ ಸೂಚನೆ' ಎಂದು ಹೇಳುತ್ತಾ ಕೃಷಿಕರ ಸಂಕಟಗಳಿಗೆ ಕಾರಣವಾಗಿರುವ ನೀತಿಗಳ ವಿರುದ್ಧ ಹೋರಾಟ ರೂಪಿಸಲು ಈ ಸಮ್ಮೇಳನ ತೀರ್ಮಾನಿಸಬೇಕು ಎಂದು ಕರೆ ನೀಡಿದರು.

ಕಳೆದ ಒಂದು ದಶಕದಲ್ಲಿ ಪ್ರತಿ ಮೂವತ್ತು ಗಂಟೆಗೆ ಒಬ್ಬರಂತೆ ಬಿಲಿಯಾಧಿಪತಿಗಳು ಸೃಷ್ಟಿಯಾಗಿದ್ದಾರೆ. ಒಬ್ಬ ಬಿಲಿಯಾಧಿಪತಿ ಸೃಷ್ಟಿಯಾಗುವಾಗ ಬಿಲಿಯನ್ ಗಟ್ಟಲೆ ಬಡವರು ಸೃಷ್ಟಿಯಾಗಿದ್ದಾರೆ. ಬಡವರ ಸಿಟ್ಟು ಆಳುವವರ ಕುರ್ಚಿಯನ್ನು ಅಲುಗಾಡಿಸದಂತೆ ಮತೀಯ ವಿಷಯಗಳನ್ನು ಮುಂದೆ ಮಾಡಿ ಕೋಮುವಾದಿ ಶಕ್ತಿಗಳು ಜನತೆಯ ಐಕ್ಯತೆಯನ್ನು ನಾಶಮಾಡುತ್ತಿವೆ ಎಂದರು.

ಜಿಲ್ಲಾ ಕಾರ್ಯದರ್ಶಿ ಕೃಷ್ಣೇಗೌಡ ಮಂಡಿಸಿದ ಕರಡು ವರದಿಯ ಮೇಲೆ 13 ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ತಮ್ಮ ಚರ್ಚೆಯಲ್ಲಿ ಎಲ್ಲರೂ ಮಂಡ್ಯ ಜಿಲ್ಲೆಯಲ್ಲಿ ಪಕ್ಷವನ್ನು ವಿಸ್ತರಿಸುವ ಮತ್ತು ಗಟ್ಟಿಗೊಳಿಸುವ ಕುರಿತು ಮಾತನಾಡಿದರು. ಸಮ್ಮೇಳನವು ಒಟ್ಟು 13 ನಿರ್ಣಯಗಳನ್ನು ಅಂಗೀಕರಿಸಿತು.

ಸಮ್ಮೇಳನದ ಕೊನೆಯಲ್ಲಿ 16 ಜನರ ಜಿಲ್ಲಾ ಸಮಿತಿ ಮತ್ತು ರಾಜ್ಯ ಸಮ್ಮೇಳನಕ್ಕೆ ಎಂಟು ಜನ ಪ್ರತಿನಿಧಿಗಳನ್ನು ಸಮ್ಮೇಳನವು ಸರ್ವಾನುಮತದಿಂದ ಆಯ್ಕೆ ಮಾಡಿತು. ಕಾಮ್ರೇಡ್ ಕೃಷ್ಣೇಗೌಡ ಟಿ.ಎಲ್. ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಗೆಲುವು ನಮ್ಮದು ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಸೀಮೆ ತಾಲ್ಲೂಕುಗಳ ಸುಮಾರು 300 ಶಿಬಿರಾರ್ಥಿಗಳು ಪಾಲ್ಗೊಂಡ ಒಂದು ದಿನದ ಅಧ್ಯಯನ ಶಿಬಿರವು ಅರಸೀಕೆರೆಯಲ್ಲಿ ಸೆಪ್ಟೆಂಬರ್ 21 ರಂದು ನಡೆಯಿತು. ಹಾಸನ ಮಲೆನಾಡು ತಾಲ್ಲೂಕುಗಳ ವಿದ್ಯಾರ್ಥಿ–ಯುವಜನರಿಗಾಗಿ ಅಧ್ಯಯನ ಶಿಬಿರವು ಸಕಲೇಶಪುರದಲ್ಲಿ ನವೆಂಬರ್ 8–9 ರಂದು ಎರಡು ದಿನಗಳ ಕಾಲ ನಡೆಯಿತು. ಸುಮಾರು 250 ವಿದ್ಯಾರ್ಥಿ–ಯುವಜನರು ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವು ನವೆಂಬರ್ 30–ಡಿಸೆಂಬರ್ 1, 2024 ರಂದು ಎರಡು ದಿನಗಳ ಕಾಲ ಮೈಸೂರು ವಿಶ್ವವಿದ್ಯಾಲಯದ ವಿಜ್ಞಾನ ಭವನದಲ್ಲಿ ಯಶಸ್ವಿಯಾಗಿ ನಡೆಯಿತು. ಸುಮಾರು 350 ನೋಂದಾಯಿತ ವಿದ್ಯಾರ್ಥಿಗಳಲ್ಲದೇ, ಪ್ರಾಧ್ಯಾಪಕರು, ವಕೀಲರು, ನಾನಾ ಜನಚಳುವಳಿಗಳ ಮುಖಂಡರು ಶಿಬಿರದಲ್ಲಿ ಉತ್ಸಾಹದಿಂದ ಭಾಗಿಯಾಗಿದ್ದರು. ಕೊಡಗು ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವು ಡಿಸೆಂಬರ್ 7–8 ರಂದು ಎರಡು ದಿನಗಳ ಕಾಲ ಮಡಿಕೇರಿಯಲ್ಲಿ ನಡೆಯಿತು. 359 ನೋಂದಾಯಿತ ಪ್ರತಿನಿಧಿಗಳ ಜೊತೆಗೆ ಒಟ್ಟಾರೆ 400 ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

ಇಂತಹ ಮತ್ತಷ್ಟು ಅಧ್ಯಯನ ಶಿಬಿರ, ಚಟುವಟಿಕೆಗಳನ್ನು ಸಂಘಟಿಸಲು ರಾಜ್ಯದ ಉದ್ದಗಲ ನಾನಾ ಜನಪರ–ಪ್ರಗತಿಪರ ಚಳುವಳಿಗಳ ಮುಖಂಡರು, ಸಾಮಾಜಿಕ ಕಾರ್ಯಕರ್ತರು ಉತ್ಸಾಹ ತೋರುತ್ತಿದ್ದಾರೆ. ಅಭಿಯಾನದಲ್ಲಿ ವಿವಿಧ ಜನ ಚಳುವಳಿ, ಸಂಘಟನೆಗಳ ಕಾರ್ಯಕರ್ತರು, ಪ್ರಗತಿಪರ ಸಾಹಿತಿಗಳು, ಚಿಂತಕರು, ಪ್ರಾಧ್ಯಾಪಕರು, ವಕೀಲರು ಮುಂತಾದವರ ಬೆಂಬಲ, ಪಾಲ್ಗೊಳ್ಳುವಿಕೆಯು ಗಮನಾರ್ಹವಾದ ಅಂಶವಾಗಿದೆ.

–ಆರ್. ರಾಮಕೃಷ್ಣ

ಮಹಾಯುತಿಯ 'ಮಹಾ' ವಿಜಯ ಹೇಗಾಯಿತು?

ವಸಂತರಾಜ್ ಎನ್.ಕೆ.

ಬಿಜೆಪಿ ನಾಯಕತ್ವದ ಮಹಾಯುತಿ ಕೂಟ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳಲ್ಲಿ ಮಹಾವಿಜಯ ಗಳಿಸಿದೆ. ಎಪ್ರಿಲ್‌ನ ಲೋಕಸಭಾ ಚುನಾವಣೆಯಲ್ಲಿ ನೆಲ ಕಚ್ಚಿದ್ದ ಮಹಾಯುತಿಯ ಚುನಾವಣಾ ಸಾಧನೆಯಲ್ಲಿ ನಾಟಕೀಯ ತಿರುವು ಕಂಡಿದೆ. 'ಗೆಲುವು ನಮ್ಮದೇ' ಎಂದು ಬೀಗಿದ್ದ ಮಹಾರಾಷ್ಟ್ರ ವಿಕಾಸ ಅಘಾಡಿ ಮಹಾಸೋಲು ಕಂಡಿದೆ. ಹರಿಯಾಣ, ಮಹಾರಾಷ್ಟ್ರಗಳಲ್ಲಿ ಬಿಜೆಪಿ/ಎನ್‌ಡಿಎ ಅನಿರೀಕ್ಷಿತ ವಿಜಯವು ದೇಶದ ರಾಜಕಾರಣದಲ್ಲಿ ಮಹತ್ವದ ಪರಿಣಾಮ ಬೀರಲಿದೆ. ಮಹಾಯುತಿಯ ಮಹಾವಿಜಯದ ವಿವರಣೆ ಮತ್ತು ಅದರ ಹಿಂದಿರಬಹುದಾದ ಕಾರಣಗಳ ವಿಶ್ಲೇಷಣೆ ಮುಂದುವರಿದ ಭಾಗ ಇಲ್ಲಿದೆ.

ಕೃಷಿ ಬೆಳೆಗಳ (ವಿಶೇಷವಾಗಿ ಸೋಯಾಬೀನ್, ಈರುಳ್ಳಿ) ಬೆಲೆ ಏರುಪೇರು, ವ್ಯಾಪಕ ನಿರುದ್ಯೋಗ, ವಿಪರೀತ ಬೆಲೆ ಏರಿಕೆ... ಇವ್ಯಾವುವೂ ಚುನಾವಣಾ ವಿಷಯಗಳಾಗಲಿಲ್ಲ. ಇದಕ್ಕೂ ಕೆಲವು ತಿಂಗಳುಗಳ ಮೊದಲು ರೈತರು, ಒಬಿಸಿ ಮತ್ತಿತರ ಜನವಿಭಾಗಗಳಿಗೆ ಘೋಷಿಸಲಾದ ಹಲವಾರು ಕಲ್ಯಾಣ ಯೋಜನೆಗಳು ಕಾರಣವಾಗಿರಬಹುದು ಎನ್ನಲಾಗಿದೆ.


ನವ–ಉದಾರವಾದಿ ನೀತಿಗಳ ಫಲವಾಗಿ ಉಲ್ಬಣಗೊಳ್ಳುತ್ತಿರುವ ನಿರುದ್ಯೋಗ, ಬೆಲೆ ಏರಿಕೆಯಿಂದ ತೀವ್ರ ಸಂಕಷ್ಟಕ್ಕೊಳಗಾದ ಬಡಜನತೆ, ನೇರ ನಗದು ವರ್ಗಾವಣೆಯ 'ಗ್ಯಾರಂಟಿ' ಯೋಜನೆಗಳ ಇಂತಹ ತಾತ್ಕಾಲಿಕ ಪರಿಹಾರವನ್ನು ಮೆಚ್ಚುತ್ತಾರೆ. ಈ ಯೋಜನೆಯನ್ನು ಅಧಿಕಾರಕ್ಕೆ ಬಂದ ಕೂಡಲೇ ಯಾಕೆ ತರಲಿಲ್ಲ, ಚುನಾವಣೆಗಳ ಕೆಲವು ತಿಂಗಳುಗಳ ಮೊದಲು ಮಾತ್ರ ಯಾಕೆ ತಂದಿರಿ ಅಂತ ಕೇಳುವ ರಾಜಕೀಯ ಪ್ರಜ್ಞೆ ಮೂಡಿಲ್ಲ. ಸದ್ಯ ಈಗಲಾದರೂ ತಂದು ಜಾರಿ ಮಾಡಿದರಲ್ಲ ಎಂಬ ದುರ್ಭರ ಸ್ಥಿತಿಯಲ್ಲಿ ಜನ ಇದ್ದಾರೆ ಎಂದು ತೋರಿಸುತ್ತದೆ.

'ಲಾಡ್ಕಿ ಬಹಿಣ' ಮಹಾ ವಿಜಯಕ್ಕೆ ಕಾರಣವಾದ ಒಂದು ಅಂಶವೆಂಬುದಂತೂ ನಿಜ.

'ಕಟೆಂಗೆ ತೊ ಬಂಟೆಂಗೆ' ಮತ್ತು 'ಏಕ್ ಹೈ ತೊ ಸೇಫ್ ಹೈ'ಯ ಹಲವು ಅವತಾರಗಳು

ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತು ತನ್ನ ಸ್ಥಾನ ಭದ್ರ ಮಾಡಿಕೊಳ್ಳಲು ಯೋಗಿ ಆದಿತ್ಯನಾಥ ಕೊಟ್ಟ ಘೋಷಣೆ 'ಕಟೆಂಗೆ ತೊ ಬಂಟೆಂಗೆ'. 'ಚಾರ್ ಸೋ ಪಾರ್' ನಿಶ್ಚಿತ ಎಂದುಕೊಂಡು ಬಿಜೆಪಿ ಮತ್ತು ಸಂಘಪರಿವಾರದ ಒಳಗೆ ನಡೆದಿದ್ದ ಆಂತರಿಕ ಸಂಘರ್ಷದ ಸಂಧರ್ಭವೂ ಇದರ ಹಿಂದೆ ಇತ್ತು. ಇದು ಪ್ರಮುಖವಾಗಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಸೋಲಿನ ಹಿನ್ನೆಲೆಯಲ್ಲಿ ಅಲ್ಲಿ ನಡೆಯುತ್ತಿರುವ ಉಪಚುನಾವಣೆಗಳ ಸಂದರ್ಭದಲ್ಲಿ ಕೊಟ್ಟ ಘೋಷಣೆ. ಒಂದು ಕಡೆ ಇದು 'ಮುಸ್ಲಿಂ–ಅಪಾಯ'ದ ಹಿನ್ನೆಲೆಯಲ್ಲಿ ಹಿಂದೂಗಳು ಒಂದಾಗಬೇಕು ಎಂಬ ಧಾರ್ಮಿಕ ಧ್ರುವೀಕರಣದ ಎಂದಿನ ಘೋಷಣೆ. ಆದರೆ ಯುಪಿಯಲ್ಲಿ ಬಿಜೆಪಿಯನ್ನು ಸೋಲಿಸಿದ್ದು ಪ್ರಮುಖವಾಗಿ ಅದರ ವಿರುದ್ಧ ದಲಿತರ ಮತ್ತು ಒಬಿಸಿಗಳ ಕ್ರೋಢೀಕರಣ. ಅದರಿಂದಾಗಿಯೇ ಧಾರ್ಮಿಕ ಧ್ರುವೀಕರಣ ಸಾಧ್ಯವಾಗದೆ ಹೋದದ್ದು. ಬಿಜೆಪಿಯೊಳಗೆ ಮೋದಿ–ಶಾ ಮತ್ತು ಯೋಗಿ ಮತ್ತಿತರರ ನಡುವಿನ ಅಂತರ್–ಕಲಹ ಸಹ ಈ ಘೋಷಣೆಗೆ ಕಾರಣ. ಈ ಎಲ್ಲ 'ವಿಭಜನೆ'ಗಳನ್ನು ಮೀರಿ ಐಕ್ಯತೆ ಸಾಧಿಸಬೇಕು ಎಂಬುದೂ ಅದರ ಆಶಯವಾಗಿತ್ತು. ಈ ಎಲ್ಲವೂ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದ ಮಟ್ಟಿಗೂ ನಿಜವಾಗಿತ್ತು. ಹಾಗಾಗಿ ಅದೇ ಅರ್ಥ ಮಹಾರಾಷ್ಟ್ರದಲ್ಲೂ ಇತ್ತು.

ಬಿಜೆಪಿ ಯಾವುದೇ ಚುನಾವಣೆಯಲ್ಲಿ 'ಹಿಂದುತ್ವ' ರಾಜಕಾರಣಕ್ಕೆ ಬಲಿಯಾದ ತನ್ನ ಕೋರ್ ಮತದಾರರನ್ನು ಉಳಿಸಿಕೊಳ್ಳಲು ಧಾರ್ಮಿಕ ಧ್ರುವೀಕರಣವನ್ನು ಪ್ರಯೋಗಿಸುತ್ತದೆ. ಅದರ ಭಾಗವಾಗಿ ರಾಜ್ಯ ಚುನಾವಣೆಗಳಲ್ಲಿ ಯೋಗಿ ಅವರನ್ನು ಕರೆಸಿ ಈ ಘೋಷಣೆಯ ಸುತ್ತ ವ್ಯಾಪಕ ಪ್ರಚಾರ ಮಾಡಿತ್ತು. ಬಿಜೆಪಿ ಮತ್ತು ಮಹಾಯುತಿಯೊಳಗೆ ಬಿಜೆಪಿಯ ಪಂಕಜಾ ಮುಂಡೆ ಮತ್ತು ಹಲವು ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದ ಎನ್‌ಸಿಪಿಯ ಅಜಿತ್ ಪವಾರ್ 'ಇದು ಇಲ್ಲಿ ಬೇಡ'ವೆಂದು ವಿರೋಧಿಸಿದ್ದರೂ ಅದನ್ನು ಮುಂದುವರೆಸಲಾಗಿತ್ತು. ತನ್ನ 'ಮುಸ್ಲಿಂ–



ದ್ವೇಷ'ವನ್ನು ಸಾಬೀತು ಪಡಿಸಲು ಮಹಾಯುತಿಯ (ಅಜಿತ್ ಪವಾರ್ ಎನ್‌ಸಿಇಯ) ಅಭ್ಯರ್ಥಿ ನವಾದ್ ಮಲ್ಲಿಕ್‌ಗೆ ಬಿಜೆಪಿ ಬೆಂಬಲಿಸುವುದಿಲ್ಲವೆಂದು ಘೋಷಿಸಿತ್ತು, ಅವರು ಸೋತಿದ್ದು ಆಯಿತು. ಇನ್ನೊಂದು ಕಡೆ ಮನೆ–ಮನೆ ಮತ್ತು ಪ್ರಚಾರದ ವಲಯಗಳಿಗೆ ಅನುಸಾರವಾಗಿ, ಈ ಘೋಷಣೆಗೆ ಬೇರೆ ಬೇರೆ ರೀತಿಯ ಅರ್ಥ ಕಲ್ಪಿಸಲಾಯಿತು ಎಂದು ಹಲವು ವೀಕ್ಷಕರು ಹೇಳಿದ್ದಾರೆ. ಉಚ್ಚ ಜಾತಿಗಳವರಲ್ಲಿ ಮರಾಠಾ, ಒಬಿಸಿ, ದಲಿತರು ತಮ್ಮ ಅಡಿಯಲ್ಲಿ ಇರಬೇಕೆ ವಿನಹ, ತಮ್ಮ ವಿರುದ್ಧ ಒಟ್ಟಾಗಿರಲು ಬಿಡಬಾರದೆಂದೂ, ಒಬಿಸಿ ವಲಯಗಳಲ್ಲಿ ಮರಾಠಾ ಪ್ರಾಬಲ್ಯ ಮುರಿಯಲು ಎಲ್ಲರೂ ಒಟ್ಟಾಗಬೇಕೆಂದೂ, ಮರಾಠಾ ವಲಯಗಳಲ್ಲಿ ದಲಿತ–ಮುಸ್ಲಿಂ ಐಕ್ಯತೆ ವಿರುದ್ಧ ಮಹಾಯುತಿಯನ್ನು ಬೆಂಬಲಿಸಬೇಕೆಂದೂ, ದಲಿತ ವಲಯಗಳಲ್ಲಿ ಮುಸ್ಲಿಮರು ಒಬಿಸಿ ನಿಮ್ಮ ಶತ್ರುಗಳು... ಹೀಗೆ ಈ ಘೋಷಣೆಯನ್ನು ಹಲವು ರೀತಿಯಲ್ಲಿ ತಳಮಟ್ಟದಲ್ಲಿ ಬಳಸಲಾಯಿತು ಎನ್ನಲಾಗಿದೆ. ಮಹಾಯುತಿಯ ಒಳಗಿನ ಪಕ್ಷಗಳ ಮತ್ತು ಬಣಗಳ ನಡುವೆ ಐಕ್ಯತೆ ತರಲೂ ಇದನ್ನು ಬಳಸಲಾಯಿತು.

ವಿರೋಧ ಪಕ್ಷಗಳು ಈ ಘೋಷಣೆಯ ವಿರುದ್ಧ ತೀವ್ರ ಆಕ್ಷೇಪ ಎತ್ತಿದಾಗ, ಸಾಮಾಜಿಕ ಮಾಧ್ಯಮಗಳಲ್ಲೂ ತೀವ್ರ ಪ್ರತಿಕ್ರಿಯೆ ಕಾಣಿಸಿಕೊಂಡಾಗ ಮತ್ತು ಈ ಘೋಷಣೆ ಬ್ಯೂಮರಾಂಗ್ ಆಗುವ ಭಯದಿಂದ ಪ್ರಧಾನಿ ಮೋದಿ "ಏಕ್ ಹೈ ತೋ ಸೇಫ್ ಹೈ" ಎಂಬ ಇನ್ನೊಂದು ಘೋಷಣೆ ಕೊಟ್ಟರು. ಇದಕ್ಕೂ ತಳಮಟ್ಟದಲ್ಲಿ ಮೇಲೆ ಹೇಳಿದ ವಿವಿಧ ಆಯಾಮಗಳೂ ಅರ್ಥಗಳೂ ಇದ್ದವು. ಆದರೆ ಹೂರಣ ಅದೇ ಇದ್ದರೂ, ಇದು ಹೆಚ್ಚು ಸಕಾರಾತ್ಮಕವಾಗಿ ಕಾಣುವ ಮತ್ತು ಸೇಫ್ ಘೋಷಣೆಯಾಗಿತ್ತು. ಅದಕ್ಕೆ ಅರಾಜಕತೆ, ಅಭದ್ರತೆ, ದೇಶ–ವಿರೋಧಿ, ಸಮಾಜ–ವಿರೋಧಿ, ಜಾತಿವಾದಿ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಐಕ್ಯತೆ ಮುಂತಾದ ಸಕಾರಾತ್ಮಕ ವ್ಯಾಖ್ಯಾನ ಕೊಡುವ ಸಾಧ್ಯತೆಯಿತ್ತು.

ಈ ಘೋಷಣೆಗಳು ಎಷ್ಟರ ಮಟ್ಟಿಗೆ ಮಹಾ ವಿಜಯಕ್ಕೆ ಕಾರಣವಾದವು ಎಂದು ಹೇಳುವುದು ಕಷ್ಟ. ಆದರೆ ಧಾರ್ಮಿಕ ಸೇರಿದಂತೆ ಎಲ್ಲಾ ರೀತಿಯ ಧ್ರುವೀಕರಣವು ಬಿಜೆಪಿಯ ಬತ್ತಳಿಕೆಯಲ್ಲಿರುವ ಪರಿಣಾಮಕಾರಿ ಅಸ್ತ್ರಗಳಲ್ಲಿ ಒಂದು. ಅದು ತಮ್ಮ ಕೋರ್ ಮತದಾರರನ್ನು ಕಾಯ್ದುಕೊಳ್ಳುವ ಜತೆ ಇತರ ಹಲವು ಜನವಿಭಾಗಗಳನ್ನು ಗೆದ್ದುಕೊಳ್ಳುವುದರಲ್ಲಿ ಒಂದು ಅಂಶವಾಗಿತ್ತೆಂದು ಸೇಫ್ ಆಗಿ ಹೇಳಬಹುದು.

'ಹಿಂದುತ್ವ' ರಾಜಕಾರಣ ಜತೆ ಗುರುತಿಸಲ್ಪಟ್ಟ ಶಿವಸೇನಾ ಮತ್ತು 'ಸೆಕ್ಯುಲರ್' ಎಂದು ಗುರುತಿಸಲ್ಪಟ್ಟ ಎನ್‌ಸಿಪಿ ಒಡೆದು ಬಣಗಳಾಗಿ ಎರಡೂ ಕೂಟಗಳಲ್ಲಿ ಇರುವುದರಿಂದ 'ಕೋಮುವಾದ' ಅಥವಾ 'ಹುಸಿ ಸೆಕ್ಯುಲರ್' ಎಂಬುದನ್ನು ಪ್ರಚಾರ ವಿಷಯವಾಗಿಸುವುದು ಇಬ್ಬರಿಗೂ ಇರುಸು ಮುರುಸಿನ ವಿಷಯವಾಗಿತ್ತು. ಬಹುಪಾಲು 'ಸೆಕ್ಯುಲರ್' ನೆಲೆ ಹೊಂದಿರುವ ವಿಕಾಸ ಆಘಾಡಿಯ ಭಾಗವಾಗಿ 'ಹಿಂದುತ್ವ' ಅಥವಾ ಧಾರ್ಮಿಕ ಧ್ರುವೀಕರಣಕ್ಕೆ ತೊಡಗುವುದು ಉದ್ಧವ್ ಶಿವಸೇನಾ ಬಣಕ್ಕೆ ಕಷ್ಟವಾಗಿತ್ತು. ಆದರೆ ಶಿಂಧೆ ಶಿವಸೇನಾ ಬಣ ಯಾವುದೇ ಎಗ್ಗಿಲ್ಲದೆ 'ಹಿಂದುತ್ವ' ರಾಜಕಾರಣ ಮಾಡಿತಲ್ಲದೆ, ಉದ್ಧವ್ ಶಿವಸೇನಾ ಬಣದ ಮೇಲೆ ತನ್ನ ಮೂಲ ಸಿದ್ಧಾಂತವನ್ನು ತೊರೆದ ಆರೋಪ ಮಾಡಿತು. ಇದೂ ವಿಕಾಸ ಆಘಾಡಿಯ ಮತಗಳಿಕೆ ಮೇಲೆ ಪರಿಣಾಮ ಬೀರಿರಬಹುದು.

ಜಾತಿ ಜನಗಣತಿ, ಜಾತಿ ಸಂಯೋಜನೆ, ಹಣ–ಅಧಿಕಾರದ ಬಲ

ಜಾತಿ ಜನಗಣತಿಯ ಪರ ಗಟ್ಟಿ ಘೋಷಣೆ, ಬಿಜೆಪಿಗೆ ಭಾರೀ ಬಹುಮತ ('ಚಾರ್ ಸೌ ಪಾರ್') ಬಂದರೆ ಸಂವಿಧಾನಕ್ಕೂ ಮೀಸಲಾತಿಗೂ ಅಪಾಯವಿದೆ ಎಂಬ ದಲಿತರಲ್ಲಿ ಮತ್ತು ಒಬಿಸಿಗಳಲ್ಲಿ ಆತಂಕ, ಬಿಜೆಪಿಯ ವಿರುದ್ಧ ಮರಾಠಾ ಆಕ್ರೋಶ... ಇವೆಲ್ಲ ಒಟ್ಟಾಗಿ ವಿಕಾಸ ಅಘಾಡಿಯ ಪರವಾಗಿ ಲೋಕಸಬಾ ಚುನಾವಣೆಯಲ್ಲಿ ಅಲ್ಪಸಂಖ್ಯಾತರಲ್ಲದೆ ದಲಿತ, ಒಬಿಸಿ, ಮರಾಠಾಗಳ ಮತ ಕ್ರೋಢೀಕರಣವಾಗಿತ್ತು. ಈ ಬಾರಿ ಅದು ಆಗಿಲ್ಲ ಎಂಬುದು ಸ್ಪಷ್ಟ. ಆದರೆ ಯಾಕೆ, ಹೇಗೆ ಎಂಬುದು ಅಸ್ಪಷ್ಟ. ಇವುಗಳ ಅಪಾಯ ಕಂಡು ಬಿಜೆಪಿ ತಕ್ಕ ಪ್ರತಿಕ್ರಮಗಳನ್ನು ತೆಗೆದುಕೊಂಡಿತ್ತು. ಮರಾಠಾ ಮೀಸಲಾತಿ ಚಳುವಳಿಯನ್ನು ಮುಖ್ಯ ಹಕ್ಕೊತ್ತಾಯಗಳನ್ನು ಒಪ್ಪಿಕೊಂಡು ಆಕ್ರೋಶವನ್ನು ಶಮನ ಮಾಡಿತು. ಮರಾಠಾ ಪ್ರಾಬಲ್ಯ ಮುರಿಯಲು ಧಂಗಾರ ಮತ್ತಿತರ ಒಬಿಸಿ ಸಮುದಾಯಗಳನ್ನು ಒಲಿಸುವ ಪ್ರಯತ್ನ ನಡೆಸಿತು. ದಲಿತ ಮತ್ತು ಮುಸ್ಲಿಂ ಮತಗಳ ಕ್ರೋಢೀಕರಣ ತಡೆಯಲು ಈ ಸಮುದಾಯಗಳ ಪಕ್ಷಗಳ ಮತ್ತು ಪಕ್ಷೇತರ ಅಭ್ಯರ್ಥಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಸ್ಪರ್ಧೆಗೆ ಕುಮ್ಮಕ್ಕು (ಪರೋಕ್ಷವಾಗಿ ಹಣ, ಮತ್ತಿತರ ಸವಲತ್ತು) ಕೊಡಲಾಯಿತೆನ್ನಲಾಗಿದೆ. ಬಿಎಸ್‌ಪಿ (237), ಹಿಂದೆ ಯುಪಿಎ ಯಲ್ಲಿದ್ದ ವಂಚಿತ ಬಹುಜನ ಅಘಾಢಿ(200), ಬಹುಜನ ವಿಕಾಸ ಅಘಾಢಿ ಸಹ ಭಾರೀ ಸಂಖ್ಯೆಯ ಸೀಟುಗಳಲ್ಲಿ ಸ್ಪರ್ಧಿಸಿದವು. ಇವರಲ್ಲದೆ ದೊಡ್ಡ ಸಂಖ್ಯೆಯಲ್ಲಿ ಆಯಾ ಕ್ಷೇತ್ರದಲ್ಲಿ ವಿಕಾಸ ಅಘಾಢಿ ಸ್ಪರ್ಧಿಯ ಮತ ಒಡೆಯಲು ನೆರವಾಗುವ ದೊಡ್ಡ ಸಂಖ್ಯೆಯ ಪಕ್ಷೇತರರನ್ನು ಸ್ಪರ್ಧೆಗೆ ಇಳಿಸಲಾಯಿತು. ಇದನ್ನು ಸಾಧ್ಯ ಮಾಡಲು ಅಪಾರ ಹಣ, ಅಧಿಕಾರಗಳ ದುರ್ಬಳಕೆ ಮಾಡಲಾಯಿತು ಎನ್ನಲಾಗಿದೆ. 2019ರಲ್ಲಿ ಇದೇ ತಂತ್ರವನ್ನು ಅನುಸರಿಸಲಾಗಿತ್ತು. ಇದನ್ನು ಬಹುಮಟ್ಟಿಗೆ ಲೋಕಸಭಾ ಚುನಾವಣೆಯಲ್ಲಿ ಪ್ರಯೋಗಿಸಲಾಗಿತ್ತಾದರೂ ಅದು ಪರಿಣಾಮಕಾರಿಯಾಗಿರಲಿಲ್ಲ. ಆದರೆ ಈ ಚುನಾವಣೆಯಲ್ಲಿ ಹೆಚ್ಚಾಗಿ ಪರಿಣಾಮಕಾರಿಯಾಗಿದೆ ಎನ್ನಲಾಗಿದೆ. ಹಿಂದೆ ಹೇಳಿದ ಹಾಗೆ ಇತರ ಪಕ್ಷಗಳ ಮತ್ತು ಪಕ್ಷೇತರರ ಮತಗಳಿಕೆ ಶೇ.7 ರಷ್ಟು ಹೆಚ್ಚಾಗಿದೆ. ಮಹಾಯುತಿಗಿಂತ ಹೆಚ್ಚಾಗಿ ಇತರ ಪಕ್ಷಗಳ ಮತ್ತು ಪಕ್ಷೇತರರಿಗೆ, ವಿಕಾಸ ಅಘಾಢಿಯ ಮತಗಳನ್ನು ಕಳೆದುಕೊಂಡಿದೆ ಎಂಬುದನ್ನು ಹಿಂದೆ ಹೇಳಿದ ಅಂಕೆಸಂಖ್ಯೆಗಳು ಸೂಚಿಸುತ್ತವೆ. ಇದಲ್ಲದೆ ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಮತದಾರರಿಗೆ ಹಣ ಇತರ ಉಡುಗೊರೆಗಳ ಲಂಚದ ಹೊಳೆಯೇ ಹರಿದಿದೆ ಎನ್ನಲಾಗಿದೆ.

ಬಿಜೆಪಿಗೆ ಭಾರೀ ಬಹುಮತ ಬರದೆ ಸಂವಿಧಾನ–ಮೀಸಲಾತಿಗಳಿಗೆ ಅಪಾಯ ಸದ್ಯಕ್ಕಿಲ್ಲ ಮತ್ತು ಜಾತಿ ಜನಗಣತಿಯನ್ನು ತಾನು ಆಳುವ ಪಕ್ಷ ರಾಜ್ಯಗಳಲ್ಲಿ ಕಾಂಗ್ರೆಸ್ ಜಾರಿ ಮಾಡದಿರುವುದು– ಇವು ಪ್ರಮುಖ ವಿಷಯವಾಗದೆ ಬಿಜೆಪಿಗೆ ಪ್ರತಿಕೂಲವಾಗದಿರುವುದು ಕಾರಣವಿರಬಹುದು. ಅಥವಾ ಬಿಜೆಪಿಯ ಪ್ರತಿಕ್ರಮಗಳು ಈ ಸಾಧ್ಯತೆಯನ್ನು ಚಿವುಟಿ ಹಾಕಿರಬಹುದು.

ಬಿಜೆಪಿ ಕೇಂದ್ರ ಸರಕಾರ ಮಹಾರಾಷ್ಟ್ರದಲ್ಲಿ ಗೆಲ್ಲಲು ಶತಾಯ ಗತಾಯ ಎಲ್ಲ ಅಧಿಕಾರಗಳನ್ನು ದುರ್ಬಳಕೆ ಮಾಡಿತು. ನಾಲ್ಕು ರಾಜ್ಯಗಳ ಚುನಾವಣೆಯನ್ನು ಒಟ್ಟಿಗೆ ಮಾಡದೆ ಮಹಾರಾಷ್ಟ್ರ ಚುನಾವಣೆ ಕೊನೆಯಲ್ಲಿ ನಡೆಯುವ ಹಾಗೆ ನೋಡಿಕೊಂಡಿತು. ಇದಕ್ಕೆ ತಕ್ಕ ವೇಳಾಪಟ್ಟಿಯನ್ನು ಚುನಾವಣಾ ಕಮಿಶನ್ ಸಿದ್ದ ಪಡಿಸಿತು. ಎಂದಿನಂತೆ ಪ್ರಧಾನಿಯಿಂದ ಆರಂಭಿಸಿ ಬಿಜೆಪಿಯ ನಾಯಕರ ಚುನಾವಣಾ ಸಂಹಿತೆಯ ಸತತ ಉಲ್ಲಂಘನೆಗಳನ್ನು ನಿರ್ಲಕ್ಷಿಸಿತು. ವಿರೋಧ ಪಕ್ಷಗಳ ನಾಯಕರ ಮೇಲೆ ಇಡಿ–ಸಿಬಿಐ ದಾಳಿಗಳು ಮುಂದುವರೆದವು.

ವಿಕಾಸ ಅಘಾಢಿಯ ಕಾರ್ಯವ್ಯೂಹ, ಕಾರ್ಯತಂತ್ರಗಳ ನ್ಯೂನತೆಗಳು

ಲೋಕಸಭಾ ಚುನಾವಣೆ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಬಿಜೆಪಿ ಮತ್ತು ಮಹಾಯುತಿ ವಿಧಾನಸಭೆ ಚುನಾವಣೆಗೆ ತಮ್ಮ ಕಾರ್ಯವ್ಯೂಹ, ಕಾರ್ಯತಂತ್ರಗಳನ್ನು ಹೆಣೆಯಲು ಆರಂಭಿಸಿದವು. ಮಹಾಯುತಿ ಮತ್ತು ಬಿಜೆಪಿಗಳೊಳಗೆ ಸಾಕಷ್ಟು ಸಮಸ್ಯೆಗಳಿದ್ದರೂ ಪಕ್ಷಗಳಿಗೆ ಕ್ಷೇತ್ರಗಳ ಹಂಚಿಕೆ, ಸ್ಪರ್ಧಿಗಳ ಆಯ್ಕೆ, ಪ್ರಚಾರ ಮತ್ತು ಮತದಾರರ ಸಂಪರ್ಕಕ್ಕೆ ರಾಜ್ಯ ಮತ್ತು ಕ್ಷೇತ್ರವಾರು ಬೂತ್, ಮನೆ–ಮನೆವರೆಗೆ ಉಸ್ತುವಾರಿಗಳ, ಕಾರ್ಯಕರ್ತರ ನೇಮಕ, ಎಲ್ಲಾ ಮಾಧ್ಯಮಗಳ ಮೂಲಕ ಪ್ರಚಾರಕ್ಕೆ ಸಾಮಗ್ರಿ, ಅದರ ಹಂಚಿಕೆ, ಅದಕ್ಕೆ ಪ್ರತ್ಯೇಕ ಸಂಘಟನೆ, ಇವೆಲ್ಲದಕ್ಕೆ ಸಂಪನ್ಮೂಲಗಳ ಹೊಂಚುವಿಕೆ–ಹೀಗೆ ಚುನಾವಣಾ ಯಂತ್ರ ಸಜ್ಜುಗೊಳಿಸಿ ಕೆಲಸಕ್ಕಿಳಿಯಿತು. ಆದರೆ ಮಹಾ ವಿಕಾಸ ಅಘಾಢಿ ಇದರಲ್ಲಿ ಸೋತಿದ್ದು ಅದರ ಸೋಲಿಗೆ ಮಹಾಯುತಿಯ ವಿಜಯಕ್ಕೆ ಪ್ರಮುಖ ಕಾರಣಗಳಲ್ಲಿ ಒಂದು. ಈ ಎಲ್ಲವನ್ನು ಅದು ಮಾಡಲೇ ಇಲ್ಲ ಎಂದಲ್ಲ, ಅಪಾರ ಸಂಪನ್ಮೂಲ (ಹಣ, ಕಾರ್ಯಕರ್ತರು, ಸಂಘಟನೆ, ಜನಸಂಪರ್ಕ, ಪ್ರಭಾವ) ಇರುವ ಬಿಜೆಪಿ ನಾಯಕತ್ವದ ಮಹಾಯುತಿಯ ವಿರುದ್ಧ ಗೆಲ್ಲಲು ಬೇಕಾದಷ್ಟು ಮುತುವರ್ಜಿ, ಗಂಭೀರತೆ, ತುರ್ತುಗಳಿಂದ ಅವನ್ನು ಮಾಡಲಿಲ್ಲ. ಬದಲಿಗೆ ತಾವಾಗಲೇ ಗೆದ್ದು ಬಿಟ್ಟಿದ್ದೇವೋ ಅಥವಾ ಗೆಲ್ಲುವುದು ನಿಶ್ಚಿತವೋ ಎಂಬಂತೆ ಪಕ್ಷಗಳ ನಡುವಿನ ಮುಖ್ಯಮಂತ್ರಿ ಮತ್ತು ಹೆಚ್ಚಿನ ಸೀಟುಗಳಿಗೆ

ಪುಟ 10 ಕ್ಕೆ

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿ: ಆರೆಸ್ಸೆಸ್–ಬಿಜೆಪಿ ಹುಸಿ ಕಣ್ಣೀರು

ಗರಿಷ್ಠ ಮಟ್ಟಕ್ಕೆ ತಲುಪಿದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ, ಶೇ.10 ಹಣದುಬ್ಬರ ದರ, ಕೃಷಿಗೆ ಹಾನಿ, ಹಲವು ಕಾರ್ಖಾನೆಗಳು ಮುಚ್ಚುವಿಕೆ, ಉತ್ಪಾದಕತೆಯಲ್ಲಿ ಕಡಿತ, ತಾಂಡವವಾಡುತ್ತಿರುವ ನಿರುದ್ಯೋಗ, ಇವೆಲ್ಲವೂ ಬಾಂಗ್ಲಾದೇಶದ ಜನರ ಬದುಕಿನ ಮೇಲೆ ಪರಿಣಾಮ ಬೀರಿದೆ. ಜನರ ಮನಸ್ಸಿನ ಕುದಿಯುವಿಕೆ ಹೆಚ್ಚಾಗಿದೆ. ಈ ಎಲ್ಲಾ ಕಾರಣಗಳಿಂದ ಅಲ್ಲಿನ ವಿದ್ಯಾರ್ಥಿಗಳು ದಂಗೆ ಎದ್ದರು. ಅಂತಿಮವಾಗಿ ಶೇಖ್ ಹಸೀನಾ ದೇಶದಿಂದ ಓಡಿಹೋಗಿ ಭಾರತದಲ್ಲಿ ರಾಜಕೀಯ ಆಶ್ರಯ ಪಡೆದರು. ನಂತರವೂ ಜನರ ಸಂಕಷ್ಟಗಳಿಗೆ ಪರಿಹಾರದ ದಾರಿ ಕಾಣುತ್ತಿಲ್ಲ. ಜನರಲ್ಲಿ ಸ್ವಾಭಾವಿಕವಾಗಿ ಕಾಣಿಸಿಕೊಳ್ಳುವ ಇಂತಹ ಬಂಡಾಯದ ಅವಧಿಯಲ್ಲಿ ಬಲಪಂಥೀಯರು, ಪ್ರತಿಗಾಮಿ ಶಕ್ತಿಗಳು ಮತ್ತು ಮತೀಯ ಸಂಘಟನೆಗಳು ಕೇಸರಿನ ಕೊಳದಲ್ಲಿ ಮೀನು ಹಿಡಿಯಲು ಮುಂದಾಗುತ್ತವೆ. ಬಾಂಗ್ಲಾದೇಶವೂ ಇದಕ್ಕೆ ಹೊರತಾಗಿಲ್ಲ. ಈ ಸನ್ನಿವೇಶದಲ್ಲಿ ಮಾರ್ಕ್ಸ್‌ವಾದಿಗಳು ಏನು ಮಾಡಬೇಕು?

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿ ನಡೆಯುತ್ತಿದೆ, ಅವರಿಗೆ ರಕ್ಷಣೆ ಇಲ್ಲ ಎಂಬ ಅಭಿಯಾನ ಭಾರತದಲ್ಲಿ ಹುಟ್ಟಿಕೊಳ್ಳುತ್ತಿದೆ. ಸಾಮಾನ್ಯ ಜನರ ವಿಚಾರಕ್ಕೆ ಬಂದರೆ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿ ಮಾಡುತ್ತಿರುವವರು ಯಾರು ಎಂಬ ಪ್ರಶ್ನೆಯನ್ನು ಇದು ಹುಟ್ಟುಹಾಕುತ್ತದೆ. ಮುಸಲ್ಮಾನರಿಂದ ದಾಳಿಯೇ? ಹಾಗೊಂದು ವೇಳೆ ನಡೆಯುತ್ತಿದ್ದರೆ, ಮುಸ್ಲಿಮರು ಹಿಂದೂ ವಿರೋಧಿಗಳು ಎಂಬ ಕಲ್ಪನೆ ಹುಟ್ಟಿಕೊಳ್ಳುತ್ತದೆ. ಇದು ಹಿಂದೂ ಉಗ್ರಗಾಮಿ ಸಂಘಟನೆ ಆರ್‌ಎಸ್‌ಎಸ್ ಮತ್ತು ಭಾರತದಲ್ಲಿ ಅದರ ರಾಜಕೀಯ ಅಂಗ ಬಿಜೆಪಿಯಿಂದ ಯೋಜಿಸಲಾಗಿದೆ ಮತ್ತು ರಚಿಸಲಾಗಿದೆ. ಈ ಸಂದರ್ಭದಲ್ಲಿ ಎಡಪಕ್ಷಗಳು ಇದನ್ನು ಹೇಗೆ ಎದುರಿಸುತ್ತವೆ ಎಂಬ ಪ್ರಶ್ನೆ ಮಹತ್ವದ್ದಾಗಿದೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳೋಣ.

ಜಾತ್ಯತೀತತೆ ಮತ್ತು ಬಾಂಗ್ಲಾದೇಶ

ಇಂದಿನ ಬಾಂಗ್ಲಾದೇಶ 1947 ರಲ್ಲಿ ಪಾಕಿಸ್ತಾನದ ವಿಭಜನೆಯ ಸಮಯದಲ್ಲಿ ಪೂರ್ವ ಪಾಕಿಸ್ತಾನವಾಗಿತ್ತು. ಭೌಗೋಳಿಕ ಕಾರಣದಿಂದಲೂ, ಜನಾಂಗ, ಭಾಷೆ ಮತ್ತು ಸಂಸ್ಕೃತಿಯ ವಿಷಯದಲ್ಲಿ ಒಗ್ಗಟ್ಟಾದ ಜನರ, ಅದರಲ್ಲೂ ವಿದ್ಯಾರ್ಥಿಗಳ ದಂಗೆಯಿಂದ ಬಾಂಗ್ಲಾದೇಶ ರೂಪುಗೊಂಡಿತು. 50 ವರ್ಷಗಳ ಹಿಂದೆ ಶೇಖ್ ಮುಜಿಬುರ್ ರೆಹಮಾನ್ ನೇತೃತ್ವದ ಸರ್ಕಾರ ರಚನೆಯಾದಾಗ, ಅದು 'ಪೀಪಲ್ಸ್ ರಿಪಬ್ಲಿಕ್ ಆಫ್ ಬಾಂಗ್ಲಾದೇಶ' ಎಂದು ಘೋಷಿಸಿತು. ಅದರ ಹೊರತಾಗಿ, ದೇಶದ ಸಂವಿಧಾನದ ಪೀಠಿಕೆಯು "ರಾಷ್ಟ್ರೀಯತೆ, ಸಮಾಜವಾದ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಗೆ ಬದ್ಧವಾಗಿದೆ" ಎಂದು ಹೇಳುತ್ತದೆ. ಮುಜಿಬುರ್ ನೇತೃತ್ವದ ಪಕ್ಷದ ಹೆಸರನ್ನು ಸಾಮಾನ್ಯವಾಗಿ 'ಅವಾಮಿ ಮುಸ್ಲಿಂ ಲೀಗ್' ನಿಂದ 'ಅವಾಮಿ ಲೀಗ್' (ಪೀಪಲ್ಸ್ ಫ್ರಂಟ್) ಎಂದು ಬದಲಾಯಿಸಲಾಯಿತು. ಶೇಖ್ ಹಸೀನಾ ಅವರು 2009 ರಿಂದ 2024 ರವರೆಗೆ ಸತತ ಹದಿನೈದು ವರ್ಷಗಳ ಕಾಲ ಗೆದ್ದು ಆಡಳಿತ ನಡೆಸಿದ್ದು ಇದೇ ಪಕ್ಷದ ಹೆಸರಿನೊಂದಿಗೆ. ಅವರ ಆಡಳಿತವು ತುಲನಾತ್ಮಕವಾಗಿ ಪ್ರಜಾಸತ್ತಾತ್ಮಕವಾಗಿತ್ತು.

ಹಸೀನಾಳನ್ನು ಹೊರಹಾಕಲು ಹೋರಾಟ ಏಕೆ?

ವಿಶ್ವ ಪರಿಸರವು ದೇಶೀಯ ಪರಿಸರವನ್ನು ನಿರ್ಧರಿಸುತ್ತದೆ ಎಂಬ ಅಂಶವನ್ನು ಮಾರ್ಕ್ಸ್‌ವಾದಿಗಳು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಬಾಂಗ್ಲಾದೇಶದ ವಿಷಯದಲ್ಲಿ ಅದು ಎಷ್ಟು ಸತ್ಯ ಎಂಬುದು ಸಾಬೀತಾಗಿದೆ. 2010 ರಲ್ಲಿ ಶೇಕಡಾ 11.8 ರಷ್ಟಿದ್ದ ಬಡತನದ ಮಟ್ಟವನ್ನು 2022 ರ ವೇಳೆಗೆ ಶೇಕಡಾ 5 ಕ್ಕೆ ಇಳಿಸಲಾಗಿದೆ ಎಂದು ಹಸೀನಾ ಅವರ ಸರ್ಕಾರವನ್ನು ವಿಶ್ವ ಬ್ಯಾಂಕ್ ಶ್ಲಾಘಿಸಿದೆ. ಆದರೆ ಅದರ ಒಟ್ಟು ದೇಶೀಯ ಉತ್ಪನ್ನವು 2019 ರಲ್ಲಿ 7.9 ಶೇಕಡಾದಿಂದ 2020 ರಲ್ಲಿ 3.4 ಶೇಕಡಾಕ್ಕೆ ಕುಸಿದಿದೆ. 2021–22 ರ ಹಣಕಾಸು ವರ್ಷದಲ್ಲಿ ಅದರ ಬಾಹ್ಯ ಸಾಲ ಶೇಕಡಾ 238 ರಷ್ಟು ಏರಿಕೆಯಾಗಿ 95.86 ಟ್ರಿಲಿಯನ್ ಡಾಲರ್‌ಗೆ ತಲುಪಿದೆ. ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಇದನ್ನು ಹೊಗಳಿದರೂ ಜನರ ಜೀವನಕ್ಕೆ ಇದು ಸಹಕಾರಿಯಾಗಲಿಲ್ಲ. ಇದು ಒಳಗೆ ಉರಿಯುತ್ತಿರುತ್ತದೆ. ಜನರಲ್ಲಿನ ಈ ಸಹನೆಯನ್ನು ಉಕ್ರೇನ್ ಯುದ್ಧವು ಮತ್ತಷ್ಟು ಕೆಣಕಿತು. ಇದು ಬಾಂಗ್ಲಾದೇಶದ ಆರ್ಥಿಕತೆಯನ್ನು ತಲೆಕೆಳಗಾಗಿಸಿತು. ಯುದ್ಧದಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಗರಿಷ್ಠ ಮಟ್ಟಕ್ಕೆ ತಲುಪಿತು. ಹಣದುಬ್ಬರ ದರ 10 ಪ್ರತಿಶತವಾಯ್ತು. ತ್ರಿಪಕ್ಷೀಯ ನೀತಿಯಿಂದ ಕೃಷಿಗೆ ಹಾನಿಯಾಯಿತು. ಹಲವು ಕಾರ್ಖಾನೆಗಳ ಮುಚ್ಚಿದವು. ಇದರಿಂದಾಗಿ ಅಲ್ಲಿನ ಉತ್ಪಾದಕತೆಯಲ್ಲಿ ಕಡಿತವಾಯಿತು. ಇದು ಜನರ ಬದುಕಿನ ಮೇಲೆ ಪರಿಣಾಮ ಬೀರಿದೆ. ಆರ್ಥಿಕ ಹಿಂಜರಿತದಿಂದಾಗಿ ಖಾಸಗಿ ವಲಯದ ಉದ್ಯೋಗವೂ ಕುಗ್ಗುತ್ತಿದ್ದು, ಜನರ ಮನಸ್ಸಿನ ಕುದಿಯುವಿಕೆ ಹೆಚ್ಚಾಗಿದೆ. ನಿರುದ್ಯೋಗವಂತೂ ತಾಂಡವವಾಡುತ್ತಿದೆ. ದಕ್ಷಿಣ ಏಷ್ಯಾದ ಯುವಕರಲ್ಲಿ ಅತಿ ಹೆಚ್ಚು ನಿರುದ್ಯೋಗ ದರ ಬಾಂಗ್ಲಾದೇಶದಲ್ಲಿ 20 ಪ್ರತಿಶತಕ್ಕೆ ಏರಿತು.

ಉತ್ತೇಜಕ ಕಾರ್ಯಕ್ರಮಗಳು ಅದನ್ನು ಸಾಧಿಸಬಹುದೇ?

ಇದೆಲ್ಲದಕ್ಕೂ ಪರ್ಯಾಯ ಆರ್ಥಿಕ ನೀತಿಯ ಬಗ್ಗೆ ಯೋಚಿಸಲು ಸಾಧ್ಯವಾಗದಿದ್ದಾಗ ರಿಯಾಯಿತಿಗಳನ್ನು ಘೋಷಿಸುವುದು ಬಂಡವಾಳಶಾಹಿ ಮನೋಭಾವದ ಪಕ್ಷಗಳು ಮತ್ತು ಸರ್ಕಾರಗಳ ಅಭ್ಯಾಸವಾಗಿದೆ. ಹಸೀನಾ ಮಾಡಿದ್ದು ಅದನ್ನೇ. ಸ್ವಾತಂತ್ರ್ಯ ಹೋರಾಟಗಾರರ ವಾರಸುದಾರರಿಗೆ ಶೇ 30ರಷ್ಟು ಮೀಸಲಾತಿ ನೀಡುವುದಾಗಿ ಅವರು ಘೋಷಿಸಿದರು. ಈಗಾಗಲೇ ನಿರುದ್ಯೋಗದಿಂದ ನಲುಗಿ ಹೋಗಿರುವ ಯುವಜನಾಂಗ, ಭವಿಷ್ಯದ ಕನಸು ಹೊತ್ತ ವಿದ್ಯಾರ್ಥಿಗಳು ಈ ಮೀಸಲಾತಿ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಸಾರ್ವಜನಿಕರು ಕೂಡಾ ಅವರಿಗೆ ಬೆಂಬಲವಾಗಿ ನಿಂತರು. 1952ರ ಭಾಷಾ ಹೋರಾಟದಲ್ಲಿ ಮತ್ತು ಪೂರ್ವ ಪಾಕಿಸ್ತಾನವು ಬಾಂಗ್ಲಾದೇಶವಾಗಿ ಪರಿವರ್ತಿಸುವಲ್ಲಿ ನಡೆದ 1971 ರ ಸ್ವಾತಂತ್ರ್ಯ ಹೋರಾಟದಲ್ಲಿ ದೇಶದ ವಿದ್ಯಾರ್ಥಿಗಳೇ ಮುಂಚೂಣಿ ಶಕ್ತಿಗಳಾಗಿದ್ದರು ಎಂಬುದನ್ನು ಸ್ಮರಿಸಬೇಕು. ಅಂತಿಮವಾಗಿ ಶೇಖ್ ಹಸೀನಾ ದೇಶದಿಂದ ಓಡಿಹೋಗಿ ಭಾರತದಲ್ಲಿ ರಾಜಕೀಯ ಆಶ್ರಯ ಪಡೆದರು. ಆರ್ಥಿಕ ನೊಬೆಲ್ ಪ್ರಶಸ್ತಿ ಪುರಸ್ಕೃತ ಮುಹಮ್ಮದ್ ಯೂನಸ್ ಅವರು ಆಡಳಿತದಲ್ಲಿನ ನಿರ್ವಾತವನ್ನು ತುಂಬಿದ್ದಾರೆ.



ಕೇಸರಿನ ಕೊಳದಲ್ಲಿ ಮೀನು ಹಿಡಿಯುವ ಬಲಪಂಥೀಯರು

ಜನರಲ್ಲಿ ಸ್ವಾಭಾವಿಕವಾಗಿ ಕಾಣಿಸಿಕೊಳ್ಳುವ ಬಂಡಾಯದ ಅವಧಿಯಲ್ಲಿ ಬಲಪಂಥೀಯರು, ಪ್ರತಿಗಾಮಿ ಶಕ್ತಿಗಳು ಮತ್ತು ಮತೀಯ ಸಂಘಟನೆಗಳು ಕೇಸರಿನ ಕೊಳದಲ್ಲಿ ಮೀನು ಹಿಡಿಯಲು ಮುಂದಾಗುತ್ತವೆ. ಬಾಂಗ್ಲಾದೇಶವೂ ಇದಕ್ಕೆ ಹೊರತಾಗಿಲ್ಲ. ಇದನ್ನು ಮನಗಂಡ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ರಾಜಕೀಯ ನಾಯಕತ್ವ ಸಮಿತಿಯು 2024ರ ಆಗಸ್ಟ್ 11 ರಂದು (ಹಸೀನಾ ನಿರ್ಗಮನದ 6 ದಿನಗಳ ನಂತರ) ನೀಡಿದ ಹೇಳಿಕೆ ಹೀಗಿದೆ:

"ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಅವರ ಆಡಳಿತದ ಪತನದ ನಂತರ, ಹಿಂದೂ ಪೂಜಾ ಸ್ಥಳಗಳು ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಯ ವರದಿಗಳು ಕಳವಳಕಾರಿಯಾಗಿದೆ. ಅಸ್ತವ್ಯಸ್ತವಾಗಿರುವ ಪರಿಸ್ಥಿತಿಯನ್ನು ಬಳಸಿಕೊಂಡು ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸುತ್ತಿರುವುದು ಸ್ಪಷ್ಟವಾಗಿದೆ. ಆದ್ದರಿಂದ, ಮಧ್ಯಂತರ ಸರ್ಕಾರವು ಅಲ್ಪಸಂಖ್ಯಾತರ ಮತ್ತು ಅವರ ಪ್ರಾರ್ಥನಾ ಸ್ಥಳಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತಕ್ಷಣವೇ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು. ಭಾರತದ ಕೇಂದ್ರ ಸರ್ಕಾರವೂ ಇದನ್ನು ಬಾಂಗ್ಲಾದೇಶ ಸರ್ಕಾರದ ಗಮನಕ್ಕೆ ತರಬೇಕು," ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷ ಮಾತ್ರ ಇಂತಹ ನಿಲುವುಗಳನ್ನು ತೆಗೆದುಕೊಳ್ಳಲು ಸಾಧ್ಯ.

ಆದರೆ, ಬಾಂಗ್ಲಾದೇಶದಲ್ಲಿ ಕೇವಲ ಹಿಂದೂಗಳ ಮೇಲೆ ದಾಳಿ ನಡೆಸುತ್ತಿರುವ ಚಿತ್ರಣವನ್ನು ಮಾತ್ರ ಆರೆಸ್ಸೆಸ್ ಮತ್ತು ಬಿಜೆಪಿ ಪ್ರಸ್ತುತಪಡಿಸುತ್ತವೆ. ಅಲ್ಪಸಂಖ್ಯಾತರು ಎಂಬ ಸಾಮಾನ್ಯ ಪದವು ಕ್ರಿಶ್ಚಿಯನ್ನರು, ಬೌದ್ಧರು ಮತ್ತು ಅಲ್ಲಿನ ಇತರ ಕೆಲವು ಧರ್ಮಗಳಿಗೆ ಸೇರಿದ ಜನರು ಕೂಡ ಒಳಗೊಂಡಿರುತ್ತಾರೆ. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಮಾತ್ರ ದಾಳಿ ನಡೆಯುತ್ತಿದೆ ಎಂಬಂತೆ ಪ್ರತಿಭಟನೆಗಳು ಮತ್ತು ಪ್ರಚಾರಗಳನ್ನು ನಡೆಸಿದಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕಳೆದ ನವೆಂಬರ್‌ನಲ್ಲಿ ಮತ್ತೊಮ್ಮೆ ಹೇಳಿಕೆ ನೀಡಿದೆ. ಹಿಂದಿನ ಹೇಳಿಕೆಯನ್ನೇ ಪುನರುಚ್ಚರಿಸುತ್ತಾ, "ಭಾರತದಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸುವ ಹಿಂದುತ್ವ ಶಕ್ತಿಗಳ ಉದ್ದೇಶವು ಪ್ರಶ್ನಾರ್ಹವಾಗಿದೆ. ಧಾರ್ಮಿಕ ನೆಲೆಯಲ್ಲಿ ಪ್ರತ್ಯೇಕತಾವಾದಿ ರಾಜಕಾರಣವು ಬಾಂಗ್ಲಾದೇಶ ಮತ್ತು ಭಾರತಕ್ಕೆ ಹಾನಿಕಾರಕವಾಗಿದೆ" ಎಂದು ಅದು ಹೇಳಿದೆ.

ಸತ್ಯವನ್ನು ಜನರಿಗೆ ತಲುಪಿಸಬೇಕು

ಉರಿಯುತ್ತಿರುವ ಮನೆಯಿಂದ ಉಳಿದಿದ್ದನ್ನು ಹೆಕ್ಕುವ ಉದ್ದೇಶ ಸಾಮ್ರಾಜ್ಯಶಾಹಿ ದೇಶಗಳಿಗೆ ಇರಬಹುದು; ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ, ಧಾರ್ಮಿಕ ಮೂಲಭೂತವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳಿಗೆ ತಮ್ಮ ತಮ್ಮ ಪ್ರಭಾವ ಹೆಚ್ಚಿಕೊಳ್ಳಲು ಇದು ಸಹಕಾರಿಯಾಗಬಹುದು; ಇದು ಇವರ ಅಲ್ಪಾವಧಿಯ ಲಾಭಕ್ಕೆ ಕಾರಣವಾಗಬಹುದು. ಆದರೆ ಮಾರ್ಕ್ಸ್‌ವಾದಿಗಳು ಸತ್ಯವನ್ನು ಜನರ ಬಳಿಗೆ ಕೊಂಡೊಯ್ಯಬೇಕು.

ಭಾರತದಲ್ಲಿ ರೈತರ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ರೈತರ ತಾಳ್ಮೆ ಪರೀಕ್ಷಿಸಬಾರದು, ಅವರ ಧ್ವನಿಯನ್ನು ಹತ್ತಿಕ್ಕಲು ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ ಎಂದು ಉಪರಾಷ್ಟ್ರಪತಿಯವರು ಸಾರ್ವಜನಿಕ ವೇದಿಕೆಯಲ್ಲಿ ಕೇಂದ್ರ ಕೃಷಿ ಸಚಿವರಿಗೆ ಎಚ್ಚರಿಕೆ ನೀಡುವಷ್ಟರ ಮಟ್ಟಿಗೆ ಪರಿಸ್ಥಿತಿ ಹದಗೆಟ್ಟಿದೆ. ಐಟಿ ಉದ್ಯೋಗಿಗಳಿಂದ ಹಿಡಿದು, ಗಿಗ್ ಕೆಸಲಗಾರರು, ಅಸಂಘಟಿತ ಕಾರ್ಮಿಕರವರೆಗೆ ತೀವ್ರ ತೊಂದರೆಗೀಡಾಗಿದ್ದಾರೆ. ಕೋಲಾರದ ಬಿಇಎಂಎಲ್ ಮತ್ತು ತಮಿಳುನಾಡಿನ ಸ್ಯಾಮ್ ಸಂಗ್ ಕಾರ್ಮಿಕರ ಹೋರಾಟ ನಮ್ಮ ಕಣ್ಣ ಮುಂದಿರುವ ಸಾಕ್ಷಿಗಳಾಗಿವೆ. ಸರ್ಕಾರಿ ನೌಕರರು, ಶಿಕ್ಷಕರು, ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರು ಹಲವು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಕುಸಿದಿದ್ದು, ಭವಿಷ್ಯ ಏನಾಗಲಿದೆ ಎಂಬುದನ್ನು ಕಾದು ನೋಡುತ್ತಿವೆ. ಜಿಎಸ್ಟಿಯ ಕಠೋರತೆಯಿಂದ ವ್ಯಾಪಾರಿಗಳು ಮತ್ತು ಗ್ರಾಹಕರು ಇಬ್ಬರೂ ತೊಂದರೆಗೀಡಾಗಿದ್ದಾರೆ. ಅದಾನಿಯವರ ಲಂಚ ಪ್ರಕರಣವು ಭಾರತವನ್ನು ಜಾಗತಿಕ ವೇದಿಕೆಯಲ್ಲಿ ತಂದು ನಿಲ್ಲಿಸಿದೆ.

ಈ 10 ವರ್ಷಗಳು ಪ್ರಧಾನಿ ಮೋದಿ ಏನೇ ಮಾಡಿದರೂ ದೇಶದ ದುಃಸ್ಥಿತಿ ಮಾತ್ರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO) ಜಂಟಿಯಾಗಿ ರಚಿಸಿದ "ಭಾರತದ ಉದ್ಯೋಗ ವರದಿ 2024" ನೀಡಿದ ಮಾಹಿತಿಯಲ್ಲಿ ಕೆಲಸಕ್ಕೆ ಸಿದ್ಧವಾಗಿರುವ ಜನಸಂಖ್ಯೆಯು 2036 ರ ವೇಳೆಗೆ 65 ಪ್ರತಿಶತಕ್ಕೆ ಏರುತ್ತದೆ ಎಂದು ಅಂದಾಜಿಸಲಾಗಿದೆ. ಏತನ್ಮಧ್ಯೆ, ಆರ್ಥಿಕ ಚಟುವಟಿಕೆಗಳಲ್ಲಿ ಯುವಕರ ಭಾಗವಹಿಸುವಿಕೆ 2022 ರ ವೇಳೆಗೆ 37 ಪ್ರತಿಶತಕ್ಕೆ ಕುಸಿದಿದೆ. ಇದರರ್ಥ ಯುವಜನರ ಉದ್ಯೋಗ ಕಡಿಮೆಯಾಗುತ್ತಿದೆ. ಭಾರತದಲ್ಲಿ ನಿರುದ್ಯೋಗವು 2022ರಲ್ಲಿ ಶೇಕಡಾ 3.2 ರಿಂದ ಈಗ ಶೇಕಡಾ 7.8 ಕ್ಕೆ (ಸೆಪ್ಟೆಂಬರ್, 2024) ಹೆಚ್ಚಾಗಿದೆ ಎಂದು 'ಭಾರತೀಯ ಆರ್ಥಿಕ ವೀಕ್ಷಣಾಲಯ' ಸಂಸ್ಥೆ ಹೇಳುತ್ತದೆ.

ಜನರ ಗಮನ ಬೇರೆಡೆ ಸೆಳೆಯಲು

ಈ ಶೇಕಡಾವಾರು ಪ್ರಮಾಣವು ದೇಶದ ಬಹುಸಂಖ್ಯಾತ ಹಿಂದೂ ಯುವಕರ ಮೇಲೆ ಪರಿಣಾಮ ಬೀರುತ್ತದೆ. ಅವರ ಬಗ್ಗೆ ತಲೆಕೆಡಿಸಿಕೊಳ್ಳದ ಆರ್‌ಎಸ್‌ಎಸ್ ಸಂಘಪರಿವಾರ ಮತ್ತು ಬಿಜೆಪಿ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿ ನಡೆಸಲಾಗುತ್ತಿದೆ ಎನ್ನುತ್ತ ಭಾವೋದ್ವೇಗವನ್ನು ಉಂಟುಮಾಡಿ, ಜನರ ಗಮನ ಬೇರೆಡೆ ಸೆಳೆಯಲು ಅದು ಪ್ರಯತ್ನಿಸುತ್ತದೆ. ಈ ಮೂಲಕ ಧಾರ್ಮಿಕ ಘರ್ಷಣೆ ಮತ್ತು ಇತರ ಧರ್ಮಗಳ ಬಗ್ಗೆ ದ್ವೇಷವನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿದ್ದಾರೆ. ಹುಟ್ಟಿ ಬೆಳೆದ ಹಿಂದೂಗಳಿಗೆ ಬದುಕಲು ಹೇಗೆ ಮಾರ್ಗದರ್ಶನ ನೀಡಬೇಕೆಂದು ತಿಳಿಯದವರು, ಅವರಿಗೆ ಮಾರ್ಗದರ್ಶನ

ಪುಟ 11 ಕ್ಕೆ

ಬೆಮೆಲ್ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ: ಸಂಧಾನ ಬದ್ಧತೆಯ ಭರವಸೆ

ಕೆಜಿಎಫ್ ನ ಬಿಇಎಂಎಲ್ ಗುತ್ತಿಗೆ ಕಾರ್ಮಿಕರ 26 ದಿನಗಳ ಹೋರಾಟ ಯಶಸ್ವಿಯಾಗಿದೆ. ಕಾರ್ಮಿಕರ ಒಗ್ಗಟ್ಟು ಮತ್ತು ಬಲಿಷ್ಟ ಹೋರಾಟದಿಂದ ಇದು ಸಾಧ್ಯವಾಗಿದೆ. ಪ್ರಾದೇಶಿಕ ಕಾರ್ಮಿಕ ಆಯುಕ್ತರು ಮುಷ್ಕರವನ್ನು ಮುಂದೂಡಲು ಸಲಹೆ ಮತ್ತು ಸಂಧಾನ ಪ್ರಕ್ರಿಯೆಯಲ್ಲಿ ಆಡಳಿತ ಮಂಡಳಿಯವರು ಸಂಧಾನದ ಬದ್ಧತೆಯ ಭರವಸೆಯ ನಂತರ, ನವೆಂಬರ್ 28ರಂದು ನಡೆದ ಕಾರ್ಮಿಕರ ಸಭೆಯಲ್ಲಿ ಮುಷ್ಕರವನ್ನು ಮುಂದೂಡಲು ಮತ್ತು ಡಿಸೆಂಬರ್ 2 ರಿಂದ ಕೆಲಸವನ್ನು ಪುನರಾರಂಭಿಸಲು ಸರ್ವಾನುಮತದಿಂದ ನಿರ್ಧರಿಸಲಾಯಿತು. ಸಾಮಾನ್ಯ ಸಭೆಯಲ್ಲಿ ಚರ್ಚೆಗಳ ಮೂಲಕ ಅರ್ಥಪೂರ್ಣ ಮಾತುಕತೆಗಳಿಗೆ ಅನುಕೂಲಕರವಾದ ಕೈಗಾರಿಕಾ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ಕಾರ್ಮಿಕರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮತ್ತು ಚೌಕಾಸಿ ಹಕ್ಕುಗಳನ್ನು ಉಳಿಸಿಕೊಳ್ಳಲು BEML ನ ನಾನ್–ಪರ್ಮನೆಂಟ್ ವರ್ಕರ್ಸ್ ಯೂನಿಯನ್ಸ್–ಸಿಐಟಿಯುನ ಸಮನ್ವಯ ಸಮಿತಿಯ ಸಾಮೂಹಿಕ ಗೆಲುವು ಇದಾಗಿದೆ.



ಟ್ರೇಡ್ ಯೂನಿಯನ್ ಹಕ್ಕುಗಳು ಮತ್ತು ಚೌಕಾಸಿ ಮಾಡುವ ಶಕ್ತಿಯನ್ನು ಕಸಿದುಕೊಳ್ಳುವ BEML ಆಡಳಿತ ಮಂಡಳಿಯ ಪ್ರಯತ್ನವು, ಬಲಿಷ್ಠ ಕಾರ್ಮಿಕರ ಅಚಲವಾದ ಬೃಹತ್ ಮತ್ತು ಸಮರಧೀರ ಹೋರಾಟದಿಂದ ಸಂಪೂರ್ಣವಾಗಿ ಸೋತಿತು. ಖಾಯಂ ಅಲ್ಲದ ಕಾರ್ಮಿಕರ (ಗುತ್ತಿಗೆ ಕಾರ್ಮಿಕರು) ಈ ಹೋರಾಟವು ಬಿಇಎಂಎಲ್, ಕೆಜಿಎಫ್ ಮತ್ತು ಬೆಂಗಳೂರಿನ ಇನ್ನಿತರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಟ್ರೇಡ್ ಯೂನಿಯನ್ ಚಳವಳಿಯ ಇತಿಹಾಸದಲ್ಲಿ ಮೊದಲನೆಯದು.

ಸಂಘ ಕಟ್ಟುವ ಹಕ್ಕುಗಳು, ಕಾಯಂ ಉದ್ಯೋಗ ಸೇರಿದಂತೆ ಕಾರ್ಮಿಕರು ಗಳಿಸಿದ ಸವಲತ್ತುಗಳು ಕಾರ್ಮಿಕ ವರ್ಗದ ಹೋರಾಟ ಮತ್ತು ಅವರು ಚೆಲ್ಲಿದ ರಕ್ತದಿಂದ ಬಂದಿದೆ. ಅದನ್ನು ಎಂದಿಗೂ ಬಿಟ್ಟುಕೊಡಲು ಸಾಧ್ಯವಿಲ್ಲ ಎನ್ನುತ್ತಾ, ತಮ್ಮ ಈ ಹಕ್ಕುಗಳನ್ನು ಪಡೆಯಲು ಬಿಇಎಂಎಲ್ (ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್) ಸಂಸ್ಥೆಯ ಗುತ್ತಿಗೆ ಕಾರ್ಮಿಕರು ಒಗ್ಗಟ್ಟಿನ ಮತ್ತು ದಿಟ್ಟ ಹೋರಾಟ ನಡೆಸಿದ್ದಾರೆ. ಇದರ ಫಲವಾಗಿ ಪ್ರಾದೇಶಿಕ ಕಾರ್ಮಿಕ ಆಯುಕ್ತರು ಕಾರ್ಮಿಕ ಸಂಘದ ನಾಯಕರ ಜೊತೆ ಮಾತುಕತೆ ನಡೆಸಿದರು. ಸಾಮಾನ್ಯ ಸಭೆಯಲ್ಲಿ ಚರ್ಚೆಗಳ ಮೂಲಕ ಅರ್ಥಪೂರ್ಣ ಮಾತುಕತೆಗಳಿಗೆ ಅನುಕೂಲಕರವಾದ ಕೈಗಾರಿಕಾ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ಮುಷ್ಕರವನ್ನು ಮುಂದೂಡುವಂತೆ ಆಯುಕ್ತರು ಸಲಹೆ ನೀಡಿದರು. ಸಂಧಾನ ಪ್ರಕ್ರಿಯೆಯಲ್ಲಿ ಆಡಳಿತ ಮಂಡಳಿಯವರು ಸಂಧಾನದ ಬದ್ಧತೆಯ ಭರವಸೆ ನೀಡಿದರು. ನವೆಂಬರ್ 28ರಂದು ನಡೆದ ಕಾರ್ಮಿಕರ ಸಭೆಯಲ್ಲಿ ಈ ವಿಷಯವನ್ನು ಇಡಲಾಯಿತು. ಚರ್ಚೆಯ ನಂತರ ಮುಷ್ಕರವನ್ನು ಮುಂದೂಡಲು ಮತ್ತು ಡಿಸೆಂಬರ್ 2 ರಿಂದ ಕೆಲಸವನ್ನು ಪುನರಾರಂಭಿಸಲು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಕೆಜಿಎಫ್ ನಗರದಲ್ಲಿರುವ BEML ನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ದೃಢ ಸಂಕಲ್ಪ ದೇಶದ ಸಾರ್ವಜನಿಕ ಉದ್ಯಮಗಳ ಕಾರ್ಮಿಕರಿಗೆ ಹೊಸದೊಂದು ಸ್ಫೂರ್ತಿ ನೀಡಿದೆ. ಹಲವು ದಿಕ್ಕುಗಳಿಂದ ಬಿಕ್ಕಟ್ಟುಗಳನ್ನು ಎದುರಿಸಿ ದೃಢವಾಗಿ ನಿಂತು, ಸತತ 26 ದಿನಗಳ ಐತಿಹಾಸಿಕ ಮುಷ್ಕರ ನಡೆಸಿ ಮೊದಲ ಹಂತದ ವಿಜಯ ಗಳಿಸಿ ಕೆಲಸಕ್ಕೆ ಮರಳಿದ್ದಾರೆ. ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮತ್ತು ಚೌಕಾಸಿ ಹಕ್ಕುಗಳನ್ನು ಉಳಿಸಿಕೊಳ್ಳಲು BEML ನ ನಾನ್–ಪರ್ಮನೆಂಟ್ ವರ್ಕರ್ಸ್ ಯೂನಿಯನ್ಸ್–ಸಿಐಟಿಯುನ ಸಮನ್ವಯ ಸಮಿತಿಯ ಸಾಮೂಹಿಕ ಗೆಲುವಾಗಿದೆ.

20 ವರ್ಷಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದರೂ ಖಾಯಂ ಇಲ್ಲ

ಟರ್ಮ್ ಕಾಂಟ್ರಾಕ್ಟ್ ಲೇಬರ್ (TCL), ವರ್ಕ್ಸ್ ಕಾಂಟ್ರಾಕ್ಟ್ ಲೇಬರ್ (WCL), ಎಕ್ಸ್–ಟ್ರೇನಿ, ಕಾಂಟ್ರಾಕ್ಟ್ ಆಪರೇಟರ್, ಸಬ್ ಕಾಂಟ್ರಾಕ್ಟ್ ವರ್ಕರ್ಸ್ ಮುಂತಾದ ವಿವಿಧ ಹೆಸರುಗಳಿಂದ ಈ ಕಾರ್ಮಿಕರನ್ನು ಕರೆಯಲಾಗುತ್ತದೆ. ಐಟಿಐ ಮತ್ತು ಎನ್‌ಎಸಿ ವಿದ್ಯಾರ್ಹತೆ ಹೊಂದಿರುವವರು ಖಾಯಂ ಕಾರ್ಮಿಕರು ಕೆಲಸ ಮಾಡುತ್ತಿರುವ ಸಿಎನ್ಸಿ, ಹೈಟೆಕ್ ಮೆಷಿನ್‌ಗಳು, ಹೆವಿ ಬೋರಿಂಗ್, ಲ್ಯಾಥ್‌ಗಳು, ಗ್ರೈಂಡಿಂಗ್, ಕಟಿಂಗ್ ಮುಂತಾದ ನೇರ ಉತ್ಪಾದನಾ ವಿಭಾಗಗಳಲ್ಲಿ 20 ವರ್ಷಗಳಿಗೂ ಹೆಚ್ಚು ಕಾಲ ಕೆಲಸ ಮಾಡುತ್ತಿದ್ದಾರೆ. ಮತ್ತೊಂದು ವರ್ಗದ ಕಾರ್ಮಿಕರು 30 ವರ್ಷಗಳಿಗೂ ಹೆಚ್ಚು ಕಾಲ ಲೋಡಿಂಗ್ ಮತ್ತು ಅನ್ ಲೋಡಿಂಗ್, ಹೌಸ್ ಕೀಪಿಂಗ್, ಕ್ಯಾಂಟೀನ್ ಮುಂತಾದ ಲಾಜಿಸ್ಟಿಕ್ ಕೆಲಸಗಳನ್ನು ಮಾಡುತ್ತಿದ್ದಾರೆ.

ಅವರು ಬಿಇಎಂಎಲ್ ಲಿಮಿಟೆಡ್‌ನ ಅಭಿವೃದ್ಧಿಗಾಗಿ ತಮ್ಮ ಸಂಪೂರ್ಣ ಜೀವನವನ್ನು ಕಳೆದಿದ್ದಾರೆ. ಅವರಿಗೆ ಇತರ ಆದಾಯದ ಮೂಲಗಳಿಲ್ಲ ಅಥವಾ ಅವರ ಜೀವನೋಪಾಯಕ್ಕಾಗಿ ಬೇರೆಲ್ಲಿಯೂ ಹೋಗಲು ಸಾಧ್ಯವಿಲ್ಲ. ಈ ಕಾರ್ಮಿಕರ ಸರಾಸರಿ ವಯಸ್ಸು 40ರಿಂದ 50 ವರ್ಷಗಳು ಮತ್ತು ಕೆಲವರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಇಂದಲ್ಲಾ ನಾಳೆ ಆಡಳಿತ ಮಂಡಳಿಯು ಕಂಪನಿಗೆ ತಮ್ಮ ದೀರ್ಘಾವಧಿಯ ಕೊಡುಗೆಯನ್ನು ಪರಿಗಣಿಸುತ್ತದೆ ಎಂಬ ಭರವಸೆಯೊಂದಿಗೆ ಅವರು ಕಂಪನಿಯಲ್ಲಿ ಕೆಲಸ ಮಾಡುವುದನ್ನು ಮುಂದುವರೆಸಿದರು. ಆದರೆ, ಕಾರ್ಮಿಕರು ಇಟ್ಟಿದ್ದ ಭರವಸೆಗಳೆಲ್ಲಾ ಕರಗಿ ನೀರಾದವು. ಸಂಸ್ಥೆಯ ಆಡಳಿತ ವರ್ಗವು ಗುತ್ತಿಗೆ ಕಾರ್ಮಿಕರನ್ನು ಅಮಾನವೀಯವಾಗಿ ನಡೆಸಿಕೊಳ್ಳತೊಡಗಿತು. ಗುತ್ತಿಗೆ ಕಾರ್ಮಿಕರ ನಿಜವಾದ ಸಮಸ್ಯೆಗಳನ್ನು ಪರಿಗಣಿಸಲು ಅದು ಮುಂದಾಗಲಿಲ್ಲ.

ಇದರಿಂದ ಬೇಸತ್ತ ಗುತ್ತಿಗೆ ಕಾರ್ಮಿಕರು ಸಂಘಟನೆಗಳ ಮೂಲಕ ಸಂಸ್ಥೆಯ ಆಡಳಿತದ ಮೇಲೆ ಒತ್ತಡ ತರಲು ಮುಂದಾದರು. ಯೂನಿಯನ್‌ಗಳು ಮತ್ತು ಕಾರ್ಮಿಕರೊಂದಿಗೆ ನೇರ ಸಂಬಂಧ ಹೊಂದಿಲ್ಲದ ಕಾರಣ ಸಂಘಗಳೊಂದಿಗೆ ಚರ್ಚಿಸಲು ಸಾಧ್ಯವಿಲ್ಲ ಎಂಬ ನಿಲುವನ್ನು ಆಡಳಿತ ಮಂಡಳಿ ತೆಗೆದುಕೊಂಡಿತು. ಸಂಘಗಳನ್ನು ದುರ್ಬಲಗೊಳಿಸಿ ಯೂನಿಯನ್ ಮುಕ್ತ ಉದ್ಯಮವಾಗಿ ಸ್ಥಾಪಿಸುವುದು ಆಡಳಿತದ ಮುಖ್ಯ ಗುರಿಯಾಗಿದೆ.

ಕಾರ್ಮಿಕರ ಬೇಡಿಕೆಗಳು

ಗುತ್ತಿಗೆ ಕಾರ್ಮಿಕರು ತಮ್ಮ ಹಲವು ಬೇಡಿಕೆಗಳಿಗಾಗಿ ವಿವಿಧ ರೀತಿಯಲ್ಲಿ ಪ್ರಯತ್ನಿಸಿದರು. ಆಡಳಿತ ಮಂಡಳಿಗೆ ಹಲವು ಬಾರಿ ಬೇಡಿಕೆ ಪಟ್ಟಿ ಸಲ್ಲಿಸಿ, ಅವುಗಳ ಈಡೇರಿಕೆಗೆ ಮನವಿ ಮಾಡಿದರು. ನ್ಯಾಯಸಮ್ಮತ ನೇಮಕಾತಿ ಪ್ರಕ್ರಿಯೆಯಲ್ಲಿ ಕಾರ್ಮಿಕರನ್ನು ಕಾಯಂ ಉದ್ಯೋಗಿಯಾಗಿಸಲು ಆದ್ಯತೆ ನೀಡಬೇಕು. ವೇತನ ಹೆಚ್ಚಳ ಸೇರಿದಂತೆ, ಗ್ರಾಚ್ಯುಟಿ ಪಾವತಿ, ಪೂರ್ಣ ಉದ್ಯೋಗ ಒದಗಿಸುವುದು, ಭತ್ಯೆಗಳು ಮತ್ತು ಪ್ರಯೋಜನಗಳು, ಸೇವೆಗಳ ಷರತ್ತುಗಳು ಇತ್ಯಾದಿಗಳನ್ನು ಕಾರ್ಮಿಕರು ತಮ್ಮ ಬೇಡಿಕೆ ಪಟ್ಟಿಯಲ್ಲಿ ಸೇರಿಸಿದ್ದಾರೆ. ಕಾರ್ಮಿಕರು ಮೌಖಿಕ ವಾಗಿ ಮತ್ತು ಲಿಖಿತವಾಗಿ ಹಲವು ಬಾರಿ ಮನವಿ ಸಲ್ಲಿಸುವುದು, ಶಾಂತಿಯುತ ಪ್ರಜಾಸತ್ತಾತ್ಮಕ ಟ್ರೇಡ್ ಯೂನಿಯನ್ ಕ್ರಮಗಳಾದ ಬ್ಯಾಡ್ಜ್‌ಗಳನ್ನು ಧರಿಸುವುದು, ಘೋಷಣೆ ಕೂಗುವುದು ಇತ್ಯಾದಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ನಡೆಯಿತು.

ಗುತ್ತಿಗೆದಾರ–ಉದ್ಯೋಗದಾತರು, ಪ್ರಾಂಶುಪಾಲ–ಉದ್ಯೋಗದಾತರು ಮತ್ತು ಮೇಲಿನ ಸಂಘಗಳ ನಡುವೆ 2017ರ ಆಗಸ್ಟ್ 30ರಂದು ಸಹಿ ಮಾಡಲಾದ ವೇತನ ಪರಿಷ್ಕರಣೆ ಇತ್ಯಾದಿಗಳ ಮೆಮೊರಾಂಡಮ್ ಆಫ್ ಸೆಟಲ್ಮೆಂಟ್ 2024ರ ಮಾರ್ಚ್ 31ರಂದು ಮುಕ್ತಾಯಗೊಂಡಿದೆ. ಹೊಸ ಇತ್ಯರ್ಥವನ್ನು 2024ರ ಏಪ್ರಿಲ್ ಒಂದರಿಂದ ಜಾರಿಗೆ ತರಬೇಕು. 2023ರ ಡಿಸೆಂಬರ್ 22ರಂದು, ಬೇಡಿಕೆಗಳ ಚಾರ್ಟರ್ ಅನ್ನು ಪ್ರಿನ್ಸಿಪಾಲ್–ಉದ್ಯೋಗದಾತರು ಮತ್ತು ಗುತ್ತಿಗೆದಾರ–ಉದ್ಯೋಗದಾತರಿಗೆ ಸಲ್ಲಿಸಲಾಯಿತು.

ಕಾಯಂ ಉದ್ಯೋಗಕ್ಕೆ ಒತ್ತಾಯ

ತಮ್ಮನ್ನು ಖಾಯಂ ಉದ್ಯೋಗಿಗಳೆಂದು ಪರಿಗಣಿಸಿ ಎಂದು ಆಡಳಿತ ಮಂಡಳಿ, ಸಂಸದರು, ಶಾಸಕರು, ಸಚಿವರು ಹಾಗೂ ಇತರ ಅಧಿಕಾರಿಗಳಿಗೆ ಹಲವು ಬಾರಿ ಪತ್ರ, ಜ್ಞಾಪಕ ಪತ್ರ, ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ನೇಮಕಾತಿಗೆ ಹೋಗುವಾಗ ಆದ್ಯತೆಯನ್ನು ಪರಿಗಣಿಸುವುದಾಗಿ ರಾಜಿ ಪ್ರಾಧಿಕಾರದ ಮುಂದೆ ಭರವಸೆ ನೀಡಿದ ಆಡಳಿತ ಮಂಡಳಿಯು ಖಾಯಂ ಉದ್ಯೋಗಕ್ಕಾಗಿ ಮುಕ್ತ/ಆನ್‌ಲೈನ್ ನೇಮಕಾತಿಗೆ ಕರೆ ನೀಡಿದಾಗ ಗುತ್ತಿಗೆ ಆಪರೇಟರ್‌ಗಳತ್ತ ಬೆನ್ನು ತಟ್ಟಿತು.

ಸಂಧಾನವನ್ನು ಆರಂಭಿಸಲು ಮತ್ತು ಸೌಹಾರ್ದಯುತವಾದ ಇತ್ಯರ್ಥಕ್ಕೆ ಬರುವಂತೆ ಯೂನಿಯನ್‌ಗಳು ಸಿಒಡಿ ಮತ್ತು ನಂತರದ ಪತ್ರಗಳನ್ನು ಸ್ವೀಕರಿಸಿದ ಹೊರತಾಗಿಯೂ, ಆಡಳಿತ ಮಂಡಳಿಯು ಬೇಡಿಕೆಗಳ ಚಾರ್ಟರ್‌ನಲ್ಲಿ ದ್ವಿಪಕ್ಷೀಯ ಮಾತುಕತೆಗೆ ಒಕ್ಕೂಟಗಳ ಪದಾಧಿಕಾರಿಗಳನ್ನು ಕರೆಯಲಿಲ್ಲ. ಸಂಘದ ಪದಾಧಿಕಾರಿಗಳು ಸಂಪರ್ಕಿಸಿದಾಗ ಮಾತುಕತೆಗಳನ್ನು ನಡೆಸಲು ನಿರಾಕರಿಸಿದ್ದಾರೆ ಮತ್ತು ಸಿಒಡಿಯಲ್ಲಿ ಲಿಖಿತ ಪ್ರತಿಕ್ರಿಯೆಯನ್ನು ನೀಡಿದ್ದಾರೆ.

ಉಚ್ಚ ನ್ಯಾಯಾಲಯದ ಅವಲೋಕನ:

ಬಡ ಗುತ್ತಿಗೆ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಲು ಕಾರ್ಮಿಕರ ಸಂಘವು ಕರ್ನಾಟಕ ಹೈಕೋರ್ಟ್‌ನ ಮೊರೆ ಹೋಗಬೇಕಾಯಿತು.



1964 ರಲ್ಲಿ ಪ್ರಾರಂಭಿಸಲಾದ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (BEML) ರಕ್ಷಣಾ ಸಚಿವಾಲಯದ ಅಡಿಯಲ್ಲಿ ಪ್ರಧಾನ 'ಮಿನಿರತ್ನ' ವರ್ಗ–1 ಕೇಂದ್ರ ಸಾರ್ವಜನಿಕ ವಲಯದ ಸಂಸ್ಥೆಯಾಗಿದೆ. ಈ ಸಂಸ್ಥೆಯು ಪ್ರಾರಂಭದಿಂದಲೂ ನಿರಂತರ ಲಾಭದೊಂದಿಗೆ ಉತ್ತಮ ಸಾಧನೆಯ ದಾಖಲೆಯನ್ನು ಹೊಂದಿದೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಕೊಡುಗೆ ನೀಡುತ್ತದೆ. ಇದು ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿದ್ದು, ಬೆಂಗಳೂರು, ಕೋಲಾರ ಗೋಲ್ಡ್ ಫೀಲ್ಡ್ಸ್(ಕೆಜಿಎಫ್), ಮೈಸೂರು ಮತ್ತು ಕೇರಳದ ಪಾಲಕ್ಕಾಡ್ ನಲ್ಲಿ ಉತ್ಪಾದನಾ ಘಟಕಗಳನ್ನು ಹೊಂದಿದೆ. ಇದು ರೈಲ್ವೆ, ರಕ್ಷಣೆ, ಸಾರಿಗೆ ಮತ್ತು ಗಣಿಗಾರಿಕೆಗೆ ಬಳಸುವ ಬುಲ್ಡೋಜರ್‌ಗಳು, ಡಂಪ್ ಟ್ರಕ್‌ಗಳು, ಹೈಡ್ರಾಲಿಕ್ ಅಗೆಯುವ ಯಂತ್ರಗಳು, ವೀಲ್ ಲೋಡರ್‌ಗಳು ಮುಂತಾದ ಅರ್ಥ್ ಮೂವರ್ಸ್ ಬೃಹತ್ ಉಪಕರಣಗಳನ್ನು ಉತ್ಪಾದಿಸುತ್ತದೆ. ರಕ್ಷಣೆಯಂತಹ ಆರ್ಥಿಕತೆಯ ವಿವಿಧ ವಿಭಾಗಗಳಿಗೆ ಮತ್ತು ರೈಲು, ಮೆಟ್ರೋ ರೈಲು, ಗಣಿಗಾರಿಕೆ, ವಿದ್ಯುತ್, ಉಕ್ಕು, ನೀರಾವರಿ, ನಿರ್ಮಾಣ, ರಸ್ತೆ ನಿರ್ಮಾಣ, ವಾಯುಯಾನ, ಇತ್ಯಾದಿ ಸೇವೆ ಸಲ್ಲಿಸುತ್ತಿದೆ. ಇತರೆ ಸಾರ್ವಜನಿಕ ಸಂಸ್ಥೆಗಳಂತೆ ಬಿಇಎಂಎಲ್ ಸಂಸ್ಥೆಯನ್ನೂ ಸಹಾ ಬಂಡವಾಳ ಹಿಂಪಡೆಯುವ (dis-investment) ಪಟ್ಟಿಯಲ್ಲಿ ಸೇರಿಸಲಾಗಿದೆ. ಆ ಮೂಲಕ ಸಂಸ್ಥೆಯನ್ನು ಖಾಸಗೀಕರಣ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಇದರ ವಿರುದ್ಧ ದೇಶಾದ್ಯಂತ ಕಾರ್ಮಿಕರು ಮತ್ತು ಸಾಮೂಹಿಕ ಸಂಘಟನೆಗಳು ಹೋರಾಟ ನಡೆಸುತ್ತಿದ್ದಾರೆ.

ಸಂಸ್ಥೆಯಲ್ಲಿ ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಕಾರ್ಮಿಕರನ್ನು ಹೊರತುಪಡಿಸಿದ ನೇಮಕಾತಿಯ ಅಧಿಸೂಚನೆಯ ನ್ಯಾಯಸಮ್ಮತತೆಯನ್ನು ನ್ಯಾಯಾಲಯವು ವಿಮರ್ಶಾತ್ಮಕವಾಗಿ ಪರಿಶೀಲಿಸಿತು. "ಗುತ್ತಿಗೆ ನೌಕರರು ಅರ್ಹರಾಗಿದ್ದರೆ ಮತ್ತು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವರಿಗೆ ಅವಕಾಶ ನೀಡದಿರುವುದು ನ್ಯಾಯಸಮ್ಮತತೆಯ ಕಳವಳ" ಎಂದು ನ್ಯಾಯಮೂರ್ತಿ ಹೇಮಲೇಖಾ ಗಮನಿಸಿದರು. ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸುವ ಅರ್ಹತೆಯನ್ನು ಪರಿಶೀಲಿಸುವಂತೆ ಕೋರ್ಟ್ ನಿರ್ದೇಶಿಸಿ, ನೇಮಕಾತಿ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವಂತೆ ಆದೇಶಿಸಿದೆ. ಆದರೆ, ಆಡಳಿತ ಮಂಡಳಿಯು ನ್ಯಾಯಾಲಯದ ಆದೇಶದ ಬಗ್ಗೆ ಯಾವುದೇ ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳದೆ ನಿರ್ಲಕ್ಷಿಸಿತು.

ಐಕ್ಯ ವೇದಿಕೆ ನಿರ್ಮಾಣ

ಕೆಜಿಎಫ್‌ನಲ್ಲಿ ವಿವಿಧ ವಿಭಾಗದಲ್ಲಿ ಸಿಐಟಿಯುಗೆ ಸಂಯೋಜಿತವಾಗಿರುವ ನಾಲ್ಕು ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಘಗಳನ್ನು 1990 ಮತ್ತು 2013ರಲ್ಲಿ ಸಂಘಟಿಸಿ ನೋಂದಾಯಿಸಲಾಗಿದೆ. ಕೆಜಿಎಫ್ ತಾಲೂಕು ಸಿಐಟಿಯು ಸಮನ್ವಯ ಸಮಿತಿಯನ್ನು ಒಂದೇ ವೇಧಿಕೆಯಡಿ ಕರೆತಂದು, ಬಿಇಎಂಎಲ್ ಗುತ್ತಿಗೆ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿಯನ್ನು ರಚಿಸಿಲಾಯಿತು. ನಂತರ 'ಬಿಇಎಂಎಲ್ ಗುತ್ತಿಗೆ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿ' ಎಂದು ಹೆಸರನ್ನು ಬದಲಾಯಿಸಲಾಯಿತು. ಇದು ಕಾರ್ಮಿಕರ ಐಕ್ಯ ವೇದಿಕೆಯನ್ನು ನಿರ್ಮಿಸುವಲ್ಲಿ ಒಂದು ಮಹತ್ವದ ತಿರುವಾಗಿದೆ. ಎಲ್ಲಾ ಕಾರ್ಮಿಕರು BEML ನ ಖಾಯಂ ಅಲ್ಲದ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿಯ ಒಂದು ಬ್ಯಾನರ್ ಅಡಿಯಲ್ಲಿ ರ್‍ಯಾಲಿ ಮಾಡಿದರು.

ಕರ್ನಾಟಕದ ಸಿಐಟಿಯು ಕಾನೂನು ಘಟಕವು ಹೈಕೋರ್ಟನಲ್ಲಿ ಪ್ರಕರಣವನ್ನು ಕೈಗೆತ್ತಿಕೊಂಡಿತು. ಆಡಳಿತವನ್ನು ಎದುರಿಸಲು ಸಂಘಟನೆಗಳನ್ನು ಸಜ್ಜುಗೊಳಿಸಲು ಹಲವಾರು ಸಭೆಗಳನ್ನು ಆಯೋಜಿಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಲು ಆಡಳಿತ ಮಂಡಳಿ ಸಂಪೂರ್ಣ ವಿಫಲವಾದ ಹಿನ್ನೆಲೆಯಲ್ಲಿ ಮುಷ್ಕರ ನೋಟಿಸ್ ನೀಡಿ ಸಕಲ ಸಿದ್ಧತೆಯೊಂದಿಗೆ ಮುಷ್ಕರ ಆರಂಭಿಸಲಾಯಿತು.

ಅನಿರ್ದಿಷ್ಟಾವಧಿ ಮುಷ್ಕರ ಆರಂಭ

ಆಡಳಿತ ಮಂಡಳಿಯ ಅನ್ಯಾಯದ ಧೋರಣೆಯನ್ನು ಪ್ರತಿಭಟಿಸಿ 2024ರ ನವೆಂಬರ್ 5ರಿಂದ ಪ್ರಬಲ ಮತ್ತು ರಾಜಿಯಾಗದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು. ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು ಸೇರಿದಂತೆ ಎಲ್ಲಾ ಅಡೆತಡೆಗಳನ್ನು ದಿಟ್ಟವಾಗಿ ಎದುರಿಸಿ ನಿಂತ ಕಾರ್ಮಿಕರು, ನವೆಂಬರ್ 30ರ ವರೆಗೆ ಸತತ 26 ದಿನಗಳ ಕಾಲ ಮುಷ್ಕರ ನಡೆಸಿದರು. ಮುಷ್ಕರನಿರತ ಕಾರ್ಮಿಕರು ಈ ಅವಧಿಯಲ್ಲಿ BGML ಮೈನರ್ ಪ್ರತಿಮೆಯ ಹಿಂಭಾಗದ ಫೈವ್ ಲೈಟ್ಸ್ ಬಳಿ ಬೃಹತ್ ಧರಣಿ ನಡೆಸಿದರು. ಏಕಾಏಕಿ ಒಗ್ಗಟ್ಟಿನ ಮುಷ್ಕರದ ಕ್ರಿಯೆಯು ಆಡಳಿತ ಮಂಡಳಿಯ ಅನ್ಯಾಯದ ವರ್ತನೆಯ ವಿರುದ್ಧ ಕಾರ್ಮಿಕರ ಕೋಪ ಮತ್ತು ಅಸಮಾಧಾನವನ್ನು ಸ್ಪಷ್ಟವಾಗಿ ಬಹಿರಂಗಪಡಿಸಿದೆ.

ಕಾರ್ಮಿಕ ಸಂಘಟನೆಗಳ ಬೆಂಬಲ

ಈ ಹೋರಾಟದ ಮಹತ್ವದ ಬೆಳವಣಿಗೆಯೆಂದರೆ, ಬೆಂಗಳೂರಿನ ಇತರ ಸಾರ್ವಜನಿಕ ವಲಯದ ಘಟಕಗಳಾದ ಎಚ್‌ಎಎಲ್, ಐಟಿಐ, ಬಿಇಎಂಎಲ್ ಬೆಂಗಳೂರು ಕಾಂಪ್ಲೆಕ್ಸ್‌ನ ಗುತ್ತಿಗೆ ಕಾರ್ಮಿಕರ ಸಂಘಗಳು ಸಹ ಮುಷ್ಕರಕ್ಕೆ ಬೆಂಬಲವಾಗಿ ಬಂದು ಧರಣಿಯಲ್ಲಿ ಭಾಗವಹಿಸಿ, ನಿಧಿಯನ್ನು ನೀಡಿದರು. ಸಾರ್ವಜನಿಕ ವಲಯದ ಘಟಕಗಳಲ್ಲಿ ಗುತ್ತಿಗೆ ಕಾರ್ಮಿಕರ ಸಂಘಗಳ ಐಕ್ಯ ವೇದಿಕೆಯನ್ನು ರೂಪಿಸಲು ಅವರು ಪ್ರತಿಜ್ಞೆ ಮಾಡಿದರು.

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯು ಸಿಎಂಡಿಗೆ ಪತ್ರವನ್ನು ಪೋಸ್ಟ್ ಮಾಡುವ ಮೂಲಕ ಇಮೇಲ್ ಅಭಿಯಾನವನ್ನು ಆಯೋಜಿಸಿತು. ಸಿಐಟಿಯು ಇರುವಲ್ಲೆಲ್ಲಾ ಕಾರ್ಖಾನೆಗಳ ಮುಂದೆ ಪ್ರತಿಭಟನೆ ನಡೆಸಿತು. ಸಿಪಿಐ(ಎಂ)ನ ಕೋಲಾರ ಜಿಲ್ಲಾ ಸಮಿತಿಯು ಕೋಲಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಹಾಗೂ ಜಿಲ್ಲೆಯ ತಾಲೂಕು ಕೇಂದ್ರ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ಖಾಯಂ ಕಾರ್ಮಿಕರನ್ನು ಪ್ರತಿನಿಧಿಸುವ ಭಾರತ್ ಅರ್ಥ್ ಮೂವರ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ (BEMEA) ಸಹ ಧರಣಿ ಸ್ಥಳಕ್ಕೆ ಭೇಟಿ ನೀಡುವ ಮೂಲಕ ತನ್ನ ಬೆಂಬಲವನ್ನು ನೀಡಿತು. ಅದರ ಅಧ್ಯಕ್ಷರಿಗೆ ಶೋಕಾಸ್ ನೋಟಿಸ್ ನೀಡುವ ಮೂಲಕ ಆಡಳಿತ ಮಂಡಳಿಯು ಕ್ರಮ ಕೈಗೊಳ್ಳಲು ಮುಂದಾಯಿತು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಅವರು ಪ್ರಾದೇಶಿಕ ಕಾರ್ಮಿಕ ಆಯುಕ್ತರು (ಕೇಂದ್ರ) ಬೆಂಗಳೂರು ಇವರ ಮುಂದೆ ರಾಜಿ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು. ಅಂತಿಮವಾಗಿ ಬೇಡಿಕೆಗಳ ಕುರಿತು ಮಾತುಕತೆಗಾಗಿ ಒಕ್ಕೂಟಗಳೊಂದಿಗೆ ಸಭೆಯನ್ನು ಏರ್ಪಡಿಸಲು ಆಡಳಿತ ಮಂಡಳಿಯು ಒಪ್ಪಿಕೊಳ್ಳಬೇಕಾಯಿತು.

ಕೆಜಿಎಫ್ ಬಂದ್‌ಗೆ ನಿರ್ಧರಿಸಲಾಗಿತ್ತು

ಆಡಳಿತ ಮಂಡಳಿಯ ಮೇಲೆ ಮತ್ತಷ್ಟು ಒತ್ತಡ ತರುವ ಸಲುವಾಗಿ ಹೋರಾಟವನ್ನು ಇನ್ನಷ್ಟು ವಿಸ್ತರಿಸಲು ಕಾರ್ಮಿಕರು ನಿರ್ಧರಿಸಿದರು. ಇದಕ್ಕೆ ಪೂರಕವಾಗಿ ರಾಜಕೀಯ ಪಕ್ಷಗಳು, ವ್ಯಕ್ತಿಗಳು ಮತ್ತು ಮುಷ್ಕರವನ್ನು ಬೆಂಬಲಿಸುವ ಸಂಘಟನೆಗಳನ್ನು ಒಳಗೊಂಡ 'ಐಕ್ಯತಾ ಸಮಿತಿ'ಯ ಐಕ್ಯ ವೇದಿಕೆಯನ್ನು ರೂಪಿಸಲಾಗಿದೆ. ಈ ವೇದಿಕೆ ಎರಡು ಬಾರಿ ಸಭೆ ನಡೆಸಿತು. ನವೆಂಬರ್ 30ರಂದು ಬೃಹತ್ ರ್‍ಯಾಲಿ, ಡಿಸೆಂಬರ್ 4 ರಂದು ಕೆಜಿಎಫ್ ಬಂದ್ ಮತ್ತು ಡಿಸೆಂಬರ್ 6 ರಂದು ಡಾ. ಬಿ.ಆರ್.ಅಂಬೇಡ್ಕರ್ ಅವರ ಪುಣ್ಯತಿಥಿಯ ದಿನದಂದು ಭಾರತೀಯ ಸಂವಿಧಾನ ಮತ್ತು BEML ಲಿಮಿಟೆಡ್ ಅನ್ನು ಉಳಿಸುವ ಪ್ರತಿಜ್ಞೆ ಮಾಡಲು ನಿರ್ಧರಿಸಲಾಯಿತು.

ಕುಟುಂಬ ಸಹಭಾಗಿತ್ವ ಮತ್ತು ಸ್ವಯಂಸೇವಕರು

ಕಾಯಂ ಅಲ್ಲದ ಕಾರ್ಮಿಕರು ಒಂದೇ ಬಂಡೆಯಂತೆ ಒಗ್ಗಟ್ಟಾಗಿ ನಿಂತರು. ಹೋರಾಟದ ವೆಚ್ಚಕ್ಕಾಗಿ ತಮ್ಮ ಸಹೋದ್ಯೋಗಿಗಳಿಂದ ಹಣ ಸಂಗ್ರಹಿಸಿದರು. ಮಹಿಳಾ ಕಾರ್ಮಿಕರು ಪ್ರತಿದಿನ ಧರಣಿಯಲ್ಲಿ ಭಾಗವಹಿಸಿದರು. ಕಾರ್ಮಿಕರ ಕುಟುಂಬದ ಸದಸ್ಯರು ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಮಿಕರು ಸ್ವಯಂಸೇವಕರ ತಂಡ ರಚಿಸಿಕೊಂಡು, ಧರಣಿ ನಡೆಯುವ ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮತ್ತು ಸಂಚಾರ ನಿಯಂತ್ರಣ, ಆಹಾರ ತಯಾರಿಕೆ, ವೇದಿಕೆ ನಿರ್ವಹಣೆ ಇತ್ಯಾದಿಗಳನ್ನು ನಿರ್ವಹಿಸಿದರು.

ಜನಬೆಂಬಲ

ರಾಜಕೀಯ ಪಕ್ಷಗಳು ಮತ್ತು ಪ್ರದೇಶಗಳ ಭೇದವಿಲ್ಲದೆ ಎಲ್ಲರೂ ಒಂದೇ ಧ್ವನಿಯಲ್ಲಿ ಕಾರ್ಮಿಕರ ಪರವಾಗಿ ಧ್ವನಿ ಎತ್ತಿದರು. ಕಾರ್ಮಿಕರು, ರೈತರು, ಆಟೋ ಚಾಲಕರು, ದಿನಗೂಲಿ ಕಾರ್ಮಿಕರು, ಕಾರ್ಮಿಕ ಮತ್ತು ದಲಿತ ಸಂಘಟನೆಗಳು, ಪ್ರಜಾಸತ್ತಾತ್ಮಕ ಮತ್ತು ಸಾಂಸ್ಕೃತಿಕ ಸಂಘಟನೆಗಳು, ವಿದ್ಯಾರ್ಥಿ–ಯುವಜನ ಸಂಘಟನೆಗಳು, ವಕೀಲರ ಸಂಘಗಳ ಬೆಂಬಲ

ಪುಟ 10 ಕ್ಕೆ

ಭಾರತ ಮತ್ತು ಬಾಂಗ್ಲಾದೇಶ ನಡುವೆ ಒಡಕುಂಟು ಮಾಡುವ ಕೋಮುವಾದ

ಪ್ರಕಾಶ್ ಕಾರತ್

ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಬೌದ್ಧರು ಮುಂತಾದ ಅಲ್ಪಸಂಖ್ಯಾತರ ಮೇಲಿನ ನಿರಂತರ ದಾಳಿಯು ವ್ಯಾಪಕ ಕಳವಳಕ್ಕೆ ಕಾರಣವಾಗಿದೆ. ಆಗಸ್ಟ್ ಮೊದಲ ವಾರದಲ್ಲಿ ಜನ ಚಳವಳಿಯಿಂದಾಗಿ ಶೇಕ್ ಹಸೀನಾ ಅವರ ಸರ್ಕಾರ ಬಿದ್ದುಹೋದ ನಂತರ ಅವರ ಸರ್ವಾಧಿಕಾರಿ ಆಳ್ವಿಕೆ ಕೊನೆಯಾದ ತರುವಾಯ ಬಾಂಗ್ಲಾದೇಶದಲ್ಲಿ ಹೆಚ್ಚು ಪ್ರಜಾಸತ್ತಾತ್ಮಕ ವ್ಯವಸ್ಥೆ ಸ್ಥಾಪನೆಯಾಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಮೊದಲ ಕೆಲವು ದಿನಗಳ ಗೊಂದಲಗಳಲ್ಲಿ ಹಿಂದೂ ದೇವಸ್ಥಾನಗಳು ಮತ್ತು ಇತರ ಅಲ್ಪಸಂಖ್ಯಾತರ ಮನೆಗಳ ಮೇಲಿನ ದಾಳಿಗಳು ದೇಶಾದ್ಯಂತ ಸಂಭವಿಸುತ್ತಿವೆ ಎಂಬ ವರದಿಗಳಿವೆ. ಆ ಸಮಯದಲ್ಲಿ, ಅಲ್ಪಸಂಖ್ಯಾತರನ್ನು ರಕ್ಷಿಸಲಾಗುವುದು ಎಂದು ಮಧ್ಯಂತರ ಸರ್ಕಾರದ ಪ್ರಧಾನ ಸಲಹೆಗಾರ, ಮಹಮದ್ ಯೂನಸ್ ಭರವಸೆ ನೀಡಿದ್ದರು. ಆದರೆ ಆ ನಂತರದಲ್ಲಿ ಹಲವಾರು ಘಟನೆಗಳು ನಡೆದಿವೆ. ಇಲ್ಲಿಯವರೆಗೆ, 2,000 ಹಿಂಸಾ ಕೃತ್ಯಗಳು ದಾಖಲಾಗಿವೆ ಮತ್ತು ಒಂಬತ್ತು ಅಲ್ಪಸಂಖ್ಯಾತರನ್ನು ಕೊಲ್ಲಲಾಗಿದೆ.



ಚಿನ್ಮಯ್ ಕೃಷ್ಣದಾಸ್ ಎಂಬ ಹಿಂದೂ ಸಂತರೊಬ್ಬರನ್ನು ದೇಶದ್ರೋಹದ ಆರೋಪದ ಮೇಲೆ ಬಂಧಿಸಿದ ನಂತರ ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಚಿನ್ಮಯ್ ದಾಸ್ ಅವರು ಈ ಮೊದಲು ಇಸ್ಕಾನ್ ಜತೆ ಸಂಬಂಧ ಹೊಂದಿದ್ದರು ಮತ್ತು ಅದರಿಂದ ನಂತರ ಅವರನ್ನು ಹೊರಹಾಕಲಾಗಿತ್ತು. ಈಗ ಅವರು ಸಮ್ಮಿಳಿತ ಸನಾತನಿ ಜಾಗರಣ ಜೋತೆಯ ಮುಖ್ಯಸ್ಥರಾಗಿದ್ದಾರೆ. ಅವರು ಉಗ್ರಗಾಮಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾಗ್ಯೂ, ಬಾಂಗ್ಲಾದೇಶದ ರಾಷ್ಟ್ರ ಧ್ವಜವನ್ನು ಅವಮಾನಿಸಿದ್ದಾರೆಂಬ ಕಾರಣ ನೀಡಿ ಅವರನ್ನು ದೇಶದ್ರೋಹದ ಆರೋಪ ಹೊರಿಸಿ ಬಂಧನ ಮಾಡಿರುವುದು ಅತಿರೇಕವೆನಿಸುತ್ತದೆ. ನ್ಯಾಯಾಲಯದ ಮುಂದೆ ಅವರನ್ನು ಕರೆತಂದು ಅವರಿಗೆ ಜಾಮೀನನ್ನು ನಿರಾಕರಿಸಿದಾಗ ಅವರ ಹಿಂಬಾಲಕರು ಹಾಗೂ ಪೋಲಿಸರ ನಡುವೆ ಸಂಘರ್ಷಗಳು ನಡೆದವು. ಪಬ್ಲಿಕ್ ಪ್ರಾಸಿಕ್ಯೂಟರೊಬ್ಬರ ಮೇಲೆ ದಾಳಿಯಾಗಿ ಅವರ ಹತ್ಯೆಯಾಯಿತು. ಸದ್ಯ, ಅಲ್ಲಿಯ ಕೋಮುಸಂಘರ್ಷದ ಸ್ಥಿತಿ ಎಂತಹ ಅಪಾಯಕಾರಿ ಹಂತ ತಲುಪಿದೆ ಎನ್ನುವುದು ಈ ಘಟನೆಯಿಂದ ತಿಳಿದುಬರುತ್ತದೆ.

ಈ ದಾಳಿಗಳೆಲ್ಲವೂ ಉತ್ಪ್ರೇಕ್ಷೆಯ ವರದಿಗಳು ಎಂದು ಮಧ್ಯಂತರ ಸರ್ಕಾರ ಹಾಗೂ ಅದರ ವಕ್ತಾರರು ಅಲ್ಲಗಳೆಯುತ್ತಿದ್ದಾರೆ. ಆ ಗಲಾಟೆಗಳೆಲ್ಲವೂ ಅವಾಮಿ ಲೀಗ್ ಕಾರ್ಯಕರ್ತರು ಹಾಗೂ ಬೆಂಬಲಿಗರ ವಿರುದ್ಧದ ಸಾರ್ವಜನಿಕ ಕೋಪ ಎಂದು ಬಿಂಬಿಸಲಾಗುತ್ತಿದೆ. ಈ ಬಾಂಗ್ಲಾದೇಶ–ವಿರೋಧಿ ಪ್ರಚಾರಗಳ ಹಿಂದೆ ಭಾರತ ಸರ್ಕಾರದ ಕೈವಾಡ ಇದೆ ಎಂದು ಅವರು ಭಾವಿಸಿದ್ದಾರೆ. ಅಲ್ಪ ಸಂಖ್ಯಾತರ ಮೇಲೆ ಮುಸ್ಲಿಂ ಶಕ್ತಿಗಳು ನಡೆಸುತ್ತಿರುವ ದಾಳಿಗಳನ್ನು ಯೂನಸ್ ನೇತೃತ್ವದ ಸರ್ಕಾರ ಕಡೆಗಣಿಸುವ ಪ್ರಯತ್ನ ಮಾಡುವ ಮೂಲಕ ಘೋರ ತಪ್ಪು ಎಸಗುತ್ತಿದೆ.

ಶೇಕ್ ಹಸೀನಾ ಸರ್ಕಾರಕ್ಕೆ ಮೋದಿ ಸರ್ಕಾರ ಬೆಂಬಲ ನೀಡಿದ್ದ ಕಾರಣದಿಂದಾಗಿ ಇರುವ ಭಾರತ–ವಿರೋಧಿ ಭಾವನೆಗಳನ್ನು ಮುಸ್ಲಿಂ ಮೂಲಭೂತವಾದಿ ಶಕ್ತಿಗಳು ಅಲ್ಪಸಂಖ್ಯಾತರ ಮೇಲಿನ ತಮ್ಮ ದಾಳಿಯನ್ನು ಮರೆಮಾಚಿಕೊಳ್ಳಲು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಜಮಾತ್–ಎ–ಇಸ್ಲಾಮಿ ಮೇಲಿನ ನಿಷೇಧವನ್ನು ತೆಗೆದುಹಾಕಿರುವುದು ಮತ್ತು ಅದರ ಮುಖಂಡರು ಜೈಲಿನಿಂದ ಹೊರ ಬಂದಿರುವುದು, ಹೆಫಾಜತ್–ಎ–ಇಸ್ಲಾಮ್ ನಂತಹ ಮೂಲಭೂತವಾದಿ ಗುಂಪುಗಳು ಹಿಂದುಗಳನ್ನು ಗುರಿಯಾಗಿಸಿ ದಾಳಿಗಳನ್ನು ಮಾಡುತ್ತಾ ಕೋಮು ವಿಭಜನೆಯನ್ನು ಸೃಷ್ಟಿಸಲು ಅವಕಾಶ ಒದಗಿಸಿದೆ. ಶೇಕ್ ಹಸೀನಾ ಅವರ ಸರ್ಕಾರದ ಸಮಯದಲ್ಲೂ ಈ ಮೂಲಭೂತವಾದಿ ಗುಂಪುಗಳು ಅಲ್ಪಸಂಖ್ಯಾತರ ವಿರುದ್ಧ ಸಕ್ರಿಯವಾಗಿದ್ದವು. ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ನಿಲುವನ್ನು ಪ್ರತಿಪಾದಿಸಬೇಕು ಮತ್ತು ತಮ್ಮ ಪಂಥವಾದಿ ರಾಜಕೀಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವ ಆ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಮುಂದಾಗಬೇಕು.

ಅಲ್ಪಸಂಖ್ಯಾತರನ್ನು ರಕ್ಷಿಸಬೇಕು ಎಂದು ಬೋಧಿಸುವ ಭಾರತದ ಆಳುವ ಜನರನ್ನು ಬಾಂಗ್ಲಾದೇಶದ ಜನರು ಅಪನಂಬಿಕೆಯಿಂದ ನೋಡುತ್ತಿದ್ದಾರೆ, ಏಕೆಂದರೆ ಭಾರತದ ಅಲ್ಪಸಂಖ್ಯಾತರ ವಿರುದ್ಧ ಇಲ್ಲಿಯ ಆಳರಸರು ನಡೆಸುತ್ತಿರುವ ದಾಳಿ ಹಾಗೂ ಅವರನ್ನು ಪೀಡಿಸುತ್ತಿರುವ ಅಸಹ್ಯಕರ ದಾಖಲೆ ಇಲ್ಲಿದೆ. ಭಾರತದ ಮುಖಂಡರುಗಳು ದಿನನಿತ್ಯ ಬಾಂಗ್ಲಾದೇಶಿಗಳ ವಿರುದ್ಧ ನಿರಂತರ ಭಾಷಣ ಮಾಡುತ್ತಿರುವ ಸಂಗತಿಯು ಬಾಂಗ್ಲಾದೇಶದ ಸಾರ್ವಜನಿಕ ಅಭಿಪ್ರಾಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇತ್ತೀಚಿನ ಜಾರ್ಖಂಡ್ ಚುನಾವಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಗೃಹ ಸಚಿವ, ಅಮಿತ್ ಶಾ ಜಾರ್ಖಂಡಿನಲ್ಲಿ ಬಾಂಗ್ಲಾದೇಶಿ ನುಸುಳುಕೋರರ ಬಗ್ಗೆ ಸುಳ್ಳು ಹೇಳಿಕೆಗಳನ್ನು ನೀಡಿ ಎಚ್ಚರಿಕೆಯ ಮಾತುಗಳನ್ನು ಆಡಿರುವುದು, ಬಾಂಗ್ಲಾದೇಶಿಗರಲ್ಲಿ ಅನಗತ್ಯ ಭಾರತ–ವಿರೋಧಿ ಭಾವನೆಗಳನ್ನು ಬೆಳೆಸಿದೆ. ಈ ಹಿಂದೆ ಅಂತಹವರನ್ನು 'ಗೆದ್ದಲುಹುಳುಗಳು'ಎಂದು ಅಮಿತ್ ಶಾ ಹೇಳಿರುವುದನ್ನು ಬಾಂಗ್ಲಾದೇಶದ ಜನರು ಗಮನಿಸಿದ್ದಾರೆ.

ಭಾರತ ಹಾಗೂ ಬಾಂಗ್ಲಾದೇಶ ಈ ಎರಡೂ ದೇಶಗಳ ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ವಿಭಜಕ ಕೋಮುವಾದಿ ರಾಜಕೀಯವು ಎರಡೂ ದೇಶಗಳ ಹಿತಾಸಕ್ತಿಗೆ ವಿರುದ್ಧವಾಗಿವೆ ಎನ್ನುವುದನ್ನು ತಿಳಿದು ತಮ್ಮ ನಿಲುವನ್ನು ಪ್ರತಿಪಾದಿಸಬೇಕು. 'ಅಲ್ಪಸಂಖ್ಯಾತರಿಗೆ ಬಾಂಗ್ಲಾದೇಶ ಈಗ ಸುರಕ್ಷಿತವಾಗಿದೆ ಮತ್ತು ಅವರ ನಾಗರಿಕ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಲಾಗುವುದು' ಎಂದು ಬಾಂಗ್ಲಾದೇಶದಲ್ಲಿ ಶೇಕ್ ಹಸೀನಾ ಸರ್ಕಾರದ ಸರ್ವಾಧಿಕಾರಿ ಆಳ್ವಿಕೆಯನ್ನು ವಿರೋಧಿಸಿ ಹೋರಾಟ ಮಾಡಿದವರು ಎದ್ದುನಿಂತು ಪ್ರತಿಪಾದಿಸಲು ಸಾಧ್ಯವಾಗಬೇಕು.

ಅನು: ಟಿ.ಸುರೇಂದ್ರರಾವ್

ಬಿಜೆಪಿಯನ್ನು ಅಪ್ಪಿಕೊಳ್ಳುವ ಪಕ್ಷ.... ಪುಟ 16 ರಿಂದ

ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡವು. ಈ ಮೈತ್ರಿಯನ್ನು 1989ರಲ್ಲಿ ಹಿಂದುತ್ವ ಬೆಂಬಲದ ವೇದಿಕೆಯಲ್ಲಿ ದೃಢಪಡಿಸಲಾಯಿತು.

ಎನ್‌ಸಿಪಿ ಮತ್ತು ಶಿವಸೇನೆ ಎರಡೂ ಪಕ್ಷಗಳನ್ನು ಒಡೆಯಿತು

1992ರಲ್ಲಿ ಬಾಬರಿ ಮಸೀದಿ ಧ್ವಂಸ ಮತ್ತು 92–93ರ ಮುಂಬೈ ಗಲಭೆಗಳು ಮಹಾರಾಷ್ಟ್ರದಲ್ಲಿ ಮೊದಲ ಶಿವಸೇನೆ–ಬಿಜೆಪಿ ಸರ್ಕಾರಕ್ಕೆ ಕಾರಣವಾಯಿತು. ಶಿವಸೇನೆಯ ಮನೋಹರ ಜೋಶಿ ಮುಖ್ಯಮಂತ್ರಿಯಾದರು. ಮಹಾರಾಷ್ಟ್ರದಲ್ಲಿ ಶಿವಸೇನೆ ಸ್ಪರ್ಧಿಸಲಿದ್ದು, ರಾಷ್ಟ್ರಮಟ್ಟದಲ್ಲಿ ಬಿಜೆಪಿ ರಾಜಕೀಯ ನಡೆ ನಿರ್ಧರಿಸಲಿದೆ ಎಂಬುದು ಅಂದಿನ ಒಪ್ಪಿತ ಸೂತ್ರವಾಗಿತ್ತು. ಆದರೆ, 2014ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಕೇಳಿತು. ಇದು ರಾಜಕೀಯ ಸಮೀಕರಣವನ್ನೇ ಬದಲಿಸಿತು. ರಾಜ್ಯದಲ್ಲಿ ಬಿಜೆಪಿಗೆ ಅಗ್ರಸ್ಥಾನ ನೀಡಲು ಶಿವಸೇನೆ ನಿರಾಕರಿಸಿತು. ಇದರಿಂದ ಮೈತ್ರಿ ಮುರಿದುಬಿತ್ತು.

ಶಿವಸೇನೆಯ ಪ್ರಭಾವ ಇಳಿಮುಖವಾಯಿತು. 2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ–ಶಿವಸೇನೆ (ಅವಿಭಜಿತ) ಬಹುಮತ ಗಳಿಸಿ, ಬಿಜೆಪಿ ಸರ್ಕಾರ ರಚನೆ ಮಾಡಿತು. ಈ ಮೈತ್ರಿ ಹೆಚ್ಚು ಕಾಲ ಉಳಿಯಲಿಲ್ಲ ಮತ್ತು ಶಿವಸೇನೆ ಹಿಂದೆ ಸರಿಯಿತು. ನಂತರ, ಶಿವಸೇನೆಯು ಎನ್‌ಸಿಪಿ ಮತ್ತು ಕಾಂಗ್ರೆಸ್ ನೊಂದಿಗೆ 'ಮಹಾ ವಿಕಾಸ್ ಅಘಾಡಿ'(ಎಂವಿಎ) ಕೂಟ ರಚಿಸಿಕೊಂಡು ಚುನಾವಣೋತ್ತರ ಸಮ್ಮಿಶ್ರ ಸರ್ಕಾರವನ್ನು ರಚಿಸಿದಾಗ, ಬಿಜೆಪಿಯು ಎನ್‌ಸಿಪಿ ಮತ್ತು ಶಿವಸೇನೆ ಈ ಎರಡೂ ಪಕ್ಷಗಳನ್ನು ಒಡೆಯಿತು. ಅವರ ಚಿಹ್ನೆಗಳನ್ನು ನಿಷೇಧಿಸಲಾಯಿತು. ಕಳೆದ ಐದು ವರ್ಷಗಳಲ್ಲಿ ರಾಜ್ಯವು ಮೂರು ವಿಭಿನ್ನ ಮುಖ್ಯಮಂತ್ರಿಗಳನ್ನು ಕಂಡಿದೆ: ಬಿಜೆಪಿಯ ದೇವೇಂದ್ರ ಫಡ್ನವಿಸ್, ಶಿವಸೇನೆ(ಯುಬಿಟಿ)ಯ ಉದ್ಧವ್ ಠಾಕ್ರೆ ಮತ್ತು ಶಿವಸೇನೆ(ಎಸ್‌ಎಚ್‌ಎಸ್)ಯ ಏಕನಾಥ್ ಶಿಂಧೆ. 2019ರಲ್ಲಿ ಬಿಜೆಪಿ 105 ಸ್ಥಾನಗಳನ್ನು ಗಳಿಸಿತ್ತು. 2024ರಲ್ಲಿ 132 ಸ್ಥಾನಗಳನ್ನು ಗಳಿಸುವ ಮೂಲಕ ಬಿಜೆಪಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿ ಮುಖ್ಯಮಂತ್ರಿ ಸ್ಥಾನ ಪಡೆದುಕೊಂಡಿದೆ.

ಶಿರೋಮಣಿ ಅಕಾಲಿದಳ

ಶಿರೋಮಣಿ ಅಕಾಲಿದಳ 1996ರಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಸದಸ್ಯ. ಈ ಒಕ್ಕೂಟವು 2007ರಲ್ಲಿ ಪಂಜಾಬಿನಲ್ಲಿ ಅಧಿಕಾರಕ್ಕೆ ಬಂತು. 2012ರಲ್ಲಿ ಮತ್ತೆ ಸರ್ಕಾರ ರಚನೆಯಾಯಿತು. ಆದರೆ ತನ್ನನ್ನು ತಾನು ಆತ್ಮೀಯ ಸ್ನೇಹಿತ ಮತ್ತು ರೈತರ ಬೆಂಬಲದ ಧ್ವನಿ ಎಂದು ಘೋಷಿಸಿಕೊಳ್ಳುವ ಪಕ್ಷವೂ ವಿವಾದಾತ್ಮಕ ಕೃಷಿ ಕಾನೂನುಗಳನ್ನು ಪರಿಚಯಿಸುವ ಮೊದಲು ಬಿಜೆಪಿಯನ್ನು ಸಂಪರ್ಕಿಸಲು ಹಿಂಜರಿಯಲಿಲ್ಲ. ಈ ಮೈತ್ರಿ 2020ರಲ್ಲಿ ಮುರಿದುಬಿತ್ತು. 2022ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ, 117 ಕ್ಷೇತ್ರಗಳಲ್ಲಿ ಕೇವಲ ಮೂರು ಸ್ಥಾನಗಳನ್ನು ಪಡೆದುಕೊಂಡಿತು. ರೈತರಿಗೆ ಮಾಡಿದ ದ್ರೋಹಕ್ಕೆ ಇದು ಪ್ರತಿಫಲವಾಗಿತ್ತು. ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷವು ಸರ್ಕಾರವನ್ನು ರಚಿಸಿದ ನಂತರ, 2024ರ ಲೋಕಸಭೆ ಚುನಾವಣೆಯಲ್ಲಿ ಒಂದು ಸ್ಥಾನವನ್ನು ಮಾತ್ರ ಗೆದ್ದಿತು.

ಅಸ್ಸಾಂ ಗಣ ಪರಿಷತ್ತಿನ ಕಥೆ!

ಅಸ್ಸಾಂ ಗಣ ಪರಿಷತ್ತು (ಎಜಿಪಿ) ಬಿಜೆಪಿಯೊಂದಿಗೆ ಪರ್ಯಾಯ ಮೈತ್ರಿ ಮತ್ತು ಮುರಿದುಬಿದ್ದ ಇತಿಹಾಸವನ್ನು ಹೊಂದಿದೆ. ಎಜಿಪಿಯ ಪ್ರಮುಖ ನಾಯಕರಲ್ಲಿ ಒಬ್ಬರಾದ ಸರ್ಬಾನಂದ ಸೋನಾವಾಲ್ ಅವರು ಬಿಜೆಪಿಗೆ ಸೇರ್ಪಡೆಗೊಂಡರು. ಅವರು ಮುಖ್ಯಮಂತ್ರಿ ಹುದ್ದೆ ಅನುಭವಿಸಿದರು. ಮೈತ್ರಿಕೂಟದ ಪ್ರಮುಖ ಅಂಗವಾಗಿದ್ದ ಎಜಿಪಿ 20 ವರ್ಷಗಳಲ್ಲಿ ತನ್ನ ಸ್ಥಾನಮಾನವನ್ನು ಕಳೆದುಕೊಂಡಿತು. ಇತ್ತೀಚೆಗಷ್ಟೇ ನಡೆದ ಲೋಕಸಭೆ ಚುನಾವಣೆಯಲ್ಲಿ ಅಸ್ಸಾಂನ 14 ಸ್ಥಾನಗಳಲ್ಲಿ ಬಿಜೆಪಿ 9 ಮತ್ತು ಎಜಿಪಿ ಒಂದರಲ್ಲಿ ಗೆಲುವು ಸಾಧಿಸಿದೆ.

ಛಿದ್ರವಾದ ಎಐಎಡಿಎಂಕೆ

ತಮಿಳುನಾಡಿನಲ್ಲಿ ಎಐಎಡಿಎಂಕೆ ಮೂರು ಬಣಗಳಾಗಿ ಒಡೆದಿದೆ. ಇಪಿಎಸ್, ಒಪಿಎಸ್ ಮತ್ತು ಡಿಟಿವಿ ದಿನಕರನ್ ನೇತೃತ್ವದ ಎರಡು ತಂಡಗಳು ದಕ್ಷಿಣ ತಮಿಳುನಾಡಿನ ಎಐಎಡಿಎಂಕೆ ಪಕ್ಷದ ಅಧಿಕೃತ ತಂಡಕ್ಕೆ ಗಂಭೀರ ಸವಾಲಾಗಿದೆ. ಏಕೆಂದರೆ ಅದು ಅಧಿಕೃತ ಮಾನ್ಯತೆ ಮತ್ತು ಚುನಾವಣಾ ಚಿಹ್ನೆಯನ್ನು ಹೊಂದಿದೆ. ತಮಿಳುನಾಡಿನಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಎಐಎಡಿಎಂಕೆ ಒಂದೂ ಸ್ಥಾನವನ್ನು ಗೆಲ್ಲಲಿಲ್ಲ.

ಕ್ಷೀಣಿಸಿದ ಪಿಡಿಪಿ

ಜಮ್ಮು ಮತ್ತು ಕಾಶ್ಮೀರದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ)ಯ ಭವಿಷ್ಯವು ದುಃಖಕರ ಕಥೆಯಾಗಿದೆ. ಆರ್ಟಿಕಲ್ 370 ರದ್ದತಿಗೆ ಕೆಲವು ತಿಂಗಳುಗಳ ಮೊದಲು ಬಿಜೆಪಿಯೊಂದಿಗೆ ಅಧಿಕಾರವನ್ನು ಅನುಭವಿಸಿದ ಪಿಡಿಪಿ, ಈಗ ಒಂದು ಸ್ಥಾನವೂ ಇಲ್ಲದೆ ಸಂಸತ್ತಿನಿಂದ ಹೊರಹಾಕಲ್ಪಟ್ಟಿದೆ. ಇತ್ತೀಚೆಗೆ ನಡೆದ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 90 ಸ್ಥಾನಗಳ ಪೈಕಿ ಪಿಡಿಪಿ ಶೇ. 8.87 ಮತ ಗಳಿಸಿ ಕೇವಲ 3 ಸ್ಥಾನಗಳನ್ನು ಪಡೆದಿದೆ. 2014ರ ವಿಧಾನಸಭಾ ಚುನಾವಣೆಯಲ್ಲಿ ಶೇ. 22.7 ಮತ ಪಡೆದು 28 ಸ್ಥಾನಗಳಲ್ಲಿ ಪಿಡಿಪಿ ಗೆಲುವು ಸಾಧಿಸಿತ್ತು.

ಇತರೆ ಪ್ರಾದೇಶಿಕ ಪಕ್ಷಗಳ ಇತಿಹಾಸ?

ಪ್ರಾದೇಶಿಕ ಪಕ್ಷಗಳಾದ ಬಿಜು ಜನತಾ ದಳ, ವೈಎಸ್‌ಆರ್ ಕಾಂಗ್ರೆಸ್, ಭಾರತ್ ರಾಷ್ಟ್ರ ಸಮಿತಿ ಮತ್ತು ಎಐಎಡಿಎಂಕೆ ಪಕ್ಷಗಳು ಬಿಜೆಪಿಗೆ ಸಂಖ್ಯಾತ್ಮಕ ಬೆಂಬಲ ನೀಡಿವೆ. ಅನೇಕ ತಾರತಮ್ಯ ಕಾನೂನುಗಳನ್ನು ಜಾರಿಗೆ ತರಲು ಈ ಪಕ್ಷಗಳು ಒಂದಲ್ಲಾ ಒಂದು ರೀತಿಯಲ್ಲಿ ಬಿಜೆಪಿಗೆ ಬೆಂಬಲ ನೀಡಿವೆ. ಇಂತಹ ಕಾನೂನುಗಳು ಬಿಜೆಪಿಗೆ ಒಕ್ಕೂಟ ತತ್ವವನ್ನು ದುರ್ಬಲಗೊಳಿಸಲು ಸಹಾಯ ಮಾಡಿತು. ಬಿಜೆಪಿಗೆ ರಾಜ್ಯಸಭೆಯಲ್ಲಿ ಸಾಕಷ್ಟು ಸಂಖ್ಯೆಯಿಲ್ಲದ ಕಾರಣ ಮಸೂದೆಗಳನ್ನು ಅಂಗೀಕರಿಸಲು ಈ ಪ್ರಾದೇಶಿಕ ಪಕ್ಷಗಳು ಬಿಜೆಪಿಯನ್ನು ಬೆಂಬಲಿಸಿದವು. ಈ ಪಕ್ಷಗಳ ಪ್ರಸ್ತುತ ಸ್ಥಿತಿ ಹೇಗಿದೆ ಮತ್ತು ಬಿಜೆಪಿ ಅವುಗಳನ್ನು ಹೇಗೆ ನಿಭಾಯಿಸುತ್ತಿದೆ ಎಂಬುದನ್ನು ನೋಡುವುದಾದರೆ, ಯುನೈಟೆಡ್ ಜನತಾ ದಳವನ್ನು ಹೊರತುಪಡಿಸಿ, ಪ್ರಾದೇಶಿಕ ಪಕ್ಷಗಳು ಇಂದು ಜನಬೆಂಬಲ ಕಳೆದುಕೊಂಡಿವೆ. 2024ರ ಲೋಕಸಭೆಯಲ್ಲಿ ವೈಎಸ್‌ಆರ್‌ಸಿಪಿ ನಾಲ್ಕು ಸ್ಥಾನಕ್ಕೆ ಕುಸಿದಿದೆ. ಒಡಿಶಾದ ಒಟ್ಟು 21 ಸ್ಥಾನಗಳ ಪೈಕಿ ಬಿಜೆಪಿ 20 ಸ್ಥಾನಗಳನ್ನು ಗೆದ್ದಿದ್ದರೆ, ಬಿಜು ಜನತಾ ದಳ ಒಂದೂ ಸ್ಥಾನ ಗೆಲ್ಲಲಿಲ್ಲ. ತೆಲಂಗಾಣದಲ್ಲಿ ಒಟ್ಟು 17 ಸ್ಥಾನಗಳಲ್ಲಿ ಬಿಜೆಪಿಗೆ 8 ಸ್ಥಾನಗಳು, ಬಿಆರ್‌ಎಸ್‌ಗೆ ಇದು ಶೂನ್ಯ. ಈ ಪಕ್ಷಗಳು ಬಿಜೆಪಿಯೊಂದಿಗಿನ ರಾಜಕೀಯ ಚೌಕಾಶಿಯ ಪ್ರತಿಫಲವಾಗಿ ಆಯಾ ರಾಜ್ಯಗಳಲ್ಲಿ ತಮ್ಮ ಬಲವನ್ನು ಕಳೆದುಕೊಳ್ಳುತ್ತಿವೆ.

ಬಿಜೆಪಿಯು ತನ್ನ ದೌರ್ಬಲ್ಯಗಳನ್ನು ಮಿತ್ರ ಪಕ್ಷಗಳ ತಲೆಯ ಮೇಲೆ ಬಿಂಬಿಸುವಾಗ ಮತ್ತು ಅವುಗಳನ್ನು ಖಾಲಿ ಮಾಡುತ್ತಲೇ, ಮೈತ್ರಿ ಮಾಡಿಕೊಂಡಿರುವ ಪಕ್ಷಗಳ ಬಲವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತದೆ. ಅದರ ಅಪ್ಪುಗೆಯನ್ನು ಸಾಮಾನ್ಯವಾಗಿ ಸಾವಿನ ಅಪ್ಪುಗೆಯಾಗಿ ನೋಡಲಾಗುತ್ತದೆ. ಇದನ್ನು ಮೀರಿ ಉಳಿದುಕೊಳ್ಳುವುದು ಅಥವಾ ಬೆಳೆಯುವುದು ಒಂದು ಸಹಾಸವೇ ಸರಿ. ಜನತಾ ದಳ (ಜಾತ್ಯಾತೀತ)ವು ಬಿಜೆಪಿಯ ಡೆತ್ ಈಟರ್ ಗಳಲ್ಲಿ ಬದುಕಬಹುದೇ?

ಮಹಾಯುತಿಯ 'ಮಹಾ' ವಿಜಯ ಹೇಗಾಯಿತು...... ಪುಟ 6 ರಿಂದ

ಪೈಪೋಟಿಯಲ್ಲಿ, ಭಿನ್ನಮತ ಬಗೆಹರಿಸುವುದರಲ್ಲಿ ಅಮೂಲ್ಯ ಕಾಲಹರಣ ಮಾಡಿತು. ಜನರತ್ತ ಹೋಗುವುದು, ಕಾರ್ಯವ್ಯೂಹ, ಕಾರ್ಯತಂತ್ರ ರೂಪಿಸುವುದು ಇತ್ಯಾದಿಗಳಲ್ಲಿ ಸೋತಿತು.

ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ವ್ಯತ್ಯಾಸಗಳಿವೆ, ಅಲ್ಲಿ ಕೆಲಸ ಮಾಡಿದ ಅಂಶಗಳು, ಕಥನಗಳು, ತಂತ್ರಗಳು ಇಲ್ಲಿ ಕೆಲಸ ಮಾಡದಿರಬಹುದು ಎಂಬ ಪ್ರಾಥಮಿಕ ಅಂಶಗಳನ್ನು ಗ್ರಹಿಸದೆ ಹಿಂದಿನದ್ದನ್ನೇ ಪುನರಾವರ್ತನೆ ಮಾಡಿತು. ಬಿಜೆಪಿ, ಮಹಾಯುತಿಯ ಕಾರ್ಯಾಚರಣೆಗಳಿಂದ ಅದರ ಕಾರ್ಯವ್ಯೂಹ, ಕಾರ್ಯತಂತ್ರಗಳನ್ನು ಗ್ರಹಿಸಿ ಅವುಗಳಿಗೆ ಪ್ರತಿಕ್ರಮಗಳನ್ನು ರೂಪಿಸುವ ಕೆಲಸವೂ ನಡೆಯಲಿಲ್ಲ. ಹರಿಯಾಣದಂತೆ ಇಲ್ಲೂ ಎಲ್ಲವನ್ನೂ ರಾಜ್ಯ ನಾಯಕತ್ವಕ್ಕೆ ಬಿಡುವ, ಸಮಸ್ಯೆ ಕಂಡಲ್ಲೂ ಸಕಾಲಿಕವಾಗಿ ಸೂಕ್ತ ಮಧ್ಯಪ್ರವೇಶ ನಡೆಯಲಿಲ್ಲ. ಜನವಿಭಾಗಗಳನ್ನು ಬಾಧಿಸುವ ಸಮಸ್ಯೆಗಳನ್ನು ಎತ್ತುವ, ಅದಕ್ಕೆ ಪರಿಹಾರ ಸೂಚಿಸುವ ಪ್ರಯತ್ನ ನಡೆಯಲಿಲ್ಲ. ಪಂಚ ಗ್ಯಾರಂಟಿಗಳ ಸಮಗ್ರ ಪ್ರಣಾಳಿಕೆ ಉತ್ತಮವಾಗಿದ್ದರೂ ಅದರ ಬಿಡುಗಡೆಯಲ್ಲಿ ವಿಳಂಬ ಮತ್ತು ಅದರ ಸಂದೇಶವನ್ನು ಮನೆ–ಮನೆಗೆ ಮುಟ್ಟುವ ಕೆಲಸ ಆಗಲಿಲ್ಲ.

ಮಹಾ ವಿಜಯ ಸಂಶಯಾಸ್ಪದವಾಗಿದೆಯೇ?

ಈ ಎಲ್ಲ ಕಾರಣಗಳೂ ಒಟ್ಟಾಗಿ ಮಹಾಯುತಿಯ ಗೆಲುವನ್ನು ವಿವರಿಸಬಹುದೇ ವಿನಾ, ಆಶ್ಚರ್ಯಕಾರಿ ಸಮಗ್ರ ಮಹಾ ವಿಜಯವನ್ನು ವಿವರಿಸುವುದಿಲ್ಲ. ಇಂತಹ ಮಹಾವಿಜಯಕ್ಕೆ ಕಾರಣವಾದ 1–2 ಪ್ರಮುಖ ಅಂಶವನ್ನು ಲೋಕನೀತಿ–ಸಿಎಸ್‌ಡಿಎಸ್ ನಡೆಸಿದ ಚುನಾವಣೋತ್ತರ ಸಮೀಕ್ಷೆ ಸಹ ಹೊರಗೆಡಹುವುದಿಲ್ಲ. ಉದ್ಧವ ಮತ್ತು ಶಿಂಧೆ ಸರಕಾರಗಳಲ್ಲಿ ಯಾವುದು ಒಳ್ಳೆಯದು, ಡಬ್ಬಲ್ ಇಂಜಿನ್ ಸರಕಾರ ಅಗತ್ಯವೇ, ಒಟ್ಟಾಗಿ ಎಲ್ಲ ಕಲ್ಯಾಣ ಯೋಜನೆಯ ಜಾರಿ ಮುಂತಾದ ವಿಷಯಗಳ ಬಗೆಗಿನ ಸಮೀಕ್ಷೆ ಮಹಾಯುತಿಯ ಬಗ್ಗೆ ಭಾರಿ ಒಲವನ್ನೇನೂ ತೋರಿಸುವುದಿಲ್ಲ.

ಈ ನಡುವೆ ಚುನಾವಣಾ ಕಮಿಶನ್ ಎಲ್ಲ ಅಂಕೆ ಸಂಖ್ಯೆಗಳು ಪ್ರಕಟವಾದ ನಂತರ ಹೊರಬಂದ ಅಂಶಗಳು ಹೊಸ ಪ್ರಶ್ನೆಗಳನ್ನು ಹುಟ್ಟು ಹಾಕಿವೆ. ಚುನಾವಣಾ ಕಮಿಶನ್ ಒಟ್ಟು ದಾಖಲಾದ ಮತಗಳ ಸಂಖ್ಯೆಯನ್ನು ಬಹಳ ಹಿಂದಿನಿಂದಲೂ ಚುನಾವಣಾ ದಿನವೇ ತಡರಾತ್ರಿಯಲ್ಲಿ ಪ್ರಕಟಿಸುತ್ತಿತ್ತು. ಕಳೆದ ಹಲವು ಚುನಾವಣೆಗಳಿಂದ ಕಮಿಶನ್ ಮತಪ್ರಮಾಣ (%) ಮಾತ್ರ ಪ್ರಕಟಿಸುತ್ತಿದ್ದು, ದಾಖಲಾದ ಮತಗಳ ಸಂಖ್ಯೆಯ ಪ್ರಕಟಣೆಯಲ್ಲಿ 2–3 ದಿನಗಳಿಂದ ಹಲವು ದಿನಗಳ ವಿಳಂಬ ಕಂಡು ಬಂದಿದೆ. ಯಾವುದೇ ಪಕ್ಷಕ್ಕೆ ಫಲಿತಾಂಶದ ಬಗ್ಗೆ ಸಂಶಯ ವ್ಯಕ್ತಪಡಿಸಿದಾಗ 100% ವಿವಿಪ್ಯಾಟ್‌ಗಳನ್ನು ಲೆಕ್ಕ ಹಾಕಿ ತಾಳೆ ಹಾಕಬೇಕು ಎಂಬ ಸರಿಯಾದ ಒತ್ತಾಯವನ್ನು ಕಮಿಶನ್ ವಿರೋಧಿಸುತ್ತಾ ಬಂದಿದೆ. ಕಮಿಶನ್ ಸ್ವತಃ ಪ್ರಕಟಿಸಿದ ದಾಖಲಾದ ಮತಗಳ ಮತ್ತು ಎಣಿಸಲಾದ ಮತಗಳ ಸಂಖ್ಯೆಗಳ ನಡುವೆ ಗಮನಾರ್ಹ ಅಂತರ ಕಳೆದ ಹಲವು ಚುನಾವಣೆಗಳಿಂದ ಸಂಶಯಕ್ಕೆ ಕಾರಣವಾಗಿದೆ. ಇದಕ್ಕೆ ಕಮಿಶನ್ ಯಾವುದೇ ಸಮಂಜಸ ಉತ್ತರ ನೀಡಿಲ್ಲ.

ಈ ಚುನಾವಣೆಯಲ್ಲಿ ಇನ್ನೊಂದು ತೀವ್ರ ಸಂಶಯಾಸ್ಪದ ಅಂಶ ಬೆಳಕಿಗೆ ಬಂದಿದೆ. ಮತದಾನ ಮುಗಿದ ಮೇಲೆ ಮತದಾನದ ಪ್ರಮಾಣ ಶೇ.58.22 ಎಂದು ಹೇಳಲಾಯಿತು. ಕೆಲವು ಗಂಟೆಗಳ ನಂತರ ಮತದಾನದ ಪ್ರಮಾಣ ಶೇ.65.02 ಎನ್ನಲಾಯಿತು. ಮೂರು ದಿನಗಳ ನಂತರ ಮತ ಎಣಿಕೆ ದಿನ ಶೇ.66.05 ಎಂದು ಹೇಳಲಾಯಿತು. ಇದರ ಅರ್ಥ ಮತದಾನ ಮುಗಿದ ಮೇಲೆ ಮತಪ್ರಮಾಣ ಶೇ.7.83ರಷ್ಟು ಹೆಚ್ಚಾಯಿತು. ಇದು ಸುಮಾರು 76 ಲಕ್ಷಗಳಿಗೆ ಸಮನಾಗುತ್ತದೆ. ಈ ತೀವ್ರ ಸಂಶಯಕ್ಕೆಡೆ ಮಾಡುವ ಅಂಶವನ್ನು 'ದಿ ವೈರ್' ವರದಿ ಮಾಡಿದೆ.

ಹೀಗಾಗಿ ಚುನಾವಣಾ ಕಮಿಶನ್ ಇದಕ್ಕೆ ಸೂಕ್ತ ಸಮಜಾಯಿಷಿ ನೀಡದೆ ಮಹಾಯುತಿಯ ಮಹಾವಿಜಯ ಸಂಶಯಾಸ್ಪದವಾಗಿದೆ ಎನ್ನಬಹುದು.

ಬಿಇಎಂಎಲ್ ಕಾರ್ಮಿಕರ 26 ದಿನಗಳ ಅನಿರ್ದಿಷ್ಟಾವಧಿ ಮುಷ್ಕರ ಮತ್ತು ಧರಣಿ ಅಂತ್ಯ...... ಪುಟ 9 ರಿಂದ

ಮತ್ತು ಭಾಗವಹಿಸುವಿಕೆಯೊಂದಿಗೆ ಈ ಮುಷ್ಕರವು ಕೆಜಿಎಫ್ ನ ಜನಾಂದೋಲನವಾಗಿ ಮಾರ್ಪಟ್ಟಿತು. ಕನ್ನಡ ಮತ್ತು ತಮಿಳು ಅಸೋಸಿಯೇಷನ್ ಸಂಘಗಳು, ವರ್ತಕ ಸಂಘಗಳು, ವಿಕಲಚೇತನರ ಸಂಘ, ರಸಾಯನ ಶಾಸ್ತ್ರಜ್ಞ ಮತ್ತು ಔಷಧಿ ವ್ಯಾಪಾರಿಗಳ ಸಂಘ, ಕ್ರಿಶ್ಚಿಯನ್ನರ ಮತ್ತು ಮುಸ್ಲಿಮರ ಸಂಘಟನೆಗಳ ನೂರಾರು ಜನರು ವಿವಿಧ ಪ್ರದೇಶಗಳಿಂದ, ವಿಶೇಶವಾಗಿ ಮುಚ್ಚಿದ ಬಿಜಿಎಂಎಲ್ ಮೈನಿಂಗ್ ಕಾಲೋನಿಯಿಂದ ಧರಣಿ ಸ್ಥಳಕ್ಕೆ ಭೇಟಿ ನೀಡುತ್ತಿದ್ದರು. ಹಲವರು ಹಣ ಮತ್ತು ಆಹಾರ ಧಾನ್ಯಗಳನ್ನು ಸಹ ಕೊಡುಗೆಯಾಗಿ ನೀಡಿದ್ದಾರೆ.

ಚುನಾಯಿತ ಜನಪ್ರತಿನಿಧಿಗಳ ಬೆಂಬಲ

ಈ ಅವಧಿಯಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕೋಲಾರ ಸಂಸದ ಮಲ್ಲೇಶಬಾಬು, ಕೆಜಿಎಫ್ ವಿಧಾನಸಭಾ ಸದಸ್ಯೆ ರೂಪಕಲಾ ಶಶಿಧರ್, ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ ಇವರೆಲ್ಲರೂ ಧರಣಿ ಸ್ಥಳಕ್ಕೆ ಖುದ್ದು ಭೇಟಿ ನೀಡಿದರು. ಕೆಜಿಎಫ್ ಪುರಸಭೆಯ ಬಹುತೇಕ ಎಲ್ಲಾ ಕೌನ್ಸಿಲರ್‌ಗಳು ಹೋರಾಟಕ್ಕೆ ಬೆಂಬಲ ನೀಡಿದರು.

ಮಾಜಿ ಸಂಸದ ಸಿಐಟಿಯುನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಅವರು ಕೇಂದ್ರ ರಕ್ಷಣಾ ಸಚಿವರಿಗೆ ಪತ್ರ ಬರೆದು ತಕ್ಷಣದ ಮಧ್ಯಪ್ರವೇಶವನ್ನು ಮತ್ತು BEML ಆಡಳಿತವು ಯೂನಿಯನ್ ಪ್ರತಿನಿಧಿಗಳೊಂದಿಗೆ ಮಾತುಕತೆಗಳನ್ನು ಪ್ರಾರಂಭಿಸಲು ಮತ್ತು ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸಲು ನಿರ್ದೇಶಿಸಿದ್ದಾರೆ.

ಸಾರ್ವಜನಿಕ ಮತ್ತು ಖಾಸಗಿ ವಲಯದ ಉದ್ಯಮಗಳಾದ ವೋಲ್ವೋ ಬಸ್‌ಗಳು, ವೋಲ್ವೋ ಟ್ರಕ್ಸ್, ಟಾಟಾ ಎಲೆಕ್ಟ್ರಾನಿಕ್ಸ್ ಇತ್ಯಾದಿಗಳ ಅನೇಕ ಸಂಘಗಳು ಮತ್ತು ಸಂಸ್ಥೆಗಳಿಂದ ಬೆಂಬಲ ಹರಿದುಬಂದವು. ❍

ಬಗರ್ ಹುಕ್ಕಂ ಸಾಗುವಳಿದಾರರಿಗೆ ಹಕ್ಕು ಪತ್ರ, ಜಿಲ್ಲೆಯ ಸಮಗ್ರ ಅಭಿವೃದ್ಧಿ, ವಸತಿ ಹೀನರಿಗೆ ವಸತಿಗಾಗಿ

ಸಿಪಿಐ(ಎಂ)ನ ತುಮಕೂರು ಜಿಲ್ಲಾ ಸಮ್ಮೇಳನದ ಒತ್ತಾಯ

ಬಗರ್ ಹುಕ್ಕಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಬೇಕು, ಜಿಲ್ಲೆಯ ಸಮಗ್ರ ಅಭಿವೃದ್ಧಿಯಾಗಬೇಕು, ವಸತಿ ಹೀನರಿಗೆ ವಸತಿ ಮತ್ತು ನಿವೇಶನದ ಸೌಲಭ್ಯ ಒದಗಿಸಬೇಕು, ದಲಿತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಬೇಕು ಮತ್ತು ಜಿಲ್ಲೆಯಲ್ಲಿ ಶಾಂತಿ ಸೌಹಾರ್ದತೆ ಸ್ಥಾಪನೆಯಾಗಬೇಕು ಎಂಬ ಸರ್ಕಾರದ ಮೇಲಿನ ಒತ್ತಾಯದ ನಿರ್ಣಯಗಳೂ ಸೇರಿದಂತೆ ಹಲವು ನಿರ್ಣಯಗಳನ್ನು ಸಿಪಿಐ(ಎಂ)ನ ತುಮಕೂರು 18ನೇ ಜಿಲ್ಲಾ ಸಮ್ಮೇಳನ ತೆಗೆದುಕೊಂಡಿದೆ. ಇವುಗಳಿಗಾಗಿ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟ ಮುಂದುವರೆಸಲು ಸಮ್ಮೇಳನದಲ್ಲಿ ಪಣತೊಡಲಾಗಿದೆ. ಸಮ್ಮೇಳನವು 2024 ಅಕ್ಟೋಬರ್ 28 ಮತ್ತು 29 ಈ 2 ದಿನಗಳು ತುಮಕೂರು ನಗರದಲ್ಲಿ ನಡೆಯಿತು.

ಅಕ್ಟೋಬರ್ 28ರಂದು ಬೆಳಿಗ್ಗೆ 11.30ಕ್ಕೆ ಕಾಮ್ರೆಡ್ ಸುಬ್ರಮಣ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗಸಭೆಯ ಉದ್ಘಾಟನೆಯನ್ನು ಕಾಂ. ಮೀನಾಕ್ಷಿಸುದರಂ ನೆರವೇರಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಮ್ರೆಡ್ ಸೈಯದ್ ಮುಜೀಬ್ ಹಾಗೂ ಬಿ.ಉಮೇಶ್, ಲೋಕೇಶ್ ಬಹಿರಂಗ ಸಭೆಯಲ್ಲಿ ಮಾತನಾಡಿದರು. ಶಹತಾಜ್ ವೇದಿಕೆಯಲ್ಲಿದ್ದರು. ಷಣ್ಮುಖಪ್ಪ ಸ್ವಾಗತಿಸಿದರು. ಖಲೀಲ್ ವಂದಿಸಿದರು.

ಪಕ್ಷದ ಹಿರಿಯ ಸಂಗಾತಿ ಸಿ.ಅಜ್ಜಪ್ಪನವರು ಧ್ವಜಾರೋಹಣ ನೇರವೇರಿಸಿದರು. ನಂತರ ಹುತಾತ್ಮ ಸಂಗಾತಿಗಳಿಗೆ ಶ್ರದ್ದಾಂಜಲಿ ಸಲ್ಲಿಸಲಾಯಿತು. ಪ್ರತಿನಿಧಿ ಅಧಿವೇಶನ ನಡೆದ ಸಭಾಂಗಣಕ್ಕೆ ಕಾಮ್ರೆಡ್ ಸೀತಾರಾಂ ಯೆಚೂರಿ ಸಭಾಂಗಣ, ಕಾಮ್ರೆಡ್ ಸುರೇಂದ್ರ ವೇದಿಕೆ ಮತ್ತು ಕಾಮ್ರೆಡ್ ಗಫಾರ್ ದ್ವಾರ ಎಂದು ನಾಮಕರಣ ಮಾಡಲಾಗಿತ್ತು. ಕಾಂ. ಶಿವಣ್ಣ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ಮಡಿದ ಎಲ್ಲಾ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯ್ತು.

ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಮೀನಾಕ್ಷಿ ಸುಂದರಂ ಅವರು ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿದರು. ಸಮ್ಮೇಳನದಲ್ಲಿ 67 ಪ್ರತಿನಿಧಿಗಳು ಮತ್ತು ಇಬ್ಬರು ವೀಕ್ಷಕರಾಗಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿಯವರು ಪಕ್ಷದ ಜಿಲ್ಲಾ ಸಮಿತಿಯ ಪರವಾಗಿ ಕರಡುವರದಿ ಮಂಡಿಸಿದರು. ನಂತರ ಗುಂಪುಚರ್ಚೆಗೆ ಅವಕಾಶ ನೀಡಲಾಯಿತು. ಸಂಗಾತಿಗಳು ತಾಲ್ಲೂಕುವಾರು ಗುಂಪುಚರ್ಚೆಯಲ್ಲಿ ಭಾಗವಹಿಸಿದ್ದರು. 19 ಪ್ರತಿನಿಧಿ ಸಂಗಾತಿಗಳು ಕರಡುವರದಿ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿನಿಧಿಗಳು ವರದಿಯನ್ನು ಉತ್ತಮಗೊಳಿಸಲು ನೀಡಿದ ಸಲಹೆಯನ್ನು ಸ್ವಾಗತಿಸಿದ ಕಾರ್ಯದರ್ಶಿಯವರು, ಚರ್ಚೆಗೆ ಸಂಬಂಧಿಸಿ ಉತ್ತರ ನೀಡಿದರು. ನಂತರ ಸರ್ವಾನುಮತದಿಂದ ಕಾರ್ಯದರ್ಶಿಗಳ ವರದಿಯನ್ನು ಸಮ್ಮೇಳನವು ಅಂಗೀಕರಿಸಿತು.

ರಾಜ್ಯ ಸಮ್ಮೇಳನಕ್ಕೆ ಜಿಲ್ಲೆಯ ಪ್ರತಿನಿಧಿಗಳು

ಬಿ.ಉಮೇಶ್, ಎನ್.ಕೆ.ಸುಬ್ರಮಣ್ಯ, ಲೋಕೇಶ್. ಎ.ಮಾಲ, ಗುಲ್ಜಾರ್ ಹಾಗೂ ಶಿವಣ್ಣ ಈ ಆರು ಸಂಗಾತಿಗಳನ್ನು ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಮಂಡಳಿ ಸದ್ಯಸರಾದ ಕಾಂ. ಮೀನಾಕ್ಷಿಸುದರಂ ಮತ್ತು ಕಾಂ. ಸೈಯದ್ ಮುಜೀಬ್ ರವರು ಮಾತನಾಡಿ, ಜಿಲ್ಲೆಯಲ್ಲಿ ಪಕ್ಷ ಮತ್ತು ಸಂಘಟನೆಯನ್ನು ವಿಸ್ತರಿಸಿ ಬಲಿಷ್ಠಗೂಳಿಸುವಂತೆ ಕರೆ ನೀಡಿದರು. ಪಕ್ಷವನ್ನು ಗ್ರಾಮೀಣ ಪ್ರದೇಶಕ್ಕೆ ವಿಸ್ತರಿಸಲು ಕೃಷಿಕೂಲಿಕಾರ ಸಂಘ, ರೈತಸಂಘ, ಮಹಿಳಾ ಸಂಘ, ವಿದ್ಯಾರ್ಥಿ–ಯುವಜನ ಸಂಘಟನೆಗಳನ್ನು ಬೆಳೆಸಬೇಕು. ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ಸಿಗುವವರಗೆ ಹೋರಾಟವನ್ನು ತೀವ್ರಗೊಳಿಸಬೇಕು ಮತ್ತು ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಕೃಷಿನೀತಿಗಳು, ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರುದ್ಧ ಹಾಗೂ ಜಿಲ್ಲೆಯಲ್ಲಿನ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ನಡೆಸಲು ಮುಂದಾಗಬೇಕು ಎಂದರು.



ಎನ್.ಕೆ.ಸುಬ್ರಮಣ್ಯ ಅವರು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಜಿಲ್ಲಾ ಕಾರ್ಯದರ್ಶಿ ಸೇರಿದಂತೆ ಸೈಯದ್ ಮುಜೀಬ್, ಬಿ.ಉಮೇಶ್, ಲೋಕೇಶ್ ಎ., ಮಾಲ.ಕೆ, ಎಸ್.ಆನಂದ್ ಮೂರ್ತಿ, ಇ.ಶಿವಣ್ಣ, ಅನೂಸಯ ಬಿ.ಎಸ್., ಅಬ್ದುಲ ಮುನಾಫ್, ಗುಲ್ಜಾರ್, ಷಣ್ಮಪ್ಪ, ಹೆಚ್.ಡಿ.ನಾಗೇಶ್, ದೂಡ್ಡನಂಜಪ್ಪ, ರಾಜಮ್ಮ ಮತ್ತು ಇಬ್ರಾಹಿಂ ಖಲೀಲ್ ಈ 15 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆಮಾಡಲಾಯಿತು.

ಸಂಗಾತಿಗಳಾದ ಸೈಯದ್ ಮುಜೀಬ್, ಬಿ. ಉಮೇಶ್, ಎನ್.ಕೆ.ಸುಬ್ರಮಣ್ಯ, ಲೋಕೇಶ್, ಮಾಲ ಈ ಐದು ಜನರ ಕಾರ್ಯದರ್ಶಿ ಮಂಡಳಿಯನ್ನು ರಚಿಸಲಾಗಿದೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿ....

ಪುಟ 7 ರಿಂದ

ಮಾಡಲಾಗದವರು ಹೆಚ್ಚು ಮಕ್ಕಳನ್ನು ಪಡೆದು ಜನಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸಲಹೆ ನೀಡುತ್ತಾರೆ. ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಭಾಷಣ ದಿಕ್ಕುತಪ್ಪಿಸುವುದಲ್ಲದೆ ಮತ್ತೇನೂ ಅಲ್ಲ.

ಮಾರ್ಕ್ಸ್‌ವಾದಿಗಳು ಏನು ಮಾಡಬೇಕು?

ಮುಜುಗರಕ್ಕೊಳಗಾದ ಸಾಮ್ರಾಜ್ಯಶಾಹಿಗಳು ಹೊರನೋಟಕ್ಕೆತಾವು ಘನವೆಂದು ಬಿಂಬಿಸಿಕೊಳ್ಳಲು ಅನೇಕ ಕಪಟತನಗಳನ್ನು ಮಾಡುತ್ತಾರೆ; ರಾಷ್ಟ್ರಗಳ ನಡುವೆ ಯುದ್ಧಗಳನ್ನು ಹುಟ್ಟುಹಾಕುವುದು; ಅವರು ಇತರ ದೇಶಗಳಲ್ಲಿ ಜಾತಿ, ಧರ್ಮ, ಜನಾಂಗ ಮತ್ತು ಭಾಷೆಯ ಆಧಾರದ ಮೇಲೆ ಪ್ರತ್ಯೇಕತಾವಾದವನ್ನು ಪ್ರಚೋದಿಸಲು ತಮ್ಮ ಅಧಿಕಾರವನ್ನು ಬಳಸುವುದನ್ನು ಮಾಡುತ್ತಾರೆ. ಸಾಮ್ರಾಜ್ಯಶಾಹಿಗಳಿಗೆ ಮಣೆ ಹಾಕುವ ಸರಕಾರಗಳು ಅದಕ್ಕೆ ತಕ್ಕಂತೆ ಆಡುತ್ತವೆ.

ಭಾರತದಲ್ಲಿ ಮೋದಿ ಸರಕಾರ ಜನರ ಸಮಸ್ಯೆಗಳನ್ನು ಮುಚ್ಚಿ ಹಾಕಿ, ಜನರನ್ನು ವಂಚಿಸುವ ಕೆಲಸ ಮಾಡುತ್ತಿದೆ. ಆಡಳಿತಾತ್ಮಕವಾಗಿ ಮತ್ತು ನ್ಯಾಯಾಂಗದ ಮೂಲಕವೂ ಬಲಪಂಥೀಯ ಮನೋಭಾವದ ಜನರನ್ನು ಅವರು ಬಯಸಿದ್ದನ್ನು ಸಾಧಿಸಲು ಬಳಸಲಾಗುತ್ತದೆ. ರಾಮ ಮಂದಿರದ ವಿಚಾರದಲ್ಲಿಯೂ ಅದನ್ನು ಸಾಧಿಸಲಾಗಿದೆ. ಅದರ ಮುಂದುವರಿಕೆಯನ್ನು ನಾವು ಈಗ ಅಜ್ಮೀರ್ ಮತ್ತು ಸಂಭಾಲ್‌ನಲ್ಲಿ ನೋಡುತ್ತಿದ್ದೇವೆ.

ಭಾರತದಲ್ಲಿ ಅಲ್ಪಸಂಖ್ಯಾತರ ಮೇಲೆ ಆರೆಸ್ಸೆಸ್ ಸಂಘಪರಿವಾರದ ದಾಳಿಗಳು ಸುದೀರ್ಘ ಇತಿಹಾಸವನ್ನು ಹೊಂದಿವೆ. ಅಲ್ಪಸಂಖ್ಯಾತರ ವಿರುದ್ಧದ ದ್ವೇಷದ ಪ್ರಚಾರ ಕೀಳು ಮಟ್ಟದಲ್ಲಿಯೂ ಇದೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ಇತರ ಸಚಿವರು ಮತ್ತು ಬಿಜೆಪಿ ನಾಯಕರು ಇದಕ್ಕೆ ಹೊರತಾಗಿಲ್ಲ.

ಭಾರತದಲ್ಲಿ ಬದಲಾವಣೆ ತರಬಹುದು

ಬಾಬರಿ ಮಸೀದಿ ಧ್ವಂಸ, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ವಿಧಿ 370 ರದ್ದತಿ, ಪೌರತ್ವ ತಿದ್ದುಪಡಿ ಕಾಯ್ದೆ, ಏಕರೂಪ ನಾಗರಿಕ ಸಂಹಿತೆ ಇಂತಹ ಉಪಕ್ರಮಗಳು ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಗಳು ನಿಂತಿಲ್ಲ. ಮಣಿಪುರದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ಮಾತ್ರವಲ್ಲದೆ ಕ್ರಿಶ್ಚಿಯನ್ನರ ವಿರುದ್ಧವೂ ಸಂಘಪರಿವಾರದ ಹಿಂಸಾಚಾರವನ್ನು ನಾವು ನೋಡಿದ್ದೇವೆ. ಜಗತ್ತಿನಾದ್ಯಂತ ಸಂಚರಿಸುವ ಪ್ರಧಾನಿಗೆ ಮಣಿಪುರ ಅನ್ಯಗ್ರಹದಂತೆ ಕಾಣುತ್ತಿದೆ. ಅಲ್ಲಿ ಘರ್ಷಣೆಗಳು ಮತ್ತು ಜೀವಹಾನಿಗಳು ಇನ್ನೂ ಮುಗಿದಿಲ್ಲ. ಈ ಸತ್ಯಗಳನ್ನು ಎತ್ತಿ ತೋರಿಸಬೇಕು ಮತ್ತು ಹಿಂದೂಗಳ ಬಗ್ಗೆ ಸಂಘಪರಿವಾರ ಸುರಿಸುತ್ತಿರುವ ಹುಸಿ ಕಣ್ಣೀರು ಬಯಲಾಗಬೇಕು. ಅದಕ್ಕೆ ಸಮಾಜ–ರಾಜಕೀಯ–ಆರ್ಥಿಕತೆ ಈ ಮೂರು ಕೊಂಡಿಗಳನ್ನು ಜೋಡಿಸಬೇಕಾಗಿದೆ. ಇವು ಪ್ರತ್ಯೇಕ ಪದಗಳಾಗಿದ್ದರೂ, ನಾವು ಇವುಗಳ ಸಂಪರ್ಕವನ್ನು ಅರ್ಥಮಾಡಿಕೊಂಡರೆ, ಎಡಪಂಥೀಯರು, ಮಾರ್ಕ್ಸ್‌ವಾದಿಗಳು ಸಂವಹನದ ಮೂಲಕ ಜನರಿಗೆ ನೀವು ಅದನ್ನು ಸ್ಪಷ್ಟಪಡಿಸಬಹುದು. ಈ ಕೆಲಸವನ್ನು ನಿರಂತರವಾಗಿ ಮಾಡುವ ಮೂಲಕ ಮತ್ತು ಯುವಕರು, ವಿದ್ಯಾರ್ಥಿಗಳು, ಮಹಿಳೆಯರು, ಕಾರ್ಮಿಕರು, ರೈತರು ಹೀಗೆ ಎಲ್ಲಾ ವರ್ಗಗಳಲ್ಲಿ ಆಂದೋಲನವನ್ನು ಉಂಟುಮಾಡುವ ಮೂಲಕ ನಾವು ಭಾರತದಲ್ಲಿ ಬದಲಾವಣೆಯನ್ನು ತರಬಹುದು.

ಡಿ.ಕೆ. ರಂಗರಾಜನ್,
ಹಿರಿಯ ನಾಯಕ, ಸಿಪಿಐ(ಎಂ)
ಕೃಪೆ: ತೀಕದಿರ್ (ತಮಿಳಿನಿಂದ ಕನ್ನಡಕ್ಕೆ: ಸಿಚಿ)

ಮೃತರ ಮನೆಗೆ ಸಿಪಿಐ(ಎಂ) ನಿಯೋಗ ಭೇಟಿ

ಆಸ್ಪತ್ರೆಯಲ್ಲಿ ಸಾವೀಗೀಡಾದ ಬಾಣಂತಿ ದಲಿತ ಮಹಿಳೆ ರೋಜಮ್ಮ (ಗಂಡ ರಾಜಾ) ಅವರ ಮನೆಗೆ ಸಿಪಿಐ(ಎಂ) ನಿಯೋಗ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದೆ. ರೋಜಮ್ಮನ ಕುಟುಂಬವು ಭೂರಹಿತ ಕುಟುಂಬವಾಗಿದ್ದು, ಕಡುಬಡತನದಿಂದ ಬಳಲುತ್ತಿದೆ.

ಕೂಡಲೇ ಕುಟುಂಬ ಜೀವನ ಸಾಗಿಸಲು ಅಕ್ಕಿ, ಬೇಳೆ, ಎಣ್ಣೆ ಇತರೆ ಆಹಾರ ಪದಾರ್ಥಗಳನ್ನು ಸಮಾಜ ಕಲ್ಯಾಣ ಇಲಾಖೆಯು ನೀಡಬೇಕು. ಸರ್ಕಾರವು ಈ ಕುಟುಂಬಕ್ಕೆ ಮನೆ ನಿರ್ಮಾಣ ಮಾಡಿಕೊಡಬೇಕು ಮತ್ತು ರೋಜಮ್ಮ ಅವರ ಗಂಡ ರಾಜಾ ಅವರಿಗೆ ಸರ್ಕಾರಿ ಕೆಲಸ ನೀಡಬೇಕು, ಇವರ ಮಗು ಬೆಳೆದು ದೊಡ್ಡವನಾಗುವವರೆಗೆ ಮಗುವಿನ ವಿದ್ಯಾಭ್ಯಾಸದ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಸಿಪಿಐ(ಎಂ) ಒತ್ತಾಯಿಸಿದೆ.

ರೋಜಮ್ಮ ಹೆರಿಗೆ ಸಂದರ್ಭದಲ್ಲಿ ಡಾ. ಬಸವರೆಡ್ಡಿ ಹಾಗೂ ವಿಮ್ಸ್ ನಿರ್ದೇಶಕ ಡಾ.ಗಂಗಾಧರಗೌಡ ಇತರೆ ಡಾಕ್ಟರುಗಳ ನಿರ್ಲಕ್ಷ್ಯ ಮತ್ತು ಬೇಜಾವಾಬ್ದಾರಿಯಿಂದ ರೋಜಮ್ಮಳ ಸಾವಾಗಿರುವುದು ಕಂಡು ಬರುತ್ತದೆ. ಆದ ಕಾರಣ ಇವರುಗಳ ಮೇಲೆ 304 ೦ ಪ್ರಕರಣ ದಾಖಲಿಸಿ ಬಂಧಿಸಬೇಕು. ಪ್ರಕರಣವನ್ನು ಸಮಗ್ರ ತನಿಖೆಗೊಳಪಡಿಸಬೇಕು ಎಂದು ಸಿಪಿಐ(ಎಂ) ಕುರುಗೋಡು ತಾಲೂಕು ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ನಿಯೋಗದಲ್ಲಿ ಕುರುಗೋಡು ತಾಲೂಕು ಕಾರ್ಯದರ್ಶಿ ಹಾಗೂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಎಸ್. ಶಿವಶಂಕರ್, ತಾಲೂಕು ಸಮಿತಿಯ ಸದಸ್ಯರಾದ ಗಾಳಿ ಬಸವರಾಜ, ಎನ್. ಸೋಮಪ್ಪ ಹಾಗೂ ಟಿ. ಅಮೀನ್ ಸಾಬ್, ಎ.ಮಂಜುನಾಥ, ಕೆ.ಜಯರಾಮ್, ಎಚ್.ವೀರೇಶ, ದೊಡ್ಡಬಸಮ್ಮ, ಜೆಡೆಮ್ಮ ಇದ್ದರು.

–ಜೆ. ಸತ್ಯಬಾಬು



ಸಿಪಿಐ(ಎಂ) ನಿಯೋಗ

ಕಾರ್ಪೊರೇಟ್ ತೆರಿಗೆ ಕಡಿತ–ರಿಯಾಯ್ತಿಗಳಿಂದ ದೇಶದ ಖಜಾನೆಗೆ 8 ಲಕ್ಷ ಕೋಟಿ ರೂ. ನಷ್ಟ!

ಕಾರ್ಪೊರೇಟ್ ಸುಸ್ತಿ ಸಾಲಗಳಲ್ಲಿ ಬ್ಯಾಂಕುಗಳಿಗೆ 'ಹೇರ್ ಕಟ್'–'ಸಾಲಮನ್ನಾ ಅಲ್ಲ'!

ಭಾರತದ ದೊಡ್ಡ ಕಾರ್ಪೊರೇಟ್‌ಗಳಿಗೆ 2019ರಲ್ಲಿ ತೆರಿಗೆ ದರಗಳಲ್ಲಿ ಗಮನಾರ್ಹ ಕಡಿತ ಮತ್ತು ಇತರ ರಿಯಾಯ್ತಿಗಳನ್ನು ಪ್ರಾರಂಭಿಸಲಾಯಿತು. 400 ಕೋಟಿ ರೂ.ವರೆಗಿನ ವಾರ್ಷಿಕ ವಹಿವಾಟು ಹೊಂದಿರುವ ಕಂಪನಿಗಳ ತೆರಿಗೆ ದರ ಶೇ. 25 ಮತ್ತು ಅದಕ್ಕಿಂತ ಹೆಚ್ಚಿನ ವಹಿವಾಟಿನ ಕಂಪನಿಗಳಿಗೆ ಶೇ. 30 ಇದ್ದದ್ದು, 2019ರಿಂದ ಶೇ. 21.2ಕ್ಕೆ ಇಳಿಯಿತು. ಹೊಸ ತಯಾರಿಕಾ ಕಂಪನಿಗಳಿಗೆ ಕೆಲವು ಸಂದರ್ಭಗಳಲ್ಲಿ ಇನ್ನೂ ಹೆಚ್ಚಿನ ತೆರಿಗೆ ಕಡಿತ ನೀಡಲಾಯಿತು. ಇದರಿಂದಾಗಿ ಮತ್ತು ಅಂದಿನಿಂದ ಕೊಡುತ್ತಿರುವ ಇತರ ತೆರಿಗೆ ರಿಯಾಯ್ತಿಗಳಿಂದಾಗಿ ಕಳೆದ 5 ವರ್ಷಗಳಲ್ಲಿ ದೊಡ್ಡ ಕಾರ್ಪೊರೇಟ್‌ಗಳಿಗೆ 8 ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ಪ್ರಯೋಜನ ದಕ್ಕಿದೆ ಎಂದು 'ದಿ ಹಿಂದೂ' (ನವಂಬರ್ 28) ದೈನಿಕ ಲೆಕ್ಕ ಹಾಕಿದೆ. ಅಂದರೆ ದೇಶದ ಖಜಾನೆಗೆ ಬರಬೇಕಾಗಿದ್ದ ಆದಾಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಖೋತಾ ಆಗಿದೆ,

ಕೇವಲ ದರ ಕಡಿತಗಳಿಂದಾಗಿಯೇ ದೊಡ್ಡ ಕಂಪನಿಗಳಿಗೆ 3.14 ಲಕ್ಷ ಕೋಟಿ ರೂ.ಗಳ ತೆರಿಗೆ ಉಳಿತಾಯದಿಂದ ಲಾಭವಾಗಿದೆ ಎಂದು 2019ರ ವರೆಗಿನ ತೆರಿಗೆ ವಸೂಲಿ ಮತ್ತು ಅದರ ಆಧಾರದಲ್ಲಿ ಮುಂದಿನ 5 ವರ್ಷಗಳಲ್ಲಿ ಬರಬಹುದಾಗಿದ್ದ ತೆರಿಗೆ ಆದಾಯವನ್ನು ಮತ್ತು ವಾಸ್ತವಿಕ ತೆರಿಗೆ ವಸೂಲಿಯನ್ನು ಹೋಲಿಸಿ ಈ ಲೆಕ್ಕವನ್ನು ಹಾಕಲಾಗಿದೆ.

ಇದಲ್ಲದೆ, ಕಾರ್ಪೊರೇಟ್‌ಗಳು ಪಡೆದ ಇತರ ತೆರಿಗೆ ರಿಯಾಯ್ತಿಗಳನ್ನು ಪರಿಗಣಿಸಿದರೆ, 2012–13ರಿಂದ 2021–22ರವರೆಗೆ ಬಜೆಟ್ ದಸ್ತಾವೇಜುಗಳ ಪ್ರಕಾರ, 8.22 ಲಕ್ಷ ಕೋಟಿ ರೂ.ಗಳಷ್ಟು ಸರಕಾರದ ತೆರಿಗೆ ಆದಾಯಕ್ಕೆ ಕತ್ತರಿ ಬಿದ್ದಿದೆ.

2019ರ ಹಣಕಾಸು ವರ್ಷದ ಮೊದಲು ಕಾರ್ಪೊರೇಟ್‌ಗಳ ಲಾಭದಲ್ಲಿ ಶೇ. 10.4ರಷ್ಟು ವಾರ್ಷಿಕ ಹೆಚ್ಚಳವಾಗುತ್ತಿದ್ದರೆ, ಆನಂತರ ಅದು ಶೇ. 32.5ರ ದರದಲ್ಲಿ ಏರಿದೆ, ಆದರೆ ಇದೇ ಅವಧಿಯಲ್ಲಿ ಅವು ಕೊಟ್ಟ ತೆರಿಗೆ ಮೊತ್ತದಲ್ಲಿ ಆಗಿರುವ ಹೆಚ್ಚಳ ಶೇ. 18.6 ಮಾತ್ರ.

ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವ ಹೆಸರಿನಲ್ಲಿ ಮತ್ತು ಹೆಚ್ಚಿನ ಹೂಡಿಕೆಗೆ ಮತ್ತು ಉದ್ಯೋಗಾವಕಾಶ ನಿರ್ಮಾಣಕ್ಕೆ ಹಾಗೂ "ಕೆಲವು ದೇಶೀ ಕಂಪನಿಗಳಿಗೆ ಒಂದು ಜಾಗತಿಕವಾಗಿ ಸ್ಪರ್ಧಾತ್ಮಕವಾದ ವ್ಯವಹಾರ ಪರಿಸರವನ್ನು ಸ್ಥಾಪಿಸಲು" 'ಉತ್ತೇಜನೆ'ಯ ಹೆಸರಿನಲ್ಲಿ ಕೊಡಲಾಗುತ್ತಿರುವ ಇಂತಹ ಕಡಿತಗಳನ್ನು ಬಜೆಟಿನಲ್ಲಿ 'ಬಿಟ್ಟು ಕೊಟ್ಟ ಆದಾಯ' ಎಂದು ನಮೂದಿಸಲಾಗುತ್ತಿದೆ.

ಇಂತಹ ತೆರಿಗೆ ಕಡಿತಗಳು, ರಿಯಾಯ್ತಿಗಳಿಂದಾಗಿ 'ವ್ಯವಹಾರ ಪರಿಸರ ಸ್ಪರ್ಧಾತ್ಮಕ'ಗೊಂಡಿದೆ ಎಂಬುದಕ್ಕೆ ಸಾಕ್ಷಿ ಬಹಳ ಕಡಿಮೆ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಬಹುಪಾಲು ಜನಗಳ ಕೊಳ್ಳುವ ಶಕ್ತಿ ಹೆಚ್ಚುವ ಬದಲು, ಇಳಿಯುತ್ತಿರುವ ಸನ್ನಿವೇಶದಲ್ಲಿ ಈ ಉತ್ತೇಜನೆಗಳು ಆರ್ಥಿಕ ಬೆಳವಣಿಗೆಯನ್ನು ತರುವುದು ಕೂಡಾ ಸಾಧ್ಯವಿಲ್ಲ ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ತೋರಿಸಿಕೊಟ್ಟಿದ್ದಾರೆ ('ಜನಶಕ್ತಿ'ಯ ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವ ಅವರ ಲೇಖನವನ್ನು ನೋಡಿ– ಈ 'ಉತ್ತೇಜನ'ಗಳಲ್ಲಿ ಬಹುಪಾಲು ಏಕಸ್ವಾಮ್ಯ ಕಾರ್ಪೊರೇಟ್‌ಗಳು ಬಾಚಿಕೊಂಡಿವೆ ಎಂಬುದನ್ನೂ ಗಮನಿಸಿ).

2023–24ರಲ್ಲಿ ಮತ್ತೆ ರೂ. 1.7 ಲಕ್ಷ ಕೋಟಿ ಮೊತ್ತದ ಸುಸ್ತಿ ಸಾಲಗಳ ರೈಟ್–ಆಫ್

2023–24ರಲ್ಲಿ ಬ್ಯಾಂಕುಗಳು ಒಟ್ಟು 1.7 ಲಕ್ಷ ಕೋಟಿ ರೂ.ಗಳಷ್ಟು ಸುಸ್ತಿ ಸಾಲಗಳನ್ನು ರೈಟ್–ಆಫ್ ಮಾಡಿವೆ, ಅಂದರೆ ಸಂಬಂಧಪಟ್ಟ ಬ್ಯಾಂಕುಗಳ ಲೆಕ್ಕಪತ್ರಗಳಿಂದ ಹೊರಗಿಟ್ಟಿವೆ ಎಂದು ನವಂಬರ್ 27ರಂದು ಎಲ್ಲ ಪತ್ರಿಕೆಗಳಲ್ಲಿ ವರದಿಯಾಗಿತ್ತು.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಈ ಮಾಹಿತಿಯನ್ನು ತಿಳಿಸುತ್ತ, ಇದು ಕಳೆದ ಐದು ವರ್ಷಗಳಲ್ಲಿ ಅತ್ಯಂತ ಕಡಿಮೆ ರೈಟ್ ಆಫ್ ಎಂದಿದ್ದಾರೆ ಎಂದೂ ವರದಿಯಾಗಿದೆ.

2019–20ರಲ್ಲಿ ಇದು ಗರಿಷ್ಟ ಮಟ್ಟವನ್ನು, ಅಂದರೆ 2.34 ಲಕ್ಷ ಕೋಟಿ ರೂ. ತಲುಪಿತ್ತು. ಆ ವರ್ಷದಿಂದ ಪ್ರತಿವರ್ಷ ರೈಟ್–ಆಫ್ ಮಾಡಿರುವ ಸುಸ್ತಿ ಸಾಲಗಳ ಮೊತ್ತ ಇಳಿಮುಖವಾಗಿವೆ, ಆದರೆ ಈಗಲೂ ಲಕ್ಷ ಕೋಟಿ ರೂ.ಗಳಲ್ಲೇ ಇದೆ ಎಂಬುದನ್ನೂ, ಮೇಲೆ ಹೇಳಿದಂತೆ ಐದು ವರ್ಷಗಳಲ್ಲಿ 8ಲಕ್ಷ ಕೋಟಿ ರೂ.ಗಿಂತಲೂ ಹೆಚ್ಚಿನ ತೆರಿಗೆ ದರ ಕಡಿತ ಮತ್ತು ಇನ್ನಿತರ ರಿಯಾಯ್ತಿಗಳ ನಂತರವೂ ಇದು ಮುಂದುವರೆಯುತ್ತಲೇ ಇವೆ ಎಂಬುದನ್ನು ಗಮನಿಸಬೇಕಾಗಿದೆ ಎಂದು ಪರಿಣಿತರು ಟಿಪ್ಪಣಿ ಮಾಡಿದ್ದಾರೆ.

ಸಾಲದ ರೈಟ್–ಆಫ್ ಎಂದರೆ ಸಾಲದಾತ ಸಾಲವನ್ನು ನಷ್ಟವೆಂದು ಪರಿಗಣಿಸುತ್ತಾರೆಯೇ ಹೊರತು, ಅದು ವಾಪಾಸು ಬರುವಂತದ್ದಲ್ಲ, ಸಾಲಮನ್ನಾ ಎಂದು ಅರ್ಥವಲ್ಲ ಎಂದು ಇದಕ್ಕೆ ಸಮರ್ಥನೆಯಲ್ಲದಿದ್ದರೂ ಸಮಜಾಯಿಷಿ ಕೊಡಲಾಗುತ್ತದೆ. ಅದೇ ಪ್ರಕಾರ ಸಚಿವ ಚೌಧರಿಯವರು ಕೂಡ ಈ ರೈಟ್–ಆಫ್‌ಗಳು ಸಾಲಗಾರರನ್ನು ಅವರ ಹೊಣೆಗಾರಿಕೆಗಳಿಂದ ಮುಕ್ತಗೊಳಿಸುವುದಿಲ್ಲ ಎಂದು ಪುನರುಚ್ಚರಿಸಿದ್ದಾರೆ.

ಬ್ಯಾಂಕುಗಳಿಗೆ 81.3% 'ಹೇರ್ ಕಟ್'!

ಆದರೆ ಇತ್ತೀಚೆಗಷ್ಟೇ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ (ಎಐಬಿಇಎ) ಬಹಿರಂಗಪಡಿಸಿದ ಅಂಕಿಅಂಶಗಳು ಬೇರೆ ಕತೆಯನ್ನೇ ಹೇಳುತ್ತವೆ. ಸುಸ್ತಿದಾರರಾದ 10 ಕಂಪನಿಗಳನ್ನು ಅದಾನಿ ಸಮೂಹ ಖರೀದಿಸಿತು. ಈ ವ್ಯವಹಾರದ ಭಾಗವಾಗಿ ಒಟ್ಟು 61,832 ಕೋಟಿ ರೂ.ಗಳಷ್ಟಿದ್ದ ಈ ಕಂಪನಿಗಳ ಸುಸ್ತಿ ಸಾಲಗಳನ್ನು ಕೇವಲ 15,977 ಕೋಟಿ ರೂ.ಗೆ ಇತ್ಯರ್ಥಗೊಳಿಸಲಾಯಿತು. ಅಂದರೆ ಬ್ಯಾಂಕುಗಳು ಈ 10 ಕಂಪನಿಗಳ ಸುಮಾರು 46,000 ಕೋಟಿ ರೂ.ಗಳನ್ನು, ಅಂದರೆ ಶೇ. 74ರಷ್ಟು ಸುಸ್ತಿ ಸಾಲಗಳನ್ನು ಮನ್ನಾ ಮಾಡಿದಂತಾಗಿದೆ. ಇದನ್ನು ಬ್ಯಾಂಕ್ ಲೆಕ್ಕಾಚಾರಗಳ ಭಾಷೆಯಲ್ಲಿ 'ಹೇರ್ ಕಟ್' (ಚೌರ) ಎನ್ನುತ್ತಾರೆ.

ಕಳೆದ ಐದು ವರ್ಷಗಳಲ್ಲಿ, ಹಲವಾರು ವಸೂಲಾತಿ ಕ್ರಮಗಳನ್ನು ಬಳಸಿದ್ದರೂ ಸಹ, ಶೇ. 81.30ರಷ್ಟು ಸಾಲವನ್ನು ವಸೂಲಿ ಮಾಡಲು ಬ್ಯಾಂಕ್‌ಗಳು ವಿಫಲವಾಗಿವೆ ಎಂದು ಈ ವರ್ಷದ ಆಗಸ್ಟ್‌ನಲ್ಲಿ ಒಂದು ಆರ್‌ಟಿಐ ಅರ್ಜಿಯು ಬಹಿರಂಗಪಡಿಸಿದೆಯಂತೆ.

ತೆರಿಗೆ ದರ ಕಡಿತ, ವಿನಾಯ್ತಿಗಳಲ್ಲದೆ, ಇಂತಹ 'ಹೇರ್ ಕಟ್'ಗಳ 'ಉತ್ತೇಜನ'ಗಳನ್ನೂ ದೊಡ್ಡ ಕಾರ್ಪೊರೇಟ್‌ಗಳು ಧಾರಾಳವಾಗಿ ಪಡೆಯುತ್ತಿವೆ.

ಆದರೂ, ಜಿಡಿಪಿ ದರದಲ್ಲೂ ಮತ್ತೆ ಭಾರೀ ಇಳಿಕೆ ವರದಿಯಾಗಿದೆ. ಜಿಡಿಪಿ ಬೆಳವಣಿಗೆ ದರವು 2024ರ ಜುಲೈ–ಸೆಪ್ಟಂಬರ್ ತ್ರೈಮಾಸಿಕದಲ್ಲಿ ಏಳು ತ್ರೈಮಾಸಿಕಗಳ ಕನಿಷ್ಟ ಮಟ್ಟಕ್ಕೆ, ಶೇ. 5.4ಕ್ಕೆ ಕುಸಿದಿದೆ ಎಂದು ವರದಿಯಾಗಿದೆ. ಈ ಕುಸಿತ ಮತ್ತು ಉತ್ಪಾದನೆಯಲ್ಲಿನ ನಿಧಾನಗತಿಯ ಬೆಳವಣಿಗೆಗೆ ಮುಖ್ಯ ಕಾರಣ ತಯಾರಕಾ ವಲಯಲ್ಲಿನ ಅತಿನಿಧಾನ ಬೆಳವಣಿಗೆ ಎಂದೂ ಹೇಳಲಾಗಿದೆ.

ಅಂದರೆ ಸರಕಾರದ ಹಲವು ಲಕ್ಷ ಕೋಟಿ ರೂ.ಗಳ 'ಉತ್ತೇಜನೆ'ಯ ನಂತರವೂ ಖಾಸಗಿ ವಲಯದಲ್ಲಿ ನಿರೀಕ್ಷಿತ ಉತ್ಪಾದಕ ಹೂಡಿಕೆಗಳು ಮತ್ತು ಆ ಮೂಲಕ ಉದ್ಯೋಗಾವಕಾಶಗಳ ನಿರ್ಮಾಣ ನಡೆಯುತ್ತಿಲ್ಲ!



ವ್ಯಂಗ್ಯಚಿತ್ರ ಕೃಪೆ: ರಾಕೇಶ್ ರಂಜನ್, ಮೊಲಿಟಿಕ್ಸ್.ಇನ್

ಉದ್ಯೋಗಗಳಲ್ಲಿ ಮೀಸಲಾತಿಯನ್ನು ವಂಚಿಸಲು ದತ್ತಾಂಶಗಳನ್ನು ಮುಚ್ಚಿಡುವ ಪ್ರಯತ್ನ!

ಒಕ್ಕೂಟ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ)ಯು ಹಿಂದಿನ ತಿಂಗಳು ಬಿಡುಗಡೆ ಮಾಡಿದ 2023–24ರ ವಾರ್ಷಿಕ ವರದಿಯಲ್ಲಿ ಒಕ್ಕೂಟ ಸರ್ಕಾರದಲ್ಲಿನ ಉದ್ಯೋಗಗಳ ಮತ್ತು ಹುದ್ದೆಗಳಲ್ಲಿ ಮೀಸಲಾತಿಯ ದತ್ತಾಂಶವನ್ನು ತೆಗೆದುಹಾಕಲಾಗಿದೆ ಎಂದು ವರದಿಯಾಗಿದೆ.

ಡಿಒಪಿಟಿ ಯ ವಾರ್ಷಿಕ ವರದಿಗಳಲ್ಲಿ ಎಲ್ಲಾ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿರುವ ಎಬಿಸಿ ಮತ್ತು ಡಿ ವರ್ಗಗಳಲ್ಲಿರುವ ಎಲ್ಲಾ ಒಟ್ಟು ಹುದ್ದೆಗಳು ಹಾಗೂ ಪರಿಶಿಷ್ಟ ಜಾತಿ (ಎಸ್.ಸಿ.) ಪರಿಶಿಷ್ಟ ಬುಡಕಟ್ಟು (ಎಸ್.ಟಿ.) ಹಾಗೂ ಇತರ ಹಿಂದುಳಿದ ವರ್ಗ(ಒಬಿಸಿ)ಗಳ ನೌಕರರ ಸಂಖ್ಯೆಗಳನ್ನು ಮೀಸಲಾತಿ ಕುರಿತ ಅಧ್ಯಾಯದ ಭಾಗವಾಗಿ ಪ್ರಕಟಿಸುತ್ತಿತ್ತು. ಈ ಬಾರಿ ಆ ಕೋಷ್ಟಕಗಳನ್ನು ಇಲಾಖೆಯು ಏಕೆ ಪ್ರಕಟಿಸಲಿಲ್ಲ ಎಂದು 'ದಿ ಹಿಂದು' ಪತ್ರಿಕೆ ಕೇಳಿದ ಪ್ರಶ್ನೆಗೆ ಡಿಒಪಿಟಿ ಇಲ್ಲಿಯವರೆಗೂ ಸ್ಪಂದಿಸಿಲ್ಲ ಎಂದು ಅದು ವರದಿಮಾಡಿದೆ. (ದಿ ಹಿಂದು, ಡಿ.3)

ಈ ವಿಷಯ ಡಿಸೆಂಬರ್ 1ರಂದು ನವದೆಹಲಿಯಲ್ಲಿ ನಡೆದ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ (ಎಎಆರ್‌ಎಂ) ಸಂಘಟಿಸಿದ್ದ ರಾಷ್ಟ್ರೀಯ ಸಮಾವೇಶದಲ್ಲೂ ಚರ್ಚೆಗೆ ಬಂತು. ಸಮಾವೇಶದಲ್ಲಿ ಆದಿವಾಸಿ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ (ಸಿಎಆರ್‌ಡಿ) ಸಿದ್ಧಪಡಿಸಿದ "ಉದ್ಯೋಗಗಳಿಂದ ಆದಿವಾಸಿಗಳ ಹೊರಗು" ಎಂಬ ವರದಿಯನ್ನು ಮಂಡಿಸುತ್ತ ಜೆಎನ್‌ಯುನ ಪ್ರೊ.ವಿಕಾಸ್ ರಾವಲ್, ಡಿಒಪಿಟಿಯ ಭಾಗಶಃ ದತ್ತಾಂಶಗಳ ಪ್ರಕಾರವೂ ಒಕ್ಕೂಟ ಸರಕಾರದಲ್ಲಿ ಪರಿಶಿಷ್ಟ ಬುಡಕಟ್ಟು(ಎಸ್‌ಟಿ)ಗಳ ಅನುಪಾತ 2014ರಿಂದ 2022ರ ನಡುವೆ ಶೇ.8.55ರಿಂದ ಶೇ.7.33ಕ್ಕೆ ಇಳಿದಿದೆ ಎಂದರು.

ಸರಕಾರ 2018ರಿಂದ ತನ್ನ ವರದಿಗಳಲ್ಲಿ ಮೀಸಲಾತಿ ಕುರಿತ ಪೂರ್ಣ ಚಿತ್ರವನ್ನು ನೀಡದೆ, ಮೀಸಲು ಹುದ್ದೆಗಳ ಬಗ್ಗೆ ದತ್ತಾಂಶಗಳನ್ನು ಮುಚ್ಚಿಟ್ಟಿದೆ. ಉದಾ: ಒಕ್ಕೂಟ ಸರಕಾರದ 10 ಲಕ್ಷಕ್ಕೂ ಹೆಚ್ಚು ಖಾಲಿ ಸ್ಥಾನಗಳಲ್ಲಿ ಮೀಸಲು ಸ್ಥಾನಗಳ ಸಂಖ್ಯೆ ಎಷ್ಟೆಂದು ತಿಳಿಸಿಲ್ಲ. ಕೇವಲ 9 ಸಚಿವಾಲಯಗಳ ದತ್ತಾಂಶಗಳಿಂದಲೇ 12,167 ಎಸ್‌ಟಿ ಮೀಸಲು ಹುದ್ದೆಗಳು ಖಾಲಿಯಿವೆ ಎಂದು ಕಂಡು ಬರುತ್ತದೆ. ಒಟ್ಟು 30 ಲಕ್ಷಕ್ಕೂ ಹೆಚ್ಚು ಕೇಂದ್ರ ಸರಕಾರಿ ನೌಕರರಲ್ಲಿ 19 ಲಕ್ಷ ನೌಕರರ ಬಗ್ಗೆ ಮಾತ್ರ ದತ್ತಾಂಶಗಳನ್ನು ಕೊಡಲಾಗಿದೆ. ಉಳಿದವರ ಬಗ್ಗೆ ಯಾವುದೇ ವಿವರಣೆ ಇಲ್ಲ. ಅಲ್ಲದೆ ಸಾಮಾಜಿಕ ನ್ಯಾಯ ಕುರಿತ ಸಂಸದೀಯ ಸಮಿತಿ ದೊಡ್ಡ ಸಂಖ್ಯೆಯಲ್ಲಿ ಕೆಲಸಗಳನ್ನು ಹೊರಗುತ್ತಿಗೆ ಅಥವ ಕಾಂಟ್ರಾಕ್ಟ್‌ಗೆ ಕೊಡಲಾಗುತ್ತಿದೆ ಎಂದು ಗಮನಿಸಿದೆ. ಇಲ್ಲಿ ಮೀಸಲಾತಿ ಇರುವುದಿಲ್ಲ. ವಾಸ್ತವವಾಗಿ ಇಂತಹ ಉದ್ಯೋಗಗಳಿಗೆ ಭಾರತದ ಕ್ರೋಢೀಕೃತ ನಿಧಿ(ಸಿಎಫ್‌ಐ)ಯಿಂದ ಹಣ ಒದಗಿಸುವುದರಿಂದ ಇದರಲ್ಲಿ ಮೀಸಲಾತಿ ಇರಬೇಕಾಗುತ್ತದೆ ಎಂದು ವರದಿ ಹೇಳಿದೆ.

ಅವರು ಮುಂದಿಟ್ಟ ವರದಿಯ ಇತರ ಕೆಲವು ಅಂಶಗಳು ಹೀಗಿವೆ:

* ಖಾಸಗೀಕರಣ ಮತ್ತು ಗುತ್ತಿಗೆಕರಣದಿಂದ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಉದ್ಯೋಗಾವಕಾಶ 2014ರಿಂದ ಶೇ. 35ರಷ್ಟು ಕಡಿತಗೊಂಡಿದೆ. ಇದರಿಂದಾಗಿ ಈ ಅವಧಿಯಲ್ಲಿ 25,169ಕ್ಕಿಂತಲೂ ಹೆಚ್ಚು ಎಸ್‌ಟಿ ಮೀಸಲು ಹುದ್ದೆಗಳು ಕಡಿತಗೊಂಡಿವೆ. ಒಟ್ಟಾರೆ ಎಸ್‌ಟಿ ಉದ್ಯೋಗ ನಷ್ಟಗಳು ಶೇ. 23 ಆಗಿದ್ದರೆ, ಗ್ರೂಪ್ ಸಿ ಮತ್ತು ಡಿಯಲ್ಲಿ ಇದು ಶೇ. 33.
* ಎಸ್‌ಟಿ ಶಿಕ್ಷಕರ ಸಂಖ್ಯೆ 2018 ರಿಂದ 2022ರ ನಡುವೆ 7,61,569ರಿಂದ 7,26,728ಕ್ಕೆ, ಅಂದರೆ 35,000ದಷ್ಟು ಇಳಿದಿದೆ.
* ಸಾರ್ವಜನಕ ವಲಯದ ವಿಮೆ, ಬ್ಯಾಂಕುಗಳು ಮತ್ತು ಆರೋಗ್ಯ ಸಂಸ್ಥೆಗಳಲ್ಲಿ ಮೀಸಲಾತಿಯ ಕ್ರೋಡೀಕೃತ ದತ್ತಾಂಶಗಳಿಲ್ಲ.
* ರಾಜ್ಯ ಸರಕಾರಿ ಉದ್ಯೋಗಗಳಲ್ಲೂ ಮೀಸಲು ಹುದ್ದೆಗಳ ಕ್ರೋಡೀಕೃತ ದತ್ತಾಂಶಗಳಿಲ್ಲ.
* ಒಕ್ಕೂಟ ಸರಕಾರದ 11 ಇಲಾಖೆಗಳಲ್ಲಿ 12,615 ಎಸ್‌ಟಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ.
* ಒಕ್ಕೂಟ ಸರಕಾರದ ವಿವಿಧ ವಲಯಗಳಲ್ಲಿ 10 ಲಕ್ಷ ಖಾಲಿ ಹುದ್ದೆಗಳ ಬಗ್ಗೆ ದತ್ತಾಂಶಗಳನ್ನು ಅಡಗಿಸಿಡಲಾಗಿದೆ.
* 2011ರ ಜನಗಣತಿಯ ಪ್ರಕಾರ ಡಾಕ್ಟರುಗಳಲ್ಲಿ ಎಸ್‌ಟಿ ಸಮುದಾಯಗಳವರು ಶೇ.2 ಮತ್ತು ನರ್ಸ್‌ಗಳಲ್ಲಿ ಶೇ.2.9 ಮಾತ್ರ.

ಈ ಸಮಾವೇಶದಲ್ಲಿ ಮಾತನಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ತಮ್ಮ ಹಕ್ಕುಗಳನ್ನು ಸಾಧಿಸದಂತೆ ಉದ್ದೇಶಪೂರ್ವಕವಾಗಿ ಆ ಮಾಹಿತಿಗಳನ್ನು ಮತ್ತು ದತ್ತಾಂಶಗಳನ್ನು ಮರೆಮಾಚಲಾಗುತ್ತಿದೆ, ಆದಿವಾಸಿಗಳು ನ್ಯಾಯಾಲಯಕ್ಕೂ ಹೋಗಲಾಗದಂತೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಏಕೆಂದರೆ ಒಟ್ಟು ಹುದ್ದೆಗಳೆಷ್ಟು, ಮೀಸಲಾತಿಯ ಪ್ರಕಾರ ಎಷ್ಟು ಹುದ್ದೆಗಳಿವೆ ಮತ್ತು ಎಷ್ಟು ಹುದ್ದೆಗಳಿಗೆ, ಎಷ್ಟು ನೇಮಕಾತಿಗಳು ಆಗಿವೆ ಎಂಬ ಪೂರ್ಣ ಹಾಗೂ ಕ್ರೋಢೀಕೃತ ದತ್ತಾಂಶ ಲಭ್ಯವಿಲ್ಲ.



'ಸಮಾಜವಾದ' ಎಂದರೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಖಚಿತಪಡಿಸುವ ಕಲ್ಯಾಣ ಪ್ರಭುತ್ವ ಎಂದು ಭಾರತದ ಮುಖ್ಯ ನ್ಯಾಯಾಧೀಶರು ವ್ಯಾಖ್ಯಾನಿಸಿದ್ದಾರೆ, ಅದರಲ್ಲಿ ಖಾಸಗಿ ಉದ್ಯಮ ಅಸಂಗತವೇನಲ್ಲ ಎಂದು ಸೂಚಿಸಿದ್ದಾರೆ. ಇಲ್ಲಿರುವ ಬಹಳ ಮುಖ್ಯವಾದ ಒಂದು ಪ್ರಶ್ನೆ– ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನವಿಲ್ಲದೆ ಅವಕಾಶಗಳ ಸಮಾನತೆಯ ಕಲ್ಯಾಣ ಪ್ರಭುತ್ವವನ್ನು ಸಾಧಿಸಬಹುದೇ? ಹೆಚ್ಚುತ್ತಿರುವ ಸಂಪತ್ತಿನ ಕೇಂದ್ರೀಕರಣವನ್ನು, ಮತ್ತೊಂದೆಡೆಯಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಮತ್ತು ಪೌಷ್ಟಿಕಾಂಶದ ಬಡತನವನ್ನು ಕಾಣುತ್ತಿರುವ ಈಗಿನ ಭಾರತದ ಸಮಾಜವು, ಸಮಾನ ಅವಕಾಶಗಳನ್ನು ಖಚಿತಪಡಿಸುವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಯಾರಾದರೂ ವಾದಿಸಲು ಸಾಧ್ಯವೇ? ಅದೇನೇ ಇರಲಿ, ಭಾರತದ ಮುಖ್ಯ ನ್ಯಾಯಾಧೀಶರು ಸಮಾನ ಅವಕಾಶಗಳಿಗೆ ಬದ್ಧತೆ ವ್ಯಕ್ತಪಡಿಸಿದ್ದಾರೆ. ಅದರಂತೆ ಅವಕಾಶಗಳಲ್ಲಿ ಸಮಾನತೆಯಿರುವ ಒಂದು ಕಲ್ಯಾಣ ಪ್ರಭುತ್ವವನ್ನು ಒದಗಿಸುವುದಕ್ಕೆ ಸುಪ್ರೀಂ ಕೋರ್ಟ್ ಬದ್ಧವಾಗುಳಿಯಲಿ ಎಂದು ನಾವು ಆಗ್ರಹಿಸುತ್ತೇವೆ!

ಪ್ರೊ. ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

'ಸಮಾಜವಾದ' ಮತ್ತು ಸಮಾನ ಅವಕಾಶಗಳು



ಭಾರತ ಸಂವಿಧಾನದ 'ಪೀಠಿಕೆ'ಯಿಂದ "ಸಮಾಜವಾದ" ಎಂಬ ಪದವನ್ನು ತೆಗೆದುಹಾಕಬೇಕು ಎಂಬ ಒಂದು ಅರ್ಜಿಯನ್ನು ಆಲಿಸಿದ ಭಾರತದ ಮುಖ್ಯ ನ್ಯಾಯಾಧೀಶರು ಮಹತ್ವಪೂರ್ಣವಾದ ಎರಡು ಅವಲೋಕನಗಳನ್ನು ನವೆಂಬರ್ 22ರಂದು ಮಾಡಿದ್ದಾರೆ: ಮೊದಲನೆಯದು, "ಸಮಾಜವಾದ" ಎಂಬ ಪದವನ್ನು ಸಂವಿಧಾನದ ಪೀಠಿಕೆಯಲ್ಲಿ ಯಾವುದೊ ಒಂದು ಸಿದ್ಧಾಂತವನ್ನು ವ್ಯಾಖ್ಯಾನಿಸುವ ಅರ್ಥದಲ್ಲಿ ಬಳಸಲಾಗಿಲ್ಲ; ಎಲ್ಲ ನಾಗರಿಕರಿಗೂ ಸಮಾನ ಅವಕಾಶಗಳನ್ನು ಖಚಿತಪಡಿಸುವ ಒಂದು ಕಲ್ಯಾಣ ಪ್ರಭುತ್ವವನ್ನು ಸೂಚಿಸುವ ಅರ್ಥದಲ್ಲಿ ಉಲ್ಲೇಖಿಸಲಾಗಿದೆ. ಎರಡನೆಯದು, ಈ ಅರ್ಥದಲ್ಲಿ "ಸಮಾಜವಾದ"ವು ಸಂವಿಧಾನದ ಮೂಲ ಸಂರಚನೆಯ ಭಾಗವೇ ಆಗಿದೆ. ಇದು ಪೀಠಿಕೆಗೆ ಸೇರಿಸಿದ ಕೇವಲ ಒಂದು ಕೂಡಿಕೆ ಅಲ್ಲ. ಬದಲಿಗೆ, ಭಾರತದ ಗಣರಾಜ್ಯವು ಏನಾಗಬೇಕೆಂದು ನಾವು ಬಯಸುತ್ತೇವೆ ಎಂಬುದರ ಸಾರ–ಸತ್ವವೇ ಅದರಲ್ಲಿ ಹಾಸುಹೊಕ್ಕಾಗಿದೆ.

"ಸಮಾಜವಾದ" ಎಂಬುದಕ್ಕೆ ಒಂದು ಸಾಂಸ್ಥಿಕ ಸ್ವರೂಪವನ್ನು ನೀಡಲು ಮುಖ್ಯ ನ್ಯಾಯಾಧೀಶರು ಹಿಂಜರಿದರು. ವಿಶ್ವಾದ್ಯಂತ "ಸಮಾಜವಾದ" ಎಂಬ ಪದವು ಉತ್ಪಾದನಾ ಸಾಧನಗಳು, ಕೊನೆಯ ಪಕ್ಷ ಉತ್ಪಾದನೆಯ ಪ್ರಮುಖ ಸಾಧನಗಳು, ಸಮಾಜದ ಒಡೆತನದಲಿವೆ ಎಂದು ಅರ್ಥೈಸುತ್ತದೆ. ಆದರೆ, ಮುಖ್ಯ ನ್ಯಾಯಾಧೀಶರು "ಸಮಾಜವಾದ"ವನ್ನು ಒಡೆತನದ ಸ್ವರೂಪದ ಮೂಲಕ ವ್ಯಾಖ್ಯಾನಿಸುವುದರ ಬದಲು ಅದರ ಫಲಿತಾಂಶದ ರೂಪದಲ್ಲಿ ವ್ಯಾಖ್ಯಾನಿಸಿದ್ದಾರೆ. ಖಾಸಗಿ ಉದ್ಯಮವು "ಸಮಾಜವಾದ"ದೊಂದಿಗೆ ಹೊಂದಿಕೆಯಾಗುವುದಿಲ್ಲ ಎಂದೇನಲ್ಲ ಎಂದು ಸೂಚಿಸಿದ್ದಾರೆ. ನಿಜಕ್ಕೂ ಮುಖ್ಯವಾದುದೆಂದರೆ, ಎಲ್ಲ ನಾಗರಿಕರಿಗೂ ಸಮಾನ ಅವಕಾಶಗಳನ್ನು ಖಚಿತಪಡಿಸುವ ಒಂದು ಕಲ್ಯಾಣ ಪ್ರಭುತ್ವವನ್ನು ಸೃಷ್ಟಿಸಬೇಕು ಎಂಬುದೇ ಎಂದು ಅವರು ಹೇಳಿದ್ದಾರೆ.

ಉತ್ಪಾದನಾ ಸಾಧನಗಳ ಒಡೆತನದ ಪ್ರಶ್ನೆ

ಸಮಾಜವಾದದ ಸಾಂಸ್ಥಿಕ ವ್ಯಾಖ್ಯಾನವು ಉತ್ಪಾದನಾ ಸಾಧನಗಳ ಒಡೆತನದ ಪರಿಭಾಷೆಯಲ್ಲಿ ವ್ಯಾಪಕವಾಗಿ ಬಳಸಲ್ಪಡುತ್ತದೆ. ಏಕೆಂದರೆ ಅವಕಾಶಗಳಲ್ಲಿ ಸಮಾನತೆಯೊಂದಿಗೆ ಕಲ್ಯಾಣ ಪ್ರಭುತ್ವವನ್ನು ಖಚಿತಪಡಿಸಲು ಸಾಮಾಜಿಕ ಒಡೆತನವು ಒಂದು ಅಗತ್ಯವಾದ ಸ್ಥಿತಿ ಎಂದು ಪರಿಗಣಿಸಲಾಗಿದೆ. ಆದರೆ, ಸಮಾಜದ ಒಡೆತನವು ಸಾಂಸ್ಥಿಕವಾಗಿ ಇಲ್ಲದೆಯೂ ಈ ಫಲಿತಾಂಶವನ್ನು ಪಡೆಯಬಹುದು ಎಂದು ಮುಖ್ಯ ನ್ಯಾಯಾಧೀಶರು ಸೂಚಿಸಿದರು. ಖಚಿತವಾಗಿ ಹೇಳುವುದಾದರೆ, ಅವಕಾಶಗಳ ಸಮಾನತೆಯನ್ನು ಕಲ್ಪಿಸುವ ಕಲ್ಯಾಣ ಪ್ರಭುತ್ವವನ್ನು ಸೃಷ್ಟಿಸುವುದು ಮಾತ್ರವೇ ಸಮಾಜವಾದವಲ್ಲ. ಅದರ ಉದ್ದೇಶವು ಇನ್ನೂ ಹೆಚ್ಚು ದೂರಗಾಮಿಯಾಗಿದೆ. ಅಂದರೆ, ವ್ಯಕ್ತಿಗಳನ್ನು ಅಣು ರೂಪಕ್ಕೆ ವಿಘಟಿಸುವ ಸ್ಥಿತಿಗೆ ಸಮಾಜವನ್ನು ತಂದಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರಿ ಹೊಸದೊಂದು ಸಮುದಾಯವನ್ನು ಅಸ್ತಿತ್ವಕ್ಕೆ ತರುವುದು. ಈ ಹೊಸ ಸಮುದಾಯವು ಸಮಾನತೆಯನ್ನು ಕಲ್ಪಿಸುವ ಕಲ್ಯಾಣ ಪ್ರಭುತ್ವದ ಗುಣಲಕ್ಷಣಗಳನ್ನು ಹೊಂದಿರಬೇಕು ಕೂಡ. ಆದರೆ ಬಹಳ ಮುಖ್ಯವಾದ ಒಂದು ಅಂಶವೆಂದರೆ, ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನವಿಲ್ಲದೆ ಅವಕಾಶಗಳಲ್ಲಿ ಸಮಾನತೆಯ ಕಲ್ಯಾಣ ಪ್ರಭುತ್ವವನ್ನು ಸಾಧಿಸಬಹುದೇ ಎಂಬುದು.

ಅದು ಸಾಧ್ಯವಿಲ್ಲ ಎಂಬುದೇ ನಮ್ಮ ಸ್ಪಷ್ಟ ತಿಳುವಳಿಕೆ. ಆದರೂ, ಖಾಸಗಿ ಉದ್ಯಮಗಳಿಗೂ ಮತ್ತು ಅವಕಾಶಗಳ ಸಮಾನತೆಗಳಿಗೂ ನಡುವೆ ಇರುವ ವೈರುಧ್ಯದ ಕೆಲವು ನಿದರ್ಶನಗಳನ್ನು ಸ್ಪಷ್ಟಪಡಿಸುವುದನ್ನು ಹೊರತುಪಡಿಸಿ, ಈ ಬಗ್ಗೆ ನಾವು ಇಲ್ಲಿ ಚರ್ಚೆಗೆ ಇಳಿಯುವುದಿಲ್ಲ. ಭಾರತದ ಮುಖ್ಯ ನ್ಯಾಯಾಧೀಶರು ಸಮಾನ ಅವಕಾಶಗಳಿಗೆ ಬದ್ಧತೆ ವ್ಯಕ್ತಪಡಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯ, ಇದಕ್ಕೆ ಮತ್ತು ಸಮಾನ ಅವಕಾಶಗಳಿರುವ ಒಂದು ಸಮಾಜವು ಹೇಗಿರಬೇಕು ಎಂಬುದನ್ನು ಪರಿಶೀಲಿಸಲು ಬದ್ಧವಾಗಿರಬೇಕು ಎಂದಷ್ಟೇ ನಾವು ಒತ್ತಾಯಿಸುತ್ತೇವೆ. ಇದು ಮುಖ್ಯವಾಗುತ್ತದೆ. ಏಕೆಂದರೆ, ಒಂದೆಡೆಯಲ್ಲಿ ಹೆಚ್ಚುತ್ತಿರುವ ಸಂಪತ್ತಿನ ಕೇಂದ್ರೀಕರಣವನ್ನು ಮತ್ತು ಇನ್ನೊಂದೆಡೆಯಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಮತ್ತು ಪೌಷ್ಟಿಕಾಂಶದ ಬಡತನವನ್ನು ಕಾಣುತ್ತಿರುವ ಈಗಿನ ಭಾರತದ ಸಮಾಜವು ಸಮಾನ ಅವಕಾಶಗಳನ್ನು ಖಚಿತಪಡಿಸುವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ವಾದಿಸುವುದು ಯಾರಿಗೂ ಸಾಧ್ಯವಿಲ್ಲ. ಹಾಗಾಗಿ, ಅವಕಾಶಗಳ ಸಮಾನತೆಯತ್ತ ಸಾಗುವ ಚಲನೆಯ ಗುರುತುಗಳು ಯಾವುವು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ನಿರುದ್ಯೋಗ ಇರುವ ಜಗತ್ತಿನಲ್ಲಿ ಅಥವಾ ಮಾರ್ಕ್ಸ್ ಏನನ್ನು ಶ್ರಮಿಕರ ಮೀಸಲು ಪಡೆ ಎಂದು ಕರೆದಿದ್ದಾರೋ ಅಂತಹ ಜಗತ್ತಿನಲ್ಲಿ ಅವಕಾಶಗಳ ಸಮಾನತೆ ಇರುವುದಿಲ್ಲ ಎಂಬುದು ಸ್ಪಷ್ಟವೇ. ನಿರುದ್ಯೋಗಿಗಳ ವರಮಾನವು, ಅವರು ನಿರುದ್ಯೋಗ ಭತ್ಯೆಯನ್ನು ಪಡೆದರೂ ಸಹ, ಉದ್ಯೋಗದಲ್ಲಿರುವವರಿಗಿಂತ ಕಡಿಮೆಯಿರುತ್ತದೆ. ಆದ್ದರಿಂದ, ನಿರುದ್ಯೋಗಿಗಳ ಮಕ್ಕಳು ವಿವಿಧ ರೀತಿಯ ಅಭಾವಗಳಿಂದ ಬಳಲುತ್ತಾರೆ. ಇದು ನಿರುದ್ಯೋಗಿಗಳ ಮಕ್ಕಳು ಮತ್ತು ಉದ್ಯೋಗದಲ್ಲಿರುವವರ ಮಕ್ಕಳ ನಡುವೆ ಸಮಾನತೆಯನ್ನು ಅಸಾಧ್ಯವಾಗಿಸುತ್ತದೆ.

ನಿರುದ್ಯೋಗದಿಂದ ಉಂಟಾಗುವ ಆರ್ಥಿಕ ಅಸಮಾನತೆಯ ಹೊರತಾಗಿ, ನಿರುದ್ಯೋಗಿ ಎಂಬ ಒಂದು ಕಳಂಕವೂ ಅಂಟಿಕೊಳ್ಳುತ್ತದೆ. ನಿರುದ್ಯೋಗಿಗಳ ಸ್ವ–ಮೌಲ್ಯದ ನಾಶವು ಅವರ ಸಂತತಿಯ ಬಾಲ್ಯವನ್ನು ಅಗತ್ಯವಾಗಿ ಆಘಾತಕಾರಿಯಾಗಿಸುತ್ತದೆ. ನಿರುದ್ಯೋಗವನ್ನು ತೊಡೆದುಹಾಕಿದಾಗ ಮಾತ್ರ ಅಂತಹ ಆಘಾತವನ್ನು ತೊಡೆದುಹಾಕಬಹುದು. ಅವಕಾಶಗಳ ಸಮಾನತೆಗಾಗಿ ಅವಶ್ಯವಾಗಿ ಇದನ್ನು ಮಾಡಲೇಬೇಕಾಗುತ್ತದೆ.

ಸಮಾನ ಅವಕಾಶ ಮತ್ತು ಖಾಸಗಿ ಉದ್ಯಮ

ನಿರುದ್ಯೋಗದಿಂದ ಉಂಟಾಗುವ ಆರ್ಥಿಕ ಮುಗ್ಗಟ್ಟನ್ನು ನಿವಾರಿಸುವ ಒಂದು ಮಾರ್ಗವೆಂದರೆ, ನಿರುದ್ಯೋಗಿಗಳೂ ಸಹ ಉದ್ಯೋಗಿಗಳಂತೆಯೇ ಅದೇ ದರದ ವೇತನವನ್ನು ಪಡೆಯುವುದು. ಅಂದರೆ ನಿರುದ್ಯೋಗ ಭತ್ಯೆಯನ್ನು ವೇತನ ದರಕ್ಕೆ ಸಮನಾಗಿ ಇಡಬೇಕಾಗುತ್ತದೆ. ಆದರೆ, ಇದು ಖಾಸಗಿ ಉದ್ದಿಮೆಗಳನ್ನು ಹೊಂದಿರುವ ಅರ್ಥವ್ಯವಸ್ಥೆಯಲ್ಲಿ ಸಾಧ್ಯವಿಲ್ಲ. ನಿರುದ್ಯೋಗದ ಅಸ್ತಿತ್ವವು ಬಂಡವಾಳಶಾಹಿಯ ಅಡಿಯಲ್ಲಿ ಮಾತ್ರವಲ್ಲ, ಖಾಸಗಿ ವಲಯದ ಗಾತ್ರವು ಗಮನಾರ್ಹ ಮಟ್ಟದಲ್ಲಿರುವ ಯಾವುದೇ ಅರ್ಥವ್ಯವಸ್ಥೆಯಲ್ಲಿ ಕಾರ್ಮಿಕರನ್ನು ಶಿಸ್ತಿಗೊಳಪಡಿಸುವ ಒಂದು ಸಾಧನವಾಗಿ ಕೆಲಸ ಮಾಡುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಿರುದ್ಯೋಗ ಭತ್ಯೆಯು ವೇತನ ದರದಷ್ಟಿರುವುದನ್ನು ಇಂತಹ ಅರ್ಥವ್ಯವಸ್ಥೆ ಒಪ್ಪುವುದಿಲ್ಲ. ಏಕೆಂದರೆ ಆಗ ಅದು ಶಿಸ್ತಿನ ಒಂದು ಸಾಧನವನ್ನು ಇಲ್ಲವಾಗಿಸುತ್ತದೆ. ಆಗ 'ವಜಾ' ಎಂಬುದು ನಿಜವಾದ ಪೂರ್ಣ ಉದ್ಯೋಗವಿದ್ದರೆ ಹೇಗಿರುತ್ತದೋ, ಹಾಗೆಯೇ ತನ್ನೆಲ್ಲಾ ಶಿಕ್ಷಿಸುವ ಶಕ್ತಿಯನ್ನು ಕಳಕೊಳ್ಳುತ್ತದೆ.

ಒಂದು ಕಡೆಯಲ್ಲಿ ಸಮಾನ ಅವಕಾಶಗಳು ಮತ್ತು ಇನ್ನೊಂದು ಕಡೆಯಲ್ಲಿ ಖಾಸಗಿ ಉದ್ಯಮ ಇವುಗಳ ನಡುವಿನ ಮೊದಲ ವೈರುಧ್ಯವು ನಿರುದ್ಯೋಗ ಪ್ರಶ್ನೆಯ ಸಂಬಂಧವಾಗಿ ಉದ್ಭವಿಸುತ್ತದೆ. ಅದನ್ನು ಭಾರತದ ಮುಖ್ಯ ನ್ಯಾಯಾಧೀಶರು ಒಪ್ಪುತ್ತಾರೋ ಇಲ್ಲವೋ, ಕನಿಷ್ಠ ಪಕ್ಷ ಅವರು ನಿರುದ್ಯೋಗ ಪರಿಸ್ಥಿತಿಯು ಸಮಾನ ಅವಕಾಶಗಳನ್ನು ಖಚಿತಪಡಿಸಲು ಅಡ್ಡಿಯಾಗುತ್ತದೆ ಎಂಬುದನ್ನಾದರೂ ಗುರುತಿಸಬೇಕಾಗುತ್ತದೆ.

ಸಮಾನ ಅವಕಾಶಗಳನ್ನು ಒದಗಿಸಲು ಎರಡನೆಯ ಸ್ಪಷ್ಟ ಅವಶ್ಯಕತೆಯೆಂದರೆ, ಸಂಪತ್ತನ್ನು ಆನುವಂಶಿಕವಾಗಿ ಪಡೆಯುವ ಅವಕಾಶವನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಅಥವಾ ಕನಿಷ್ಠ ಪಕ್ಷ ಅಂಥಹ ಅವಕಾಶವನ್ನು ಗಣನೀಯವಾಗಿ ಕುಗ್ಗಿಸುವುದು. ಒಬ್ಬ ಬಹುಕೋಟ್ಯಾಧಿಪತಿಯ ಮಗ ಮತ್ತು ಒಬ್ಬ ಕಾರ್ಮಿಕನ ಮಗ ಇವರ ಸಂದರ್ಭದಲ್ಲಿ, ತನ್ನ ತಂದೆಯ ಶತಕೋಟಿಗಳನ್ನು ಆನುವಂಶಿಕವಾಗಿ ಪಡೆಯುವವನಿಗೂ ಮತ್ತು ಒಬ್ಬ ಕಾರ್ಮಿಕನ ಮಗನಿಗೂ ದೊರಕುವ ಅವಕಾಶವು ಸಮಾನವಾಗಿದೆ ಎಂದು ಹೇಳುವುದು ಸಾಧ್ಯವಿಲ್ಲ. ಬಂಡವಾಳಗಾರರು ಗಳಿಸುವ ಲಾಭ ಮತ್ತು ಆ ಮೂಲಕ ಅವರು ಗಳಿಸುವ ಸಂಪತ್ತಿನ ಶ್ರೇಯಸ್ಸು ಅವರಿಗೆ ಇತರರು ಹೊಂದಿರದ ಕೆಲವು ವಿಶೇಷ ಗುಣಗಳು ಇರುವುದರಿಂದಾಗಿ ಎಂದು ಹೇಳುವ ಬೂರ್ಜ್ವಾ ಅರ್ಥಶಾಸ್ತ್ರವೂ ಸಹ ಸಂಪತ್ತಿನ ಆನುವಂಶಿಕತೆಯನ್ನು ಸಮರ್ಥಿಸುವುದು ಸಾಧ್ಯವಿಲ್ಲ. ಇದು "ಸಂಪತ್ತು–ಗಳಿಕೆ ಕೆಲವು–ವಿಶೇಷ ಗುಣಗಳಿಂದಾಗಿ" ಎಂಬ ವಾದಕ್ಕೆ ವಿರುದ್ಧವಾಗಿದೆ. ಈ ಕಾರಣದಿಂದಾಗಿಯೇ ಪುಟ 15 ಕ್ಕೆ



ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ನಿಯಮಿತ ಖಾಯಂ ನಾಗರಿಕ ಸೇವಾ ನೌಕರರಿಗೆ ಸಮಾನವಾಗಿ ಹಾಗೂ 3 ಮತ್ತು 4ನೇ ದರ್ಜೆಯ ನೌಕರರನ್ನಾಗಿ ಪರಿಗಣಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ನಿರ್ದೇಶನ ನೀಡಿ ಗುಜರಾತ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. 2024ರ ಅಕ್ಟೋಬರ್ 30 ರಂದು ನೀಡಿದ ಈ ತೀರ್ಪು ಅಂಗನವಾಡಿ ಸಿಬ್ಬಂದಿ ಮತ್ತು ಇತರ ಸರ್ಕಾರಿ ನೌಕರರ ನಡುವಿನ ಪರಿಹಾರ ಮತ್ತು ಪ್ರಯೋಜನಗಳಲ್ಲಿ ದೀರ್ಘಕಾಲದ ಅಸಮಾನತೆಯನ್ನು ಸರಿಪಡಿಸಲು ಸಹಕಾರಿಯಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ 49 ವರ್ಷಗಳ ಹೋರಾಟವು ಜಯದ ಹಾದಿಯಲ್ಲಿ ನಡೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ.



ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ನೌಕರರಾಗಿ ಪರಿಗಣಿಸಲು ಗುಜರಾತ್ ಹೈಕೋರ್ಟ್ ಆದೇಶ

49 ವರ್ಷಗಳ ಹೋರಾಟ ಜಯದ ಹಾದಿಯಲ್ಲಿ

ಮಹತ್ವದ ತೀರ್ಪೊಂದರಲ್ಲಿ, ಗುಜರಾತ್ ಹೈಕೋರ್ಟ್ ಅಂಗನವಾಡಿ ಕಾರ್ಯಕರ್ತೆಯರು (AWWs) ಮತ್ತು ಸಹಾಯಕಿಯರ (AWHs) ಉದ್ಯೋಗದ ಸ್ಥಿತಿಯನ್ನು ಹೆಚ್ಚಿಸುವ ಪರವಾಗಿ ತೀರ್ಪು ನೀಡಿದೆ. 2024ರ ಅಕ್ಟೋಬರ್ 30 ರಂದು ನೀಡಿದ ಈ ತೀರ್ಪಿನಲ್ಲಿ, ಅವರನ್ನು ನಿಯಮಿತ ಖಾಯಂ ನಾಗರಿಕ ಸೇವಾ ನೌಕರರಿಗೆ ಸಮಾನವಾಗಿ ಪರಿಗಣಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು 3 ಮತ್ತು 4ನೇ ದರ್ಜೆಯ ನೌಕರರನ್ನಾಗಿ ಪರಿಗಣಿಸಲು ಕೋರ್ಟ್ ನಿರ್ದೇಶಿಸಿದೆ.

ಕರ್ತವ್ಯ ಮತ್ತು ಸಂಭಾವನೆಯಲ್ಲಿನ ಸಂಪೂರ್ಣ ವ್ಯತಿರಿಕ್ತತೆಯನ್ನು ಎತ್ತಿ ತೋರಿಸಿದ ನ್ಯಾಯಾಲಯವು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕ್ರಮವಾಗಿ ರೂ 10,000 ಮತ್ತು ರೂ 5,000 ಮಾಸಿಕ ಗೌರವಧನವನ್ನು ಪಡೆಯುತ್ತಾರೆ, ಇದು ಇತರ ಸಿವಿಲ್ ಹುದ್ದೆಗಳ ವೇತನಕ್ಕೆ ಹೋಲಿಸಿದರೆ ತೆಳುವಾಗಿದೆ ಎಂದಿದೆ. ಆರು ತಿಂಗಳೊಳಗೆ ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಸಹಾಯಕಿಯರನ್ನು ಸರ್ಕಾರಿ ಸೇವೆಗೆ ವಿಲೀನಗೊಳಿಸುವ ನೀತಿಯನ್ನು ರೂಪಿಸಲು ಕಡ್ಡಾಯಗೊಳಿಸಿ ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಕೋರ್ಟ್ ತನ್ನ ತೀರ್ಪಿನಲ್ಲಿ ನಿರ್ದೇಶಿಸಿದೆ. ಇದರಲ್ಲಿ ಖಾಯಂ ನಾಗರಿಕ ಸೇವಕರಿಗೆ ಸಮಾನವಾದ ಪ್ರಯೋಜನಗಳನ್ನು ಕಾಯಂಗೊಳಿಸುವಿಕೆ ಮತ್ತು ಹಂಚಿಕೆ ಒಳಗೊಂಡಿರುತ್ತದೆ.

ಕೇಂದ್ರ ಸರ್ಕಾರದ ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ (ICDS) ಯೋಜನೆಯಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸರಣಿ ಅರ್ಜಿಗಳ ನಂತರ ನ್ಯಾಯಾಲಯವು ಈ ತೀರ್ಪು ನೀಡಿದೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಒಂದು ದಶಕಕ್ಕೂ ಹೆಚ್ಚು ಕಾಲ ತಮ್ಮ ಕರ್ತವ್ಯಗಳನ್ನು ಪೂರೈಸಿದ್ದರೂ, ಆಗಾಗ್ಗೆ ದಿನಕ್ಕೆ ಆರು ಗಂಟೆಗಳನ್ನು ಮೀರಿದ್ದರೂ, ಅವರಿಗೆ ಕಡಿಮೆ ಗೌರವಧನವನ್ನು ನೀಡಲಾಗುತ್ತದೆ, ತಾವು ನಿಯಮಿತ ಪ್ರಕ್ರಿಯೆಯ ಮೂಲಕ ನೇಮಕಗೊಂಡರೂ ಸರ್ಕಾರಿ ನೌಕರರೆಂದು ಗುರುತಿಸಲ್ಪಡದ ಕಾರಣ ಇದು ಅಮಾನವೀಯ ಪದ್ಧತಿಯಾಗಿದೆ ಎಂದು ಅಂಗನವಾಡಿ ನೌಕರರು ನ್ಯಾಯಾಲಯದಲ್ಲಿ ಪ್ರತಿಪಾದಿಸಿದರು.

ಈ ತೀರ್ಪನ್ನು ಕೊಡಲು ಪರಿಗಣಿಸಿದ ಮುಖ್ಯಾಂಶಗಳು

ಮೇಲ್ವಿಚಾರಕಿ ಹುದ್ದೆ ನೇಮಕಾತಿಗೆ ಮುಂಬಡ್ತಿ, ನೇಮಕಾತಿ ಪ್ರಕ್ರಿಯೆಗಳು, ಮೇಲ್ವಿಚಾರಣೆ ಮತ್ತು ಶಿಸ್ತಿನ ಕ್ರಮಗಳು ಮತ್ತು ಸಂವಿಧಾನಬದ್ಧ ಕರ್ತವ್ಯಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ. ಗುಜರಾತ್ ರಾಜ್ಯವು ಉನ್ನತ ಪಂಚಾಯತ್ ಸೇವೆ, ನೇಮಕಾತಿ ನಿಯಮಗಳು 2013ರಲ್ಲಿ ಮುಖ್ಯ ಸೇವಿಕಾ (ಮೇಲ್ವಿಚಾರಕಿ) ಅ ಗುಂಪಿನ ಹುದ್ದೆಗಳನ್ನು ರೂಪಿಸಿದೆ. 13–11–2009 ಮತ್ತು 25–11–2019 ಆಯ್ಕೆಯ ನಿಯಮಾವಳಿಗಳು ಸಂವಿಧಾನದ ಆರ್ಟಿಕಲ್ 14 ಮತ್ತು 16 ವಿಧಿಯ ಪ್ರಕಾರ ನಾಗರಿಕ ಸೇವಾ ನಿಯಮಾವಳಿಗಳಂತೆಯೇ ಇರುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬುದನ್ನು ಪ್ರತಿಪಾದಿಸಿದೆ.

ಅಂಗನವಾಡಿ ಮೇಲ್ವಿಚಾರಕಿಯ ಹುದ್ದೆಗೆ ನೇಮಕಗೊಳ್ಳುವ ಪ್ರಕ್ರಿಯೆಯಲ್ಲಿನ ಅರ್ಹತೆಗಳಲ್ಲಿ, ಅವರು ಅಂಗನವಾಡಿ ಕಾರ್ಯಕರ್ತೆಯಾಗಿರಬೇಕು, 45 ವರ್ಷದೊಳಗಿರಬೇಕು, SSLC ಅಥವಾ PUC ಉತ್ತೀರ್ಣರಾಗಿರಬೇಕು ಮತ್ತು 10 ವರ್ಷ ಅಂಗನವಾಡಿ ಕಾರ್ಯಕರ್ತೆಯ ಸೇವೆಯ ಅನುಭವ ಹೊಂದಿರಬೇಕು ಎಂಬುದೂ ಸೇರಿದಂತೆ ಇನ್ನಿತರ ಷರತ್ತುಗಳಿವೆ. ಈ ಷರತ್ತುಗಳಲ್ಲಿ ಕೊನೆಯಲ್ಲಿರುವ ಷರತ್ತು ಮೇಲ್ವಿಚಾರಕಿಯಾಗಿ ನೇಮಕಗೊಳ್ಳುವ ಪ್ರಮುಖ ಅರ್ಹತೆಯಾಗಿರುವ ಅಂಗನವಾಡಿ ಕಾರ್ಯಕರ್ತೆಯಾಗಿ 10 ವರ್ಷದ ಸೇವಾನುಭವ ಮುಖ್ಯವಾಗಿರುವುದರಿಂದ, ಗುಜರಾತ್ ಸರ್ಕಾರವು ಅಂಗನವಾಡಿ ಕಾರ್ಯಕರ್ತೆ ಹುದ್ದೆಯನ್ನು ಪ್ರಮುಖ ಎಂದು ಪರಿಗಣಿಸಿದೆ.

ಮಂಜೂರಾದ ಹುದ್ದೆಗಳು:

ಅಂಗನವಾಡಿ ಕಾರ್ಯಕರ್ತೆಯರನ್ನು C ಮತ್ತು D ಗುಂಪಿಗೆ ಸೇರಿಸಬೇಕಾದರೆ ಹುದ್ದೆಗಳು ಇರಬೇಕಲ್ಲವೇ? ಈ ಅಂಶಕ್ಕೆ ಸಂಬಂಧಿಸಿ ಸುಪ್ರಿಂ ಕೋರ್ಟ್ ಗ್ರಾಚ್ಯುಟಿಯನ್ನು ಇವರಿಗೆ ಕೊಡಬೇಕು ಎಂದು ನೀಡಿದ ತೀರ್ಪಿನಲ್ಲಿ 2013ರ ಆಹಾರ ಭದ್ರತಾ ಕಾಯ್ದೆಯ ಕರ್ತವ್ಯಗಳನ್ನು ಅಂಗನವಾಡಿ ಕೇಂದ್ರದ ಮುಖಾಂತರ ಪೂರೈಸುತ್ತಿರುವುದರಿಂದ "ಅಂಗನವಾಡಿ ಕೇಂದ್ರಗಳು ಶಾಸನಬದ್ದ"ವಾಗಿ ಗುರ್ತಿಸಲ್ಪಟ್ಟಿವೆ. ಹೀಗಾಗಿ, "ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯ ಹುದ್ದೆಗಳು ಶಾಸನಬದ್ದ ಹುದ್ದೆಗಳಾಗಿವೆ" ಎಂಬುದಾಗಿ ಈಗಾಗಲೇ ವ್ಯಾಖ್ಯಾನಿಸಲಾಗಿದೆ. ಮಾತ್ರವಲ್ಲದೇ ಪಾಲನೆ ಮತ್ತು ಪೋಷಣೆಯನ್ನು ಸಂವಿಧಾನಬದ್ಧವಾಗಿ ಅಂಗನವಾಡಿ ಕೇಂದ್ರಗಳ ಮುಖಾಂತರ ಪೂರೈಸಲಾಗುತ್ತದೆ.

ಆಯ್ಕೆಯ ನಿಯಮಾವಳಿಗಳು:

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಯಮಾವಳಿಗಳ ಮುಖಾಂತರವೇ ಭರ್ತಿ ಮಾಡಲಾಗುತ್ತದೆ. ಗುಜರಾತ್ ಸರ್ಕಾರದ ಅಧೀನದಲ್ಲಿರುವ ಐಸಿಡಿಎಸ್ ಯೋಜನೆಯ ಜಿಲ್ಲಾ ಕಾರ್ಯಕ್ರಮದ ಅನುಷ್ಠಾನ ಅಧಿಕಾರಿ(PO), ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಸಮಗ್ರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಯ್ಕೆ ಸಮಿತಿಯ ಸದಸ್ಯರುಗಳಾಗಿರುತ್ತಾರೆ.

ಆಯ್ಕೆ ಸಮಿತಿಯು ಸರ್ಕಾರದಡಿಯಲ್ಲಿರುವ ಗ್ರಾಮ ಪಂಚಾಯ್ತಿ, ಹಾಲು ಉತ್ಪಾದಕರ ಒಕ್ಕೂಟಗಳು, ನ್ಯಾಯಬೆಲೆ ಅಂಗಡಿಗಳು, ಪ್ರಾಥಮಿಕ ಶಾಲೆಗಳು ಮತ್ತು ಸಹಕಾರ ಸಂಘಗಳ ಮುಖಾಂತರ ಅರ್ಹ ಅಭ್ಯರ್ಥಿಗಳು ಬೇಕೆಂದು ಜಾಹಿರಾತುಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕೊಡಲಾಗುತ್ತದೆ.

ಅರ್ಹತೆಯ ಮಾನದಂಡಗಳು:

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳ ನೇಮಕಾತಿಗೆ ಅರ್ಹತೆಯ ಮಾನದಂಡಗಳು ಹೀಗಿವೆ: SSLC, PUC, ಡಿಪ್ಲೋಮೊ ಕೋರ್ಸ್ ಉತ್ತೀರ್ಣನಾಗಿದ್ದರೆ ಗರಿಷ್ಠ 20 ಅಂಕ, ಅಭ್ಯರ್ಥಿ ಪದವೀಧರರಾಗಿದ್ದರೆ ಶೇ. 30 ಅಂಕ ನೀಡಬಹುದು. ಅಭ್ಯರ್ಥಿ ಸ್ನಾತಕೋತ್ತರ ಪಧವೀಧರರಾಗಿದ್ದರೆ ಗರಿಷ್ಠ 30 ಅಂಕಗಳನ್ನು ಅನುಪಾತದ ಆಧಾರದಲ್ಲಿ ನೀಡಬಹುದು. SC, ST, SEBC ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮತ್ತು ಮೀಸಲಾತಿ ವರ್ಗಗಳಿಗೆ ಹೆಚ್ಚುವರಿ 10 ಅಂಕಗಳು, ವಿಧವೆಯರಿಗೆ 10 ಅಂಕಗಳನ್ನು ಹೆಚ್ಚುವರಿಯಾಗಿ ನೀಡಲಾಗುವುದು.

ಹೀಗೆ ಆಯ್ಕೆಗೆ ಅರ್ಜಿ ಸಲ್ಲಿಸುವ ವಿಧಾನ ಮತ್ತು ಆಯ್ಕೆಯ ಪ್ರಕ್ರಿಯೆಯಲ್ಲಿ ಇಬ್ಬರು ಅಭ್ಯರ್ಥಿಗಳು ಸಮಾನಾಂತರವಾಗಿದ್ದರೆ, ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪೂರ್ವ ನಿರ್ಧಾರಿತವಾಗಿದೆ. ಈ ಆಯ್ಕೆ ಪ್ರಕ್ರಿಯೆ ವ್ಯಕ್ತಿ ನಿಷ್ಠತೆ ಇಲ್ಲದಿರುವುದರಿಂದ ಮೆರಿಟ್ ಮೇಲೆ ಅವಕಾಶವನ್ನು ಕಲ್ಪಿಸಿದೆ.

25–11–2019ರ ಗುಜರಾತ್ ರಾಜ್ಯ ಸರ್ಕಾರದ ನಿರ್ಣಯದಂತೆ GR ಇಂಟರ್ ಅಲಿಯಾವು, ಈ ಆಯ್ಕೆ ಪ್ರಕ್ರಿಯೆಯ ಉದ್ದಕ್ಕೂ ಸಂವಿಧಾನದ 14 ಮತ್ತು 15ನೇ ವಿಧಿಗಳ ಆದೇಶವನ್ನು ಸೂಕ್ಷ್ಮವಾಗಿ ಅನುಸರಿಸಲಾಗಿದೆ.

ಉದ್ಯೋಗದಾತ ಮತ್ತು ಉದ್ಯೋಗಿಗಳ ಸಂಬಧವಿದೆಯೇ?

ಅಂಗನವಾಡಿ ನೌಕರರು ಮತ್ತು ಸರ್ಕಾರದ ನಡುವೆ ಉದ್ಯೋಗದಾತ ಮತ್ತು ಉದ್ಯೋಗಿಗಳ ಸಂಬಧವಿದೆಯೇ? ಈಗಾಗಲೇ ವಿವರಿಸಿದಂತೆ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳು ಆಹಾರ ಭದ್ರತಾ ಕಾಯ್ದೆ 2013 ಮತ್ತು 2009 ಕಡ್ಡಾಯ ಶಿಕ್ಷಣ ಕಾಯ್ದೆಯ ಅಡಿಯಲ್ಲಿ ಶಾಸನಬದ್ದ ಕರ್ತವ್ಯವನ್ನು ಪೂರೈಸಲಾಗುತ್ತದೆ ಎಂಬುದನ್ನು ಘೋಷಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಈ ಕಾಯ್ದೆಗಳ ಪರವಾಗಿ ಮತ್ತು ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಾರೆ.

ಅಂಗನವಾಡಿ ನೌಕರರ ಆಯ್ಕೆಯ ಮಾನದಂಡಗಳು, ಶೈಕ್ಷಣಿಕ ಅರ್ಹತೆ, ಆಯ್ಕೆ ಪ್ರಕ್ರಿಯೆ ಇತ್ಯಾದಿಗಳನ್ನು ನಿಗದಿಪಡಿಸಿ ಸಂಯೋಜಿಸುವ ವಿಧಾನ, ನೇಮಕಾತಿ ಪ್ರಕ್ರಿಯೆಯನ್ನು ರಾಜ್ಯದ ಅಧಿಕಾರಿಗಳು ಕೈಗೊಳ್ಳುತ್ತಾರೆ. ಆಯ್ಕೆ ಪ್ರಕ್ರಿಯೆ ವಿರುದ್ಧ ಯಾವುದೇ ಕುಂದುಕೊರತೆ ಇದ್ದಲ್ಲಿ ರಾಜ್ಯದ ನಿರ್ದಿಷ್ಟ ಅಧಿಕಾರಿಗಳ ಮೇಲ್ಮನವಿ ಸಂಸ್ಥೆಯನ್ನು ರಚಿಸುತ್ತಾರೆ.

ಅಂಗನವಾಡಿ ನೌಕರರ ಸಂಪೂರ್ಣ ಕೆಲಸದ ಮೇಲ್ವಿಚಾರಣೆಯನ್ನು ಸಿಡಿಪಿಒ ರವರು ಮಾಡುತ್ತಾರೆ. ಮೇಲ್ವಿಚಾರಣೆಗೆ ಯಾವುದೇ ಮಧ್ಯಂತರ ಏಜೆನ್ಸಿಯನ್ನು ನೇಮಕ ಮಾಡಿಲ್ಲ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 90:10ರ ಅನುಪಾತದಲ್ಲಿ ಗೌರವಧನವನ್ನು ಪಾವತಿಸಲಾಗುತ್ತದೆ (ಈಗ ಕರ್ನಾಟಕದಲ್ಲಿ ಬೇರೆ ರೀತಿಯಲ್ಲಿದೆ). ರಾಜ್ಯವು ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಆಯ್ಕೆ, ಸೇವಾ ಷರತ್ತಗಳು, ಕರ್ತವ್ಯಗಳನ್ನು ನಿರ್ವಹಿಸುವುದು, ವಜಾಗೊಳಿಸುವ ಶಿಕ್ಷೆ ವಿಧಿಸುವ ಅಧಿಕಾರ ರಾಜ್ಯಕ್ಕೆ ನೀಡಲಾಗಿದೆ. ಈ ಅಂಶಗಳ ಆಧಾರದಲ್ಲಿ ಯಜಮಾನ ಮತ್ತು ಸೇವಕ ಸಂಬಂಧವೂ ಅಸ್ತಿತ್ವದಲ್ಲಿದೆ.

ಈ ಮೇಲಿನ ಎಲ್ಲಾ ಅಂಶಗಳ ಆಧಾರದಲ್ಲಿ ಕ್ಲೆರಿಕಲ್ ಅಥವಾ ಅರೆ ಮೇಲ್ವಿಚಾರಣಾ ಹುದ್ದೆಗಳು ಮಾಡುವ ಕೆಲಸಕ್ಕೆ ಹೋಲುತ್ತದೆ ಎಂಬುದನ್ನು ನ್ಯಾಯಾಲಯ ಗುರುತಿಸಿದೆ. ಆದ್ದರಿಂದ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ನಿಯಮಿತ ಖಾಯಂ ಉದ್ಯೋಗಿಗಳಿಗೆ ನೀಡುವ ಸಮಾನ ವೇತನ ಮತ್ತು ಇತರೆ ಸೌಲಭ್ಯಗಳನ್ನು ಪಾವತಿಸುವ ಯೋಜನೆಯನ್ನು ಸೂಕ್ತ ಎಂದು ಕಾಣುವ ಇತರೆ ಇಲಾಖೆಗಳೊಂದಿಗೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಯೋಜನೆಯನ್ನು ರೂಪಿಸಬೇಕು.

ಗುಜರಾತ್ ರಾಜ್ಯ ಸರ್ಕಾರವು 19–10–2019 ರ ಸುತ್ತೋಲೆ ಪ್ರಕಾರ ಕೆಲವು ವರ್ಗದ ನೌಕರರಿಗೆ ಕನಿಷ್ಠ ವೇತನದಡಿಯಲ್ಲಿ ದಿನಕ್ಕೆ 4 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುವ ಹಂಗಾಮಿ ನೌಕರರಿಗೆ ಕನಿಷ್ಠ ವೇತನ 14,800 ರೂ. ಪಾವತಿಸಲಾಗುತ್ತದೆ. ಭಾರತೀಯ ದಕ್ ತಾರ್ ಮಜ್ದೂರ್ ಮಂಚ್ Vs P&T ಇಲಾಖೆಯಡಿಯಲ್ಲಿ ದೈನಂದಿನ ದರದ ಸಾಂದರ್ಭಿಕ ಕಾರ್ಮಿಕರ ಕೇಸಿನ ವಾದ "ಗೌರವಾನ್ವಿತ ಸರ್ವೋಚ್ಚ ನ್ಯಾಯಲಯವು" ತಾತ್ಕಾಲಿಕ ಉದ್ಯೋಗಿಯು ಅನುಗುಣವಾದ ನಿಯಮಿತ ಕೇಡರ್‌ನಲ್ಲಿರುವ ಉದ್ಯೋಗಿಗೆ ಕನಿಷ್ಠ ವೇತನವನ್ನು ಪಾವತಿಸಲು ಅರ್ಹನಾಗಿರುತ್ತಾನೆ. ಆದ್ದರಿಂದ ಇವರಿಗೂ ಸಮಾನ ವೇತನ ನೀಡಲು ಸೂಚಿಸಿದೆ.

ಈ ಎಲ್ಲಾ ಅಂಶಗಳ ಆಧಾರದಲ್ಲಿ ➚

‘ಸಮಾಜವಾದ’ ಮತ್ತು ಸಮಾನ ಅವಕಾಶಗಳು.....

ಪುಟ 13 ರಿಂದ

ಅನೇಕ ಬಂಡವಾಳಶಾಹಿ ದೇಶಗಳು ಹೆಚ್ಚಿನ ಮಟ್ಟದ ಉತ್ತರಾಧಿಕಾರ ತೆರಿಗೆಯನ್ನು ವಿಧಿಸುತ್ತವೆ. ಜಪಾನ್‌ನಲ್ಲಿ ಈ ದರವು ಶೇ. 55 ಮತ್ತು ಇತರ ಪ್ರಮುಖ ದೇಶಗಳಲ್ಲಿ ಸುಮಾರು ಶೇ. 40ರಷ್ಟಿದೆ. ಭಾರತದಲ್ಲಿ ಉತ್ತರಾಧಿಕಾರ ತೆರಿಗೆಯೇ ಇಲ್ಲ. ಇದು ಒಂದು ಆಶ್ಚರ್ಯವೇ ಸರಿ ಮತ್ತು ಇದು ಸಮಾನ ಅವಕಾಶಗಳಿರಬೇಕೆಂಬ ವಿಚಾರದ ಮುಖಕ್ಕೆ ರಾಚುತ್ತದೆ.

ಸಂಪತ್ತಿನ ಅಸಮಾನತೆ

ಅವಕಾಶಗಳಲ್ಲಿ ಸಮಾನತೆಯ ಮೂರನೇ ಅಗತ್ಯವೆಂದರೆ, ಸಂಪತ್ತನ್ನು ಆನುವಂಶಿಕವಾಗಿ ಪಡೆಯುವುದನ್ನು ನಿಷೇಧಿಸುವುದಷ್ಟೇ ಅಲ್ಲ, ಸಂಪತ್ತಿನ ಅಂತರಗಳನ್ನು ಸಹ ಇಳಿಸಬೇಕು. ಸಂಪತ್ತು, ಸಾಮಾಜಿಕ ಸ್ಥಾನಮಾನವೂ ಸೇರಿದಂತೆ ರಾಜಕೀಯ ಬಲವನ್ನು ಮತ್ತು ಅಧಿಕಾರವನ್ನೂ ತರುತ್ತದೆ. ಅಧಿಕಾರವನ್ನು ಅಸಮಾನವಾಗಿ ಹಂಚುವ ಒಂದು ಸಮಾಜವು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುತ್ತದೆ ಎಂದು ಹೇಳಲಾಗದು. ಆದ್ದರಿಂದ ಸಂಪತ್ತನ್ನು ಮಕ್ಕಳಿಗೆ ಆನುವಂಶಿಕವಾಗಿ ವರ್ಗಾಯಿಸಲು ಬಿಡಬಾರದು ಮಾತ್ರವಲ್ಲ, ಪೋಷಕರ ಜೀವಿತಾವಧಿಯಲ್ಲಿ ಮಕ್ಕಳಿಗೆ ಸಂಪತ್ತಿನ ಪರಿಣಾಮವಾಗಿ ಒದಗುವ ಸಲ್ಲದ ಅನುಕೂಲಗಳನ್ನು ಕೂಡ ತಡೆಯಬೇಕು. ಅದಕ್ಕಾಗಿ ಸಂಪತ್ತಿನ ಅಂತರಗಳನ್ನು ಕನಿಷ್ಟಗೊಳಿಸಬೇಕು. ಅದೇ ರೀತಿಯಲ್ಲಿ, ಸಮಾನ ಅವಕಾಶಗಳನ್ನು ಖಚಿತಪಡಿಸಬೇಕು ಎಂದಾದರೆ, ವರಮಾನದ ಅಂತರಗಳಿಗೂ ಸಹ ಕಡಿವಾಣ ಹಾಕಬೇಕು.

ನಾಲ್ಕನೆಯ ಸ್ಪಷ್ಟವಾದ ಅಗತ್ಯವೆಂದರೆ, ಆರ್ಥಿಕ ಅಸಮಾನತೆಯು ಸಂತತಿಯ ಶೈಕ್ಷಣಿಕ ಅರ್ಹತೆಯನ್ನಾಗಲಿ ಅಥವಾ ಕೌಶಲ್ಯ ಹೊಂದುವ ಮಟ್ಟವನ್ನಾಗಲಿ ತಡೆಯಲು ಬಿಡಬಾರದು. ಅದಕ್ಕಾಗಿ ಶಿಕ್ಷಣ ಪಡೆಯುವ ಮತ್ತು ಕೌಶಲ್ಯ ಹೊಂದುವ ಅವಕಾಶಗಳು ಎಲ್ಲರಿಗೂ ಸಮನಾಗಿರಬೇಕು. ಈ ಅವಕಾಶವನ್ನು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೂಲಕ ಉಚಿತವಾಗಿ ಅಥವಾ ಎಲ್ಲರಿಗೂ ಕೈಗೆಟುಕುವಷ್ಟು ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ತರಬೇತಿಯನ್ನು ಒದಗಿಸಬೇಕು. ನವ ಉದಾರವಾದದ ಆಳ್ವಿಕೆಯಲ್ಲಿ ನಮ್ಮ ದೇಶದಲ್ಲಿ ಮಾತ್ರವಲ್ಲ, ಇತರ ಹಲವಾರು ದೇಶಗಳಲ್ಲಿಯೂ ಸಹ ಶಿಕ್ಷಣ ಕ್ಷೇತ್ರದಲ್ಲಿ ಜರುಗುತ್ತಿರುವ ಖಾಸಗೀಕರಣವು ಅಪಾರ ಸಂಖ್ಯೆಯ ವಿದ್ಯಾರ್ಥಿಗಳನ್ನು ಶಿಕ್ಷಣದ ವ್ಯಾಪ್ತಿಯಿಂದ ಹೊರಗಿಡುತ್ತದೆ. ಈ ಕ್ರಮವು ಅವಕಾಶಗಳ ಸಮಾನತೆಯ ಒಂದು ವಿಡಂಬನೆಯಾಗುತ್ತದೆ. ಆದ್ದರಿಂದ, ಉತ್ತಮ ಗುಣಮಟ್ಟದ ಮತ್ತು ಎಲ್ಲರಿಗೂ ಕೈಗೆಟುಕುವ ಸಾರ್ವಜನಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕು. ಅಂತಹ ಒಂದು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ವಾಸ್ತವವಾಗಿ ಇರುವಾಗಲೂ, ದುಬಾರಿ ಶುಲ್ಕ ವಿಧಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳು ಇರುವವರೆಗೆ, ಅವುಗಳಿಗೆ ಒಂದು ಸುಳ್ಳು ಪ್ರತಿಷ್ಠೆ ಅಂಟಿಕೊಂಡಿರುತ್ತದೆ. ನೇಮಕಾತಿಗಳನ್ನು ಇಂತಹ ದುಬಾರಿ ಶುಲ್ಕದ ಸಂಸ್ಥೆಗಳಿಂದ ಮಾಡಿಕೊಳ್ಳುವ ಒಲವು ಇರುವುದರಿಂದಾಗಿ ಇದು ಸಮಾನ ಅವಕಾಶಗಳನ್ನು ದುರ್ಬಲಗೊಳಿಸುತ್ತದೆ. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಿಗಿಂತ ಹೆಚ್ಚಿನ ಶುಲ್ಕವನ್ನು ವಿಧಿಸುವಂತಿಲ್ಲ ಎಂದು ನಿಯಂತ್ರಿಸುವ ಮೂಲಕ ಅವುಗಳನ್ನು ಎದುರಿಸಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವು ದತ್ತಿ ಸಂಸ್ಥೆಗಳು ಮಾತ್ರವೇ ಆಗಿರಬಹುದು.

ಐದನೇ ಅಗತ್ಯವು ಆರೋಗ್ಯ ರಕ್ಷಣೆಗೆ ಸಂಬಂಧಿಸುತ್ತದೆ. ಇಲ್ಲಿಯೂ ಸಹ ಅದೇ ಪರಿಗಣನೆಗಳು ನಿಖರವಾಗಿ ಅನ್ವಯಿಸುತ್ತವೆ. ಸರ್ಕಾರದ ಆಶ್ರಯದಲ್ಲಿ ಪೂರ್ಣ ಉಚಿತವಾಗಿ ಅಥವಾ ಎಲ್ಲರಿಗೂ ಕೈಗೆಟುಕುವ ಮತ್ತು ಹೆಸರಿಗಷ್ಟೆ ಶುಲ್ಕ ಎನ್ನುವ ಒಂದು ಉತ್ತಮ-ಗುಣಮಟ್ಟದ ರಾಷ್ಟ್ರೀಯ ಆರೋಗ್ಯ ಸೇವೆಯನ್ನು ಸಾರ್ವತ್ರಿಕವಾಗಿ ಒದಗಿಸುವುದು ಅವಕಾಶಗಳ ಸಮಾನತೆಗೆ ಒಂದು ಅತ್ಯಗತ್ಯ ಸ್ಥಿತಿಯಾಗುತ್ತದೆ.

ವರ್ಗವೈಷಮ್ಯಗಳಿರದ ಸಮಾಜದಲ್ಲಿ ಮಾತ್ರ

ಸಮಾನ ಅವಕಾಶಗಳು ಒದಗುವಂತೆ ಖಚಿತಪಡಿಸಿಕೊಳ್ಳಲು ಇವು ಸ್ಪಷ್ಟವಾದ ಮತ್ತು ಕನಿಷ್ಠವಾದ ಕೆಲವು ಅವಶ್ಯಕತೆಗಳಾಗಿವೆ. ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಕಲ್ಯಾಣ ಪ್ರಭುತ್ವವನ್ನು ನಿರ್ಮಿಸಿದ ಯುದ್ಧಾನಂತರದ ಸಾಮಾಜಿಕ ಪ್ರಜಾಪ್ರಭುತ್ವವು ನಿರುದ್ಯೋಗವನ್ನು ಕನಿಷ್ಠ ಮಟ್ಟಕ್ಕೆ (1960ರ ದಶಕದ ಆರಂಭದಲ್ಲಿ ಬ್ರಿಟನ್‌ನಲ್ಲಿ ನಿರುದ್ಯೋಗವು ಸುಮಾರು ಶೇ. 2ರಷ್ಟು ಕೆಳಗಿತ್ತು) ತರುವಲ್ಲಿ ಕೀನ್ಸ್ ಅವರ ಬೇಡಿಕೆ-ನಿರ್ವಹಣೆ ವಿಧಾನವನ್ನು ಬಳಸಿಕೊಂಡಿತು. ಆದರೂ ಅದು ನೈಜ ಸಮಾನ ಅವಕಾಶಗಳನ್ನು ಸಾಧಿಸುವಲ್ಲಿಯೂ ಯಶಸ್ವಿಯಾಗಲಿಲ್ಲ ಅಥವಾ ಸುದೀರ್ಘ ಬಾಳಿಕೆಯ ಸಾಧನೆಯೂ ಆಗಲಿಲ್ಲ (ಅರವತ್ತರ ದಶಕದ ಕೊನೆಯಲ್ಲಿ ಮತ್ತು ಎಪ್ಪತ್ತರ ದಶಕದ ಆರಂಭದಲ್ಲಿ ಉಂಟಾದ ಹಣದುಬ್ಬರದ ಬಿಕ್ಕಟ್ಟಿನಿಂದ ಅದು ಕುಸಿದು ಬಿತ್ತು) ಎಂಬ ಅಂಶವು ಮಹತ್ವದ್ದಾಗಿದೆ. ಇದು ವರ್ಗದ ಆಧಾರದಲ್ಲಿ ವಿಭಜನೆ ಮುಂದುವರೆಯುತ್ತಿರುವ ಸಮಾಜದಲ್ಲಿ ಅವಕಾಶಗಳಲ್ಲಿ ಸಮಾನತೆಯನ್ನು ಸಾಧಿಸುವುದು ಅಸಾಧ್ಯ ಎಂಬುದನ್ನು ತೋರಿಸುತ್ತದೆ.

ಕಲ್ಯಾಣ ಪ್ರಭುತ್ವವನ್ನು ನುಂಗಿ ಹಾಕಿದ ಹಣದುಬ್ಬರದ ಬಿಕ್ಕಟ್ಟು ಉನ್ನತ ಉದ್ಯೋಗ ದರದ ಪರಿಣಾಮವಾಗಿತ್ತು ಮತ್ತು ಮುಂದುವರೆದ ಈ ದೇಶಗಳು ಈ ಹಿಂದೆ ವಸಾಹತುಶಾಹಿ ಅಡಿಯಲ್ಲಿ ತಮಗೆ ಒದಗುತ್ತಿದ್ದ ದೂರದ ದೇಶಗಳ ಪ್ರಾಥಮಿಕ ಸರಕು ಉತ್ಪಾದಕರ ಮೇಲಿನ ನಿಯಂತ್ರಣವನ್ನು ಸಂಪೂರ್ಣವಾಗಿ ಕಳೆದುಕೊಂಡದ್ದರ ಪರಿಣಾಮವಾಗಿತ್ತು. ಈ ಬೆಳವಣಿಗೆಗಳು ವರ್ಗಸಂಘರ್ಷವನ್ನು ತೀವ್ರಗೊಳಿಸಿದವು ಮತ್ತು ಅದರ ಪರಿಣಾಮವೇ ಆ ಹಣದುಬ್ಬರ. ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನದ ಕಾರಣದಿಂದ ವರ್ಗ ವೈಷಮ್ಯಗಳು ಇರದ ಒಂದು ಸಮಾಜದಲ್ಲಿ ಮಾತ್ರ ಅವಕಾಶಗಳಲ್ಲಿ ನಿಜವಾದ ಸಮಾನತೆ ಇರುವುದು ಸಾಧ್ಯ.

ಇರಲಿ, ಈ ಬಗ್ಗೆ ವಾದವನ್ನು ಮುಂದುವರೆಸುವುದು ಬೇಡ. ಸಮಾನತೆಯಿರುವ ಒಂದು ಕಲ್ಯಾಣ ಪ್ರಭುತ್ವವನ್ನು ಒದಗಿಸುವುದಕ್ಕೆ ಸುಪ್ರೀಂ ಕೋರ್ಟ್ ಬದ್ಧವಾಗಿರಲಿ.

ಗುಜರಾತ್ ಸಿವಿಲ್ ಸೇವೆಗಳ (ವರ್ಗೀಕರಣ ಮತ್ತು ನೇಮಕಾತಿ) ಸಾಮಾನ್ಯ ನಿಯಮಗಳು 1967ರ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು 3 ಮತ್ತು 4ನೇ ದರ್ಜೆಯ ನೌಕರರಂತೆ ಖಾಯಂಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 6 ತಿಂಗಳುಗಳಿಗೆ ಜಂಟಿ ನೀತಿಯನ್ನು ರೂಪಿಸಬೇಕು ಎಂದು ಗುಜರಾತ್ ಹೈಕೋರ್ಟ್‌ನ ಏಕ ಸದಸ್ಯ ಪೀಠದಲ್ಲಿ ನ್ಯಾಯಮೂರ್ತಿ ನಿಖಿಲ್ ಕರಿಯಲ್ ಅವರು ತೀರ್ಪು ಕೊಟ್ಟಿದ್ದಾರೆ. ಜಂಟಿ ನೀತಿ ರೂಪಿಸಿ ಖಾಯಂಗೊಳಿಸುವ ತನಕ ಕನಿಷ್ಠ ವೇತನವನ್ನು ಪಡೆಯಲು ಅರ್ಹರಿದ್ದಾರೆ ಎಂದು ತೀರ್ಪಿನಲ್ಲಿ ನಿರ್ದೇಶಿಸಲಾಗಿದೆ.

ಐಸಿಡಿಎಸ್ ಯೋಜನೆ

ಪಾಲನೆ ಮತ್ತು ಪೋಷಣೆ ಸಂವಿಧಾನಬದ್ಧ ನಿರ್ದೇಶನ. ಈ ನಿರ್ದೇಶನವನ್ನು ಕೇಂದ್ರ ಸರ್ಕಾರ ಗರ್ಭಿಣಿ ಮಹಿಳೆಯರಿಗೆ ಹಾಗೂ ಮಗುವಿಗೆ 6 ವರ್ಷ ತುಂಬುವತನಕ ಮಗು ಮತ್ತು ಬಾಣಂತಿಯರಿಗೆ ಪೌಷ್ಠಿಕ ಆಹಾರ, ಗರ್ಭಿಣಿ ತಾಯಿಯ ಆರೋಗ್ಯ, ಬಾಣಂತಿಯ ಮಗುವಿಗೆ ಹಾಲುಣಿಸುವ ವಿಧಾನ ಮತ್ತು ಅದರ ಆರೋಗ್ಯ ಸೇವೆ ಎಲ್ಲವೂ ಐಸಿಡಿಎಸ್ ಯೋಜನೆಯಡಿಯ ಮುಖಾಂತರ ನಡೆಸಲಾಗುತ್ತದೆ. ಈ ಮಕ್ಕಳಿಗೆ ಮತ್ತು ತಾಯಂದಿರಿಗೆ ಕೊಡುವ ಪೌಷ್ಠಿಕ ಆಹಾರ 2013ರಲ್ಲಿ ಬಂದ ಆಹಾರ ಭದ್ರತಾ ಕಾಯ್ದೆಯ ಪ್ರಕಾರ ಪಾಲನೆ ಮತ್ತು ಪೋಷಣೆಯನ್ನು ಮಾಡಲಾಗುತ್ತದೆ. 2009ರ ಕಡ್ಡಾಯ ಶಿಕ್ಷಣ ಕಾಯ್ದೆಯ ಪ್ರಕಾರ 6 ವರ್ಷದೊಳಗಿನ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುತ್ತದೆ.

1974ಮಕ್ಕಳ ರಾಷ್ಟ್ರೀಯ ನೀತಿಯಡಿ ಐಸಿಡಿಎಸ್ ಪ್ರಾರಂಭವಾಗಿ ಎರಡು ಕಾನೂನುಗಳಡಿಯಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದರೂ ಕೂಡಾ, ಸರ್ಕಾರಗಳು ಈ ಯೋಜನೆಯನ್ನು 50 ವರ್ಷಗಳಿಂದ ಯೋಜನೆಯನ್ನಾಗಿಯೇ ಉಳಿಸಿ, ಇದರ ಆಧಾರ ಸ್ತಂಭಗಳಂತೆ ದುಡಿಯುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಗೌರವಧನದ ಆಧಾರದಲ್ಲಿ ದುಡಿಸುತ್ತಿವೆ.

ಕಾನೂನಾತ್ಮಕವಾದ ಸಾಮೂಹಿಕ ಚೌಕಾಸಿಯ ಹಕ್ಕು ಇಲ್ಲ

ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಒಕ್ಕೂಟ(ಸಿಐಟಿಯು)ದ ಅಡಿಯಲ್ಲಿ ಸಂಘಟಿತರಾಗಿ, ದೇಶದಾದ್ಯಂತ ನಿರಂತರವಾದ ಹಲವಾರು ಚಳುವಳಿಗಳನ್ನು ನಡೆಸುತ್ತಲೇ ಬಂದಿದ್ದಾರೆ. ಆದರೆ, ಯಾವುದೇ ಕಾರ್ಮಿಕ ಕಾನೂನುಗಳು ಹಾಗೂ ಸೇವಾ ನಿಯಮಾವಳಿಗಳು ಇವರಿಗೆ ಇಲ್ಲದಿದ್ದರಿಂದ ಸರ್ಕಾರಗಳ ಬಳಿ ಕಾನೂನಾತ್ಮಕವಾದ ಸಾಮೂಹಿಕ ಚೌಕಾಸಿಯ ಹಕ್ಕು ಇಲ್ಲ. ಕೆಲವು ಸವಲತ್ತುಗಳನ್ನು ಪಡೆಯಲು ಹತ್ತಾರು ದಿನಗಳ ಕಾಲ ಮುಷ್ಕರಗಳನ್ನು ನಡೆಸಿ, ಹೆಚ್ಚು ಮಹಿಳೆಯರು ಒಂದೆಡೆ ಅಣಿ ನೆರೆಯುವ ಮುಖಾಂತರವೇ ಒಂದಷ್ಟು ಗೌರವಧನ ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಎಷ್ಟೇ ಹೋರಾಟಗಳನ್ನು ನಡೆಸಿದರೂ ಪ್ರಭುತ್ವ ಅಯ್ಯೋ ಪಾಪ ಎನ್ನುವ ಭಾವನೆಗಳಿಂದಲೇ 500-1000 ರೂ. ಗೌರವಧನವನ್ನು ಹೆಚ್ಚಳ ಮಾಡುವ ಪದ್ಧತಿಯಿದೆ.

ಅಂದು ಸುಪ್ರಿಂ ಕೋರ್ಟ್, ಇಂದು ಹೈಕೋರ್ಟ್ ತೀರ್ಪುಗಳು

ಗುಜರಾತ್ ಹೈಕೋರ್ಟ್‌ನಲ್ಲಿ ವಿವಾದ ಎತ್ತಿದ್ದು 2016ರಲ್ಲಿ. ತೀರ್ಪು ಬಂದಿದ್ದು 2-8-2024 ರಂದು. ಅಂದರೆ 8 ವರ್ಷಗಳ ನಂತರ ಇಂತಹ ಐತಿಹಾಸಿಕ ತೀರ್ಪು ಬಂದಿದೆ. ಈ ತೀರ್ಪನ್ನು ಅಪ್ಲೋಡ್ ಮಾಡಿದ 6 ತಿಂಗಳೊಳಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿ ನೀತಿಯನ್ನು ರಚಿಸಬೇಕು ಎಂದು ಹೇಳಿದೆ. ಅಪ್ಲೋಡ್ ಮಾಡಿದ್ದು 30 ಅಕ್ಟೋಬರ್ 2024. ಅಂದರೆ ಈಗಾಗಲೇ ಒಂದು ತಿಂಗಳಾಯಿತು.

ಮಾನವನ ಸೂಚ್ಯಂಕದ ಮೌಲ್ಯಮಾಪನದಲ್ಲಿ ಭಾರತವನ್ನು ಗುರ್ತಿಸಬೇಕಾದರೆ ಈ ಮಹಿಳೆಯ ದುಡಿಮೆಯಿಂದ ಬರುವ ಫಲಿತಾಂಶ ಅಂದರೆ, ಮರಣ ದರ, ಅಪೌಷ್ಠಿಕತೆ, ಜನನ ದರ, ರಕ್ತಹೀನತೆ, ಮುಂತಾದ ಅಂಶಗಳ ಆಧಾರದಲ್ಲಿಯೇ ಗುರ್ತಿಸುವುದು. ಈ ಹಿನ್ನಲೆಯಲ್ಲಿ ಗುಜರಾತ್‌ನಲ್ಲಿ ಹಿಂದೆ "ಅಂಗನವಾಡಿ ಕರ್ಮಚಾರಿ ಯೂನಿಯನ್ (ಸಿಐಟಿಯು ಸಂಯೋಜಿತ)" ಅಂಗನವಾಡಿ ನೌಕರರಿಗೆ ಗ್ರ್ಯಾಚ್ಯುಟಿ ಕೊಡಬೇಕೆಂದು ಕಾನೂನಿನ ಹೋರಾಟ ಮಾಡಿ, 2022 ಏಪ್ರಿಲ್ 25ರಂದು ಸುಪ್ರಿಂ ಕೋರ್ಟ್‌ನ ಮುಖಾಂತರ ಗೆಲುವು ಸಾಧಿಸಿತ್ತು. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು 1972 ಗ್ರ್ಯಾಚ್ಯುಟಿ ಪಾವತಿ ಕಾಯ್ದೆಯಡಿ ಅರ್ಹರೆಂದು ಸುಪ್ರಿಂ ಕೋರ್ಟ್ ತೀರ್ಪು ಕೊಟ್ಟು 2 ವರ್ಷಗಳಾಯಿತು. ಇದು ಗುಜರಾತ್‌ನಲ್ಲಿ ಜಾರಿಯಾಯಿತು, ಕರ್ನಾಟಕದಲ್ಲಿ ಆದೇಶ ಆಗಿದೆಯಾದರೂ ಇನ್ನೂ ಜಾರಿಯಾಗಲಿಲ್ಲ. ಉಳಿದ ರಾಜ್ಯಗಳಲ್ಲಿ ಎಲ್ಲಿಯೂ ಕೂಡಾ ಈ ಆದೇಶವನ್ನು ಜಾರಿ ಮಾಡಲಿಲ್ಲ. ಹಾಗೆಯೇ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಸುಪ್ರಿಂ ಕೋರ್ಟ್ ಹಲವು ಬಾರಿ ತೀರ್ಪುಗಳನ್ನು ಕೊಟ್ಟಿದೆ. ಆದರೆ ಪ್ರಭುತ್ವಗಳೆ ಇದರ ಮೊದಲ ಉಲ್ಲಂಘನೆ ಮಾಡುತ್ತಿದ್ದಾರೆ. ಹಲವಾರು ದೂರುಗಳಲ್ಲಿ "ತೀರ್ಪಿನ ಉಲ್ಲಂಘನೆ" ಎಂದು ಕೋರ್ಟ್‌ಗಳಿಗೂ ಹೋದ ನೂರಾರು ಉದಾಹರಣೆಗಳಿವೆ. ಆದರೆ ಜಾರಿ ತುಂಬಾ ಕಡಿಮೆ.

ಚಳುವಳಿಗಳಿಗೆ ದಾರಿದೀಪವಾದ ತೀರ್ಪು

50 ವರ್ಷಗಳ ಇತಿಹಾಸವಿರುವ ಐಸಿಡಿಎಸ್ ಯೋಜನೆಯನ್ನು ಇನ್ನೂ ಕಾಯ್ದೆ ರೂಪಿಸದೇ ಯೋಜನೆಯನ್ನಾಗಿಯೇ ಇಟ್ಟಿರುವುದು ಸರ್ಕಾರಗಳ ತಾರತಮ್ಯ ಮತ್ತು ಅದರ ಪರಿಕಲ್ಪನೆಗಳ ಮನಸ್ಥಿತಿಯನ್ನು ತೋರಿಸುತ್ತದೆ. ದೇಶಾದ್ಯಂತ ಅಂಗನವಾಡಿ ನೌಕರರ ಪ್ರಬಲ ಚಳುವಳಿಗಳು ನಿರಂತರವಾಗಿ ನಡೆಯುತ್ತಲೇ ಇದೆ. ಈ ಚಳುವಳಿಗಳ ಪರಿಣಾಮ "ಯಾವ ಸರ್ಕಾರಗಳು ಅಂಗನವಾಡಿ ನೌಕರರನ್ನು ಕಡೆಗಣಿಸಲ್ಪಟ್ಟಿದ್ದಾವೆಯೋ" ಅಂತಹ ಸರ್ಕಾರಗಳೇ ಈಗ ಅಂಗನವಾಡಿ ನೌಕರರ ಸಂಘಗಳ ಬಳಿ "ಸಾಮೂಹಿಕ ಚೌಕಾಸಿ" ಮಾಡುವ ಹಂತಕ್ಕೆ ತಲುಪುವಂತಾಗಿದೆ.

ಈ ಚಳುವಳಿಗಳ ಕಾರಣದಿಂದ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಇವರ ಬಗ್ಗೆ ಯೋಚಿಸುವಂತೆ ಮಾಡಲು ಸಾಧ್ಯವಾಗಿದೆ. ಸುಪ್ರಿಂ ಕೋರ್ಟ್ ತೀರ್ಪು ಮತ್ತು ಗುಜರಾತ್ ಹೈಕೋರ್ಟ್ ತೀರ್ಪುಗಳು ಅಂಗನವಾಡಿ ಕಾರ್ಯಕರ್ತೆಯರು ನಡೆಸಿದ ಚಳುವಳಿಗಳು ಮತ್ತು ಅವರು ಎತ್ತಿರುವ ಬೇಡಿಕೆಗಳು "ನ್ಯಾಯಯುತ"ವಾಗಿದೆ ಎಂಬುದನ್ನು ದೃಢಪಡಿಸಿವೆ. ಈಗ ಗುಜರಾತ್ ಏಕಸದಸ್ಯ ಪೀಠ ಅಂಗನವಾಡಿ ನೌಕರರನ್ನು 3 ಮತ್ತು 4ನೇ ದರ್ಜೆಯ ನೌಕರರನ್ನಾಗಿ ಪರಿಗಣಿಸಬೇಕೆಂದು ಕೊಟ್ಟಿರುವ ಈ ತೀರ್ಪು, ಅಂಗನವಾಡಿ ನೌಕರರ ಚಳುವಳಿಗಳಿಗೆ ಮುಂದಿನ ದಿನಗಳಲ್ಲಿ ದಾರಿದೀಪವಾಗಿದೆ ಎಂಬುದನ್ನು ತೋರಿಸಿದೆ. ಇದು ಆಳುವ ವರ್ಗಕ್ಕೆ ಸೂಚನೆ ಕೊಟ್ಟಿದೆ. ಈ ತೀರ್ಪುಗಳನ್ನು ಜಾರಿ ಮಾಡಿಸಲು ಮತ್ತಷ್ಟು ಶ್ರಮಿಸಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE December 9-15, 2024 Price: Rs. 10/- Date of Publication: 6 December 2024 RNI No. KARKAN /2006/17926 Posted on 11-12-2024
Posted at BG PSO, BG - 560026 **Posted at Periodical Rate -** Rs. 2

ಚನ್ನಪಟ್ಟಣದಲ್ಲಿ ಜೆಡಿಎಸ್ ಸೋಲು:
ಬಿಜೆಪಿ ಅಪ್ಪಿಕೊಳ್ಳುವ ಪಕ್ಷಗಳ ಭವಿಷ್ಯ ಏನು?

ಸಿ.ಸಿದ್ದಯ್ಯ

ಇತ್ತೀಚೆಗೆ ನಡೆದ ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಜನತಾ ದಳ (ಜ್ಯಾತ್ಯಾತೀತ) ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಸೋತಿದ್ದಾರೆ. ಅದರ ನಾಯಕರು ಈ ಸೋಲಿಗೆ ಯಾವ್ಯಾವುದೋ ಕಾರಣಗಳನ್ನು ತೋರಿಸುತ್ತಿದ್ದಾರೆ. ಅವುಗಳಲ್ಲಿ ಮುಸ್ಲಿಮರು ಜೆಡಿಎಸ್‌ಗೆ ಮತ ಹಾಕಲಿಲ್ಲ ಎಂಬುದೊಂದು ಕಾರಣ. ಇದು ಬಹುತೇಕ ನಿಜವೂ ಆಗಿರಬಹುದು. ಆದರೆ, ಒಮ್ಮೆ ಬಿಜೆಪಿ ಅಥವಾ ಸಂಘಪರಿವಾರದ ಜೊತೆಗೂಡಿದ, ಅದರ ಜೊತೆ ಚುನಾವಣಾ ಮೈತ್ರಿ ಮಾಡಿಕೊಂಡ ಯಾವ ಪಕ್ಷಗಳೂ ಮತ್ತಷ್ಟು ಬೆಳೆಯಲು ಅಥವಾ ಇರುವ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದಕ್ಕೆ ದೇಶದಲ್ಲಿ ಹಲವಾರು ಉದಾಹರಣೆಗಳಿವೆ. ಅಂತಹ ಪಕ್ಷಗಳ ಬಲ ಕುಸಿಯುತ್ತದೆ ಅಥವಾ ಕುಸಿಯುವಂತೆ ಸಂಘಪರಿವಾರ ಮಾಡುತ್ತದೆ. ಬಿಜೆಪಿ ಅಪ್ಪುಗೆಯನ್ನು ಸಾಮಾನ್ಯವಾಗಿ ಆ ಪಕ್ಷಗಳ ಸಾವಿನ ಅಪ್ಪುಗೆಯಾಗಿ ನೋಡಲಾಗುತ್ತದೆ. ಜೆಡಿಎಸ್ ಇದಕ್ಕೆ ಹೊರತಲ್ಲ.



ಪ್ರಾದೇಶಿಕ ಪಕ್ಷಗಳ ನಾಯಕರು ಅಧಿಕಾರದ ದುರಾಸೆಗೋ ಅಥವಾ ಇಡಿ, ಸಿಬಿಐ, ಆದಾಯ ತೆರಿಗೆ ಇಲಾಖೆ ಇಂತಹ ತನಿಖಾ ಸಂಸ್ಥೆಗಳ ದಾಳಿಯ ಮೂಲಕ ಬಿಜೆಪಿ ಬೀಸುವ ಬಲೆಗೋ ಬಿದ್ದು, ಬಿಜೆಪಿ ಜೊತೆ ಚುನಾವಣಾ ಮೈತ್ರಿ ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ತಮ್ಮ ಪಕ್ಷದ ಪ್ರಾದೇಶಿಕತೆ, ಸ್ಥಳೀಯ ಭಾಷೆ ಮತ್ತು ಸಂಸ್ಕೃತಿ ರಕ್ಷಣೆಯ ಪರವಾದ ನೀತಿ ನಿಲುವುಗಳನ್ನು, ತಮ್ಮ ಜಾತ್ಯಾತೀತ ಸಿದ್ಧಾಂತಗಳನ್ನು ಬಿಟ್ಟುಕೊಡಲು ಇವರು ಸಿದ್ಧರಾಗುತ್ತಾರೆ. ಇದರಿಂದಾಗಿ ಅದುವರೆಗೂ ಬೆಂಬಲಿಸುತ್ತಿದ್ದ ಬಹಳಷ್ಟು ಜನರು ಇಂತಹ ಪಕ್ಷಗಳಿಂದ ದೂರವಾಗುತ್ತಾರೆ. ಅದುವರೆಗೂ, ಅದು ಜಾತ್ಯಾತೀತ ನಿಲುವನ್ನು ಹೊಂದಿರುವ ಪಕ್ಷ, ಅದು ತಮ್ಮ ಹಿತ ಕಾಯುವ ಪಕ್ಷ ಎಂದು ನಂಬಿ, ಜೆಡಿಎಸ್ ಅನ್ನು ಬೆಂಬಲಿಸುತ್ತಿದ್ದ ಅಲ್ಪಸಂಖ್ಯಾತ ಸಮುದಾಯವು, ಆ ಪಕ್ಷ ಹಿಂದುತ್ವವಾದಿ ಪಕ್ಷದ ಜೊತೆ ಕೈಜೋಡಿಸಿದ ನಂತರ ಸಹಜವಾಗಿಯೇ ಅದರಿಂದ ದೂರವಾಗುತ್ತಾರೆ.

ಇನ್ನು ಜೆಡಿಎಸ್ ಪಕ್ಷ ಬಿಜೆಪಿ ಜೊತೆ ಚುನಾವಣಾ ಮೈತ್ರಿ ಮಾಡಿಕೊಂಡಿದ್ದರೂ, ಬಿಜೆಪಿ ಕಾರ್ಯಕರ್ತರು ಮನಪೂರ್ವಕವಾಗಿ ಜೆಡಿಎಸ್ ಅಭ್ಯರ್ಥಿಗಳನ್ನು ಬೆಂಬಲಿಸುವುದಿಲ್ಲ. ಅದುವರೆಗೂ ಜೆಡಿಎಸ್ ಮತ್ತು ಅದರ ನಾಯಕರನ್ನು ಹೀಯಾಳಿಸಿ, ಟೀಕಿಸಿ, ಕೆಟ್ಟದಾಗಿ ಬಿಂಬಿಸಿ, ಅದರ ನಾಯಕರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ, ಜೊತೆಗೆ ಇಲ್ಲಸಲ್ಲದ ಕಥೆಗಳನ್ನು ಕಟ್ಟಿ ಸಾಮಾಜಿಕ ಜಾಲತಾಣದಲ್ಲಿ ಹರಡುತ್ತಿದ್ದ ಸಂಘಪರಿವಾರದ ಪೋಸ್ಟ್‌ಗಳನ್ನು ತಾವೂ ಹಂಚಿಕೊಂಡು ಪ್ರಚಾರ ಮಾಡುತ್ತಿದ್ದ, ಮತ್ತು ಇದನ್ನು ಪ್ರಶ್ನಿಸುವವರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ಬಿಜೆಪಿ ಅಭಿಮಾನಿಗಳು, ಈಗ ದಿಡೀರನೆ ಅಂತಹ ಪಕ್ಷ ಮತ್ತು ಅದರ ನಾಯಕರ ಪರವಾಗಿ ಪ್ರಚಾರ ಮಾಡಬೇಕು, ಅದರ ಬೆಂಬಲಕ್ಕೆ ನಿಲ್ಲಬೇಕು ಎಂದರೆ, ಅವರು ಅದನ್ನು ಮನಪೂರ್ವಕವಾಗಿ ಒಪ್ಪಲಾರರು. ಅದರಲ್ಲೂ ಆರೆಸ್ಸೆಸ್ ಕಾರ್ಯಕರ್ತರಂತೂ ಅಂತಹ ಪಕ್ಷಗಳ ಅಭ್ಯರ್ಥಿಗಳು ಸೋಲುವುದನ್ನೇ ಬಯಸುತ್ತಾರೆ. ಏಕೆಂದರೆ, ಆ ಮೈತ್ರಿ ಪಕ್ಷ ಗೆಲುವು ಸಾಧಿಸಿದರೆ, ಅದು ತಮ್ಮ ಕ್ಷೇತ್ರದಲ್ಲಿ ಬೆಳವಣಿಗೆ ಸಾಧಿಸಿದರೆ, ಮುಂದಿನ ಚುನಾವಣೆಗಳಲ್ಲಿಯೂ ಆ ಕ್ಷೇತ್ರದ ಮೇಲೆ ಆ ಮೈತ್ರಿ ಪಕ್ಷ ಹಕ್ಕು ಚಲಾಯಿಸುತ್ತದೆ. ಇದರಿಂದಾಗಿ ಬಿಜೆಪಿಗೆ ಆ ಕ್ಷೇತ್ರದಲ್ಲಿ ಮುಂದೆಯೂ ಅವಕಾಶ ಸಿಗುವುದಿಲ್ಲ. ಗೆಲುವು ಅನಿವಾರ್ಯವಲ್ಲದ ಸಂದರ್ಭದಲ್ಲಿ ಮಿತ್ರ ಪಕ್ಷ ಸೋಲುವುದನ್ನು ಸಂಘಪರಿವಾರ ಬಯಸುತ್ತದೆ.

ಕಾರ್ಯಕರ್ತರಲ್ಲಿ ಕೋಮು ದ್ವೇಷ ತುಂಬುವ ಮೂಲಕ

ಮತ್ತೊಂದು ವಿಧವೆಂದರೆ, ಬಿಜೆಪಿ ಮತ್ತು ಆರೆಸ್ಸೆಸ್‌ನ ಸ್ಥಳೀಯ ಕಾರ್ಯಕರ್ತರು ಹಾಗೂ ನಾಯಕರು ಮೈತ್ರಿ ಪಕ್ಷಗಳ ಸಕ್ರಿಯ ಕಾರ್ಯಕರ್ತರನ್ನು ಗುರುತಿಸಿ, ಅವರ ಮನದಲ್ಲಿ ಕೋಮು ದ್ವೇಷ ತುಂಬುವ ಮೂಲಕ ಅವರನ್ನು ತಮ್ಮತ್ತ ಸೆಳೆದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಮೊದಲೇ ಮೃದು ಹಿಂದುತ್ವದ ಮನೋಭಾವ ಹೊಂದಿರುವ ಬಿಜೆಪಿಯೇತರ ಪಕ್ಷಗಳ ಕಾರ್ಯಕರ್ತರ ಮನದಲ್ಲಿ ಹಿಂದುತ್ವ ಮತ್ತಷ್ಟು ಬಲಗೊಳ್ಳುತ್ತದೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡ ನಂತರ ಜೆಡಿಎಸ್‌ನ ಬಹಳಷ್ಟು ಕಾರ್ಯಕರ್ತರು ಕೋಮುವಾದಿಗಳಾಗಿ, ಹಿಂದುತ್ವವಾದಿ ಪರವಾಗಿ ಮಾತನಾಡಲು ಪ್ರಾರಂಭಿಸಿರುವುದನ್ನು ಕಾಣಬಹುದಾಗಿದೆ. ಮುಂದಿನ ದಿನಗಳಲ್ಲಿ ಜೆಡಿಎಸ್ ಬಿಜೆಪಿಯಿಂದ ದೂರವಾದರೂ, ಜೆಡಿಎಸ್‌ನ ಬಹುತೇಕ ಕಾರ್ಯಕರ್ತರು ಮತ್ತು ಬೆಂಬಲಿಗರು ಅದರಿಂದ ದೂರವಾಗಿ ಬಿಜೆಪಿ ಬೆಂಬಲಿಗರಾಗಿ ಬದಲಾಗುತ್ತಾರೆ. ಏಕೆಂದರೆ, ಜೆಡಿಎಸ್ ಅಥವಾ ಮತ್ತಾವುದೇ ಬಿಜೆಪಿಯೇತರ ಪಕ್ಷಗಳಿಗಿಂತ ಹಿಂದುತ್ವ ಪೋಷಿಸುವಲ್ಲಿ ಬಿಜೆಪಿ ಹೆಚ್ಚು ಕಾರ್ಯಶೀಲವಾಗಿರುತ್ತದೆ. ಹೀಗಾಗಿ, ಒಮ್ಮೆ ಬಿಜೆಪಿ ಅಥವಾ ಆರೆಸ್ಸೆಸ್ ಸಂಪರ್ಕಕ್ಕೆ ಬರುವ ಮೃದು ಹಿಂದುತ್ವವಾದಿಗಳು ತಮ್ಮ ಮೊದಲಿನ ಪಕ್ಷಕ್ಕಿಂತ, ಬಿಜೆಪಿಯನ್ನೇ ಹೆಚ್ಚಾಗಿ ನಂಬುತ್ತಾರೆ. ಅಧಿಕಾರ, ಹಣದ ಆಮಿಷ ಮತ್ತು ಸಿಡಿ, ಇಡಿ, ಐಟಿ, ಸಿಬಿಐ ನಂತಹ ತನಿಖಾ ಸಂಸ್ಥೆಗಳ ದಾಳಿ... ಹೀಗೆ ಹಲವು ಅಸ್ತ್ರಗಳ ಮೂಲಕ ಮಿತ್ರ ಪಕ್ಷಗಳ ಕೆಲವು ಹಿರಿಯ ನಾಯಕರನ್ನೂ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತಾರೆ. ಈ ರೀತಿ ಜೆಡಿಎಸ್‌ನ ಶಕ್ತಿ ಕ್ರಮೇಣ ಕುಂದುತ್ತಾ ಹೋಗುತ್ತದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಮತ ಪ್ರಮಾಣವು, ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಪಡೆದ ಶೇ. 18.30ರಿಂದ ಶೇ. 13.29ಕ್ಕೆ ಇಳಿದು, ಶೇ. 5.1ರಷ್ಟು ಮತ ಕಡಿಮೆಯಾಗಿದೆ. ಹೀಗಾಗಿ, 2018ರ ವಿಧಾನಸಭಾ ಚುನಾವಣೆಯಲ್ಲಿ 36 ಸ್ಥಾನಗಳಲ್ಲಿ ಜಯ ಗಳಿಸಿದ್ದ ಜೆಡಿಎಸ್ 2023ರಲ್ಲಿ 19 ಸ್ಥಾನಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು.

ಲೋಕಸಭಾ ಚುನಾವಣೆಯಲ್ಲಿ ದೇವೇಗೌಡರ ಅಳಿಯ ಡಾ.ಮಂಜುನಾಥ್ ಅವರನ್ನು ಬಿಜೆಪಿ ಚಿನ್ಹೆಯಡಿ ನಿಲ್ಲಿಸುವ ಮೂಲಕ, ಆ ಕ್ಷೇತ್ರದಲ್ಲಿದ್ದ ಜೆಡಿಎಸ್ ಮತಗಳನ್ನು ಪಡೆದ ಬಿಜೆಪಿ ಲೋಕಸಭೆಯಲ್ಲಿ ತನ್ನ ಸಂಖ್ಯಾಬಲ ಹೆಚ್ಚಿಸಿಕೊಂಡಿತು. ಮೈತ್ರಿಯ ಪರಿಣಾಮವಾಗಿ ಜೆಡಿಎಸ್‌ಗೆ 3 ಲೋಕಸಭಾ ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸಲು ಅವಕಾಶ ಸಿಕ್ಕಿತಾದರೂ, ಅದು 2 ಲೋಕಸಭಾ ಸ್ಥಾನಗಳಲ್ಲಿ ಗೆದ್ದು, ಒಟ್ಟಾರೆಯಾಗಿ ಶೇ. 5.60 ಮತಗಳನ್ನು ಪಡೆದಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡಿದ್ದ ಜೆಡಿಎಸ್ ಆರು ಸ್ಥಾನಗಳಲ್ಲಿ ಸ್ಪರ್ಧಿಸಿ, ಒಂದು ಸ್ಥಾನ ಪಡೆದು ಶೇ. 9.67ರಷ್ಟು ಮತ ಗಳಿಸಿತ್ತು. ಅಂದರೆ, ಬಿಜೆಪಿ ಜೊತೆ ಚುನಾವಣಾ ಮೈತ್ರಿ ಮಾಡಿಕೊಂಡ ನಂತರದ ಲೋಕಸಭಾ ಚುನಾವಣೆಯಲ್ಲಿ ಶೇ. 4.07 ಮತಗಳನ್ನು ಜೆಡಿಎಸ್ ಕಳೆದುಕೊಂಡಿದೆ. ಕಳೆದ ಆರು ವರ್ಷಗಳಲ್ಲಿ (2018ರಿಂದ 2024) ಜೆಡಿಎಸ್ ಕಳೆದುಕೊಂಡ ಶೇಕಡಾವಾರು ಮತ ಪ್ರಮಾಣ 12.70. ಜೆಡಿಎಸ್ ಸ್ಪರ್ಧೆ ಮಾಡಿದ ಕ್ಷೇತ್ರಗಳು ಕಡಿಮೆಯಾಗಿರುವ ಕಾರಣದಿಂದ ಅದರ ಮತಗಳಿಕೆಯ ಪ್ರಮಾಣ ಕಡಿಮೆಯಾಗಿದೆ ಎಂದುಕೊಂಡರೂ, ಜೆಡಿಎಸ್ ಸ್ಪರ್ಧೆ ಮಾಡದ ಕ್ಷೇತ್ರಗಳಲ್ಲಿ ಅದರ ಕಾರ್ಯಕರ್ತರು ಬಿಜೆಪಿ ಅಥವಾ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಿದ್ದಾರೆ ಎಂಬುದಂತೂ ಸತ್ಯ. ಮುಂದಿನ ದಿನಗಳಲ್ಲಿ ಇವರೆಲ್ಲರೂ ಮರಳಿ ಜೆಡಿಎಸ್ ಬೆಂಬಲಕ್ಕೆ ನಿಲ್ಲುತ್ತಾರೆ ಎಂಬ ಖಾತರಿಯಂತೂ ಇಲ್ಲ.

ಜೆಡಿಎಸ್ ಎರಡು ಹೋಳಾಗಲಿದೆಯೇ?

ಜೆಡಿಎಸ್ ನೊಳಗಿನ ಇತ್ತೀಚಿನ ಬೆಳವಣಿಗೆ ಗಮನಿಸಿದರೆ ಇಂತಹ ಒಂದು ಅನುಮಾನ ಮೂಡುತ್ತದೆ. ಜೆಡಿಎಸ್‌ನ ಅಧ್ಯಕ್ಷರಾಗಿದ್ದ ಸಿ.ಎಂ. ಇಬ್ರಾಹಿಂ ತಮ್ಮದೇ ನಿಜವಾದ ಜೆಡಿಎಸ್ ಎಂದು ಹೇಳುತ್ತಿದ್ದಾರೆ. ಈಗಾಗಲೇ ಜೆಡಿಎಸ್ ವರಿಷ್ಟ ಹೆಚ್.ಡಿ.ದೇವೇಗೌಡರ ಕುಟುಂಬದೊಂದಿಗೆ ಮುನಿಸಿಕೊಂಡಿರುವ ಒಕ್ಕಲಿಗ ನಾಯಕ, ಶಾಸಕ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಅವರನ್ನು ಭೇಟಿಯಾಗಿ ಇಬ್ರಾಹಿಂ ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಸೃಷ್ಟಿಸಿದೆ. ಜಿ.ಟಿ.ದೇವೇಗೌಡ ಸೇರಿದಂತೆ ಜೆಡಿಎಸ್‌ನ 12ರಿಂದ 13ಶಾಸಕರು ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆಯ ವಿಚಾರದಲ್ಲಿ ಬೇಸರಗೊಂಡಿದ್ದಾರೆ, ಅವರು ನೋವು ನುಂಗಿಕೊಂಡಿದ್ದಾರೆ ಎಂದು ಇಬ್ರಾಹಿಂ ಹೇಳಿದ್ದಾರೆ. ಮತ್ತೊಂದಡೆ ಕಾಂಗ್ರೆಸ್ ಶಾಸಕ ಸಿ.ಪಿ.ಯೋಗೇಶ್ವರ್ ಅವರು, ತಮ್ಮ ನಾಯಕರು ಒಪ್ಪಿದರೆ ಹಲವು ಜೆಡಿಎಸ್ ಶಾಸಕರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತರಲು ತಾನು ಸಿದ್ದ ಎಂದು ಬಹಿರಂಗವಾಗಿ ಹೇಳಿದ್ದಾರೆ. ಇವೆಲ್ಲಾ ಬೆಳವಣಿಗೆಗಳನ್ನು ನೋಡಿದರೆ, ಜೆಡಿಎಸ್ ಶೀಘ್ರದಲ್ಲೇ ಇಬ್ಭಾಗವಾಗುವುದು ಮತ್ತು ಕೆಲ ಶಾಸಕರಾದರೂ ಜೆಡಿಎಸ್ ತೊರೆಯುವುದು ಖಚಿತ ಎಂಬಂತೆ ಕಾಣುತ್ತಿದೆ.

ಬಿಜೆಪಿ ಜೊತೆ ಸೇರಿದ ಪಕ್ಷಗಳ ಗತಿ

ತನ್ನ ಜೊತೆ ಮೈತ್ರಿ ಮಾಡಿಕೊಳ್ಳುವ ಪಕ್ಷಗಳ ಬಲವನ್ನು ಬಿಜೆಪಿಯು ತಾನು ಪಡೆದುಕೊಳ್ಳುತ್ತದೆ. ಅದೇ ಸಮಯದಲ್ಲಿ ಅದು ತನ್ನ ದೌರ್ಬಲ್ಯಗಳನ್ನು ಮೈತ್ರಿಕೂಟದ ಬಿಜೆಪಿಯೇತರ ಪಕ್ಷಗಳ ತಲೆಯ ಮೇಲೆ ಹೊರಿಸುತ್ತದೆ ಮತ್ತು ಅವುಗಳ ಬಲವನ್ನು ಕುಗ್ಗಿಸುತ್ತದೆ. ಈ ಮೂಲಕ ಬಿಜೆಪಿ ರಾಜಕೀಯವಾಗಿ ಮತ್ತಷ್ಟು ಬಲ ಹೊಂದುತ್ತದೆ. ಬಿಜೆಪಿ ಅಪ್ಪುಗೆಯನ್ನು ಸಾಮಾನ್ಯವಾಗಿ ಸಾವಿನ ಅಪ್ಪುಗೆಯಾಗಿ ನೋಡಲಾಗುತ್ತದೆ. ಕಳೆದ 30 ವರ್ಷಗಳಲ್ಲಿ ಬಿಜೆಪಿಗೆ ಸೇರಿದ ಪಕ್ಷಗಳ ರಾಜಕೀಯ ಪ್ರಭಾವ ಕುಸಿದಿದೆ ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ.

ಶಿವಸೇನೆ ಮತ್ತು ಶಿರೋಮಣಿ ಅಕಾಲಿದಳ

ಬಿಜೆಪಿಯ ಆರಂಭಿಕ ಮೈತ್ರಿ ಪಕ್ಷಗಳಾದ ಶಿವಸೇನೆ ಮತ್ತು ಶಿರೋಮಣಿ ಅಕಾಲಿದಳದ ಪ್ರಸ್ತುತ ಸ್ಥಿತಿ ಏನಾಗಿದೆ ನೋಡಿ. 1996ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಸರ್ಕಾರ ರಚಿಸುವ ಹಕ್ಕು ಮಂಡಿಸುವ ಸಂದರ್ಭದಲ್ಲಿ, 15 ಸಂಸತ್ ಸದಸ್ಯರಿದ್ದ ಶಿವಸೇನೆ ಮತ್ತು 8 ಸಂಸತ್ ಸದಸ್ಯರಿದ್ದ ಶಿರೋಮಣಿ ಅಕಾಲಿದಳ ವಾಜಪೇಯಿ ಬೆಂಬಲವಾಗಿ ನಿಂತವು. ಆದರೆ, ಬಿಜೆಪಿಗೆ ಬೇರೆ ಪಕ್ಷಗಳನ್ನು ಸೆಳೆಯಲು ಸಾಧ್ಯವಾಗಲಿಲ್ಲ. ಇದು, ಹೊಸ ರಾಜಕೀಯ ಮೈತ್ರಿಯಾದ ಸಂಯುಕ್ತ ರಂಗ ಸರ್ಕಾರ ರಚನೆಗೆ ನಾಂದಿ ಹಾಡಿತು. ಎಚ್.ಡಿ.ದೇವೇಗೌಡರು ಪ್ರಧಾನಿಯಾದರು. 1984ರ ಸಂಸತ್ ಚುನಾವಣೆಯಲ್ಲಿ ಶಿವಸೇನೆ

ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**